ಕುಮಾರವ್ಯಾಸ ಭಾರತ ಪ್ರಸಂಗ

ಆದಿ ಪರ್ವ

(ಆಯ್ದ 611 ಪದ್ಯಗಳನ್ನು 38 ಪ್ರಸಂಗಗಳಲ್ಲಿ ನಾಟಕ ರೂಪಕ್ಕೆ ಜೋಡಿಸಿದೆ)



ಸಿ.ಪಿ.ನಾಗರಾಜ

ಕುಮಾರವ್ಯಾಸ ಭಾರತ ಪ್ರಸಂಗ

ಆದಿ ಪರ್ವ

**(ಆಯ್ದ 611 ಪದ್ಯಗಳನ್ನು 38 ಪ್ರಸಂಗಗಳಲ್ಲಿ
ನಾಟಕ ರೂಪಕ್ಕೆ ಜೋಡಿಸಿದೆ)**

ಸಿ.ಪಿ.ನಾಗರಾಜ

ನಾಗು ಸ್ಮಾರಕ ಪ್ರಕಾಶನ
75, 5ನೆಯ ಕ್ರಾಸ್, 'ಎ 'ಬ್ಲಾಕ್, ಕ್ರಿಷ್ಣ ಗಾರ್ಡನ್
ಆರ್.ವಿ.ಕಾಲೇಜು ಪೋಸ್ಟ್, ಬೆಂಗಳೂರು–560 059

KUMARAVYASA BHARATA PRASANGA: ADIPARVA
by C.P.Nagaraja, published by Nagu Smaraka Prakashana
75, 5th Cross, 'A' block, Krishna Garden, Bengaluru-560059
Mobile: 9986347521

First Edition	:	2026
Page	:	196
Price	:	**Rs. 260/-**
Paper	:	70 GSM Maplitho
Size	:	Demy 1/8
Copy right	:	Author
Cover Design	:	Anil Revoor
Page Layout	:	Harish K.R., 8553184584

ಮುದ್ರಕರು
ಟೆಕ್ ಫಿಜ್ ಇಂಕ್
ಬೆಂಗಳೂರು

ಮುನ್ನುಡಿ

ಕುಮಾರವ್ಯಾಸ ಕವಿಯ ಕರ್ಣಾಟ ಭಾರತ ಕಥಾಮಂಜರಿ ಸುಮಾರು ಐದು ಶತಮಾನಗಳಿಂದ ಹಲವು ಬಗೆಗಳಲ್ಲಿ ಕನ್ನಡ ಜನಮಾನಸವನ್ನು ಸೆಳೆದುಕೊಂಡಿದೆ. ಓದಲಾರದವರೂ ಕೂಡ ಗಮಕ ವ್ಯಾಖ್ಯಾನ ಪರಂಪರೆಯ ಮೂಲಕ ಕುಮಾರವ್ಯಾಸ ಭಾರತಕ್ಕೆ ನಿಕಟವಾಗಿದ್ದಾರೆ. ಹತ್ತೂ ಪರ್ವಗಳನ್ನು ಬೇರೆ ಬೇರೆ ಕೃತಿಗಳನ್ನಾಗಿ ಪ್ರತಿಗಳನ್ನು ಮಾಡುವ ವಿಧಾನವನ್ನು ಅನುಸರಿಸಿದ್ದರಿಂದ ಈ ಕೃತಿಯ ಸಾವಿರಾರು ಹಸ್ತಪ್ರತಿಗಳು ಓದಲು ದೊರೆತವು.

ಕಳೆದ ಶತಮಾನದಲ್ಲಿ ವಿದ್ವಾಂಸರು ಈ ಕೃತಿಯನ್ನು 'ಸರಿಪಡಿಸುವ' ಕೆಲಸದಲ್ಲಿ ತೊಡಗಿದರು. ಹಲವು ವ್ಯಾಖ್ಯಾನಕಾರರು ಗದ್ಯ ರೂಪಕ್ಕೆ ಪರಿವರ್ತಿಸಿ ಜನರಿಗೆ ಓದಿ ಅರಿತುಕೊಳ್ಳಲು ನೆರವಾದರು. ಬೇರೆ ಬೇರೆ ದೃಶ್ಯ ಶ್ರವ್ಯ ಮಾಧ್ಯಮಗಳ ಮೂಲಕ ಈ ಕೃತಿಯನ್ನು ಪರಿಚಯಿಸುವ ಕೆಲಸ ಮುಂದುವರೆದಿದೆ. ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಒಂದಲ್ಲ ಒಂದು ಹಂತದಲ್ಲಿ ಕುಮಾರವ್ಯಾಸ ಭಾರತದ ಪದ್ಯಗಳನ್ನು ಓದಿಯೇ ಇರುತ್ತಾರೆ.

ಹೀಗಿರುವಾಗ ಸಿ.ಪಿ.ನಾಗರಾಜ ಅವರು ಇನ್ನೊಂದು ಪ್ರಯತ್ನದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಕನ್ನಡ ಕಾವ್ಯಗಳು ಕತೆಯನ್ನು ಹೇಳುವಾಗ ನಿರೂಪಣೆಯ ಜೊತೆಗೆ ನಾಟಕೀಯಗೊಳಿಸುವ ದಾರಿಯನ್ನು ಹಿಡಿಯುತ್ತವೆ. ಇದು ತಿಳಿದಿರುವ ಸಂಗತಿಯೇ ಆಗಿದೆ. ಬೇರೆ ಬೇರೆ ಕವಿಗಳಲ್ಲಿ ಈ ನಾಟಕೀಯತೆಯ ಪ್ರಮಾಣ ಬದಲಾಗುತ್ತದೆ.

ಕುಮಾರವ್ಯಾಸ ಎರಡು ಬಗೆಯಲ್ಲಿ ಈ ನಾಟಕೀಯತೆಯನ್ನು ಅಳವಡಿಸಿಕೊಂಡಿದ್ದಾನೆ. ಪಾತ್ರಗಳ ಸಂಭಾಷಣೆಯನ್ನು ಇರುವಂತೆಯೇ ನಿರೂಪಿಸುವುದು ಒಂದು ವಿಧಾನ. ಹಾಗಲ್ಲದೆ ದೇಹಭಾಷೆಯ ಸೂಕ್ಷ್ಮಗಳನ್ನು ನಿರೂಪಿಸುವ ಮೂಲಕವೂ ಸನ್ನಿವೇಶದ ನಾಟಕೀಯತೆಯನ್ನು ಹೊರಪಡಿಸುತ್ತಾನೆ. ಸಂಧಾನಕ್ಕೆ ಹೋದ ಕೃಷ್ಣನು ಕರ್ಣನನ್ನು ಭೇಟಿ ಮಾಡಿದಾಗ 'ತೊಡೆಸೋಂಕು'ವಂತೆ ಹತ್ತಿರಕ್ಕೆ ಕರೆದು ಕೂರಿಸಿಕೊಂಡ ಎಂದು ಕವಿ ಹೇಳುತ್ತಾನೆ. ಹೀಗೆ ನಡೆದುಕೊಳ್ಳುವಾಗ ಕೃಷ್ಣನ ಉದ್ದೇಶ ಏನಿತ್ತೆಂಬುದನ್ನು ಮಾತುಗಳಲ್ಲಿ ವಿವರಿಸುವ ಬದಲಿಗೆ ಅವನ ಈ ನಡವಳಿಕೆಯ ಮೂಲಕ ಸೂಚಿಸುತ್ತಾನೆ. ಇಂತಹ ನೂರಾರು ವರ್ಣನೆಗಳು ಈ ಕಾವ್ಯದಲ್ಲಿವೆ.

ಈಗ ಸಿ.ಪಿ.ನಾಗರಾಜ ಅವರು ಕುಮಾರವ್ಯಾಸ ಭಾರತ ಕಾವ್ಯದಲ್ಲಿರುವ ಪಾತ್ರಗಳ ಸಂಭಾಷಣಾ ಭಾಗಗಳನ್ನು ಹೊರದೆಗೆದು ನಾಟಕದಂತೆ ಜೋಡಿಸಿಕೊಟ್ಟಿದ್ದಾರೆ. ಈಗಾಗಲೇ ಕನ್ನಡದ ಹಲವು ಕಾವ್ಯಗಳನ್ನು ಈ ಮಾದರಿಗೆ ಅವರು ಅಳವಡಿಸಿದ್ದಾರೆ. ಅದೇ ಮಾದರಿಯ ಕೆಲಸ ಇಲ್ಲಿಯೂ ಮುಂದುವರಿದಿದೆ.

ಪದ್ಯಗಳ ರೂಪದಲ್ಲಿ ಕಾವ್ಯವನ್ನು ಓದುವವರಿಗೆ ಈ ನಾಟಕೀಯ ಸಂದರ್ಭಗಳ ಅರಿವಾದರೆ, ಕಾವ್ಯದ ಒಳಸೆಲೆಗಳು ಮತ್ತಷ್ಟು ಚೆನ್ನಾಗಿ ಅರಿವಿಗೆ ಬರುವುದು ಸಾಧ್ಯ. ಈ ಮಾದರಿಯಲ್ಲಿ ಸಿ.ಪಿ.ನಾಗರಾಜ ಅವರು ಓದುಗರಿಗೆ ಅಗತ್ಯವಾಗಿರುವ ಯಾವ ವಿವರವನ್ನೂ ಕೈಬಿಟ್ಟಿಲ್ಲ. ಹಾಗೆಯೇ ಓದುಗರ ಓದಿಗೆ ಅನಗತ್ಯವಾದ ವಿವರಗಳನ್ನು ಸುಮ್ಮನೆ ತುಂಬಿಸಲು ಕೂಡ ಹೋಗಿಲ್ಲ. ಇದು ಸೂಕ್ತವಾದ ಬಗೆಯೆಂದು ತಿಳಿದಿದ್ದೇನೆ. ಈ ಕೆಲಸವನ್ನು ಕೈಗೊಂಡಿರುವ ಸಿ.ಪಿ.ನಾಗರಾಜ ಅವರನ್ನು ಕುಮಾರವ್ಯಾಸನ ಓದುಗರ ಪರವಾಗಿ ಅಭಿನಂದಿಸುತ್ತೇನೆ.

ಕೆ.ವಿ.ನಾರಾಯಣ

ನನ್ನ ನುಡಿ

ಕುಮಾರವ್ಯಾಸ ಭಾರತದ ಆದಿ ಪರ್ವದಲ್ಲಿ ಚಿತ್ರಣಗೊಂಡಿರುವ ಕಾವ್ಯ ಸನ್ನಿವೇಶಗಳಲ್ಲಿ 611 ಪದ್ಯಗಳನ್ನು ಆಯ್ದುಕೊಂಡು, ಅವನ್ನು 38 ಪ್ರಸಂಗ ಗಳಲ್ಲಿ ನಾಟಕ ರೂಪಕ್ಕೆ ಜೋಡಿಸಿದ್ದೇನೆ. ಗುರುಗಳಾದ ಕೆ.ವಿ.ನಾರಾಯಣ ಅವರು ನನ್ನ ಓದು ಮತ್ತು ಬರಹಕ್ಕೆ ಮಾರ್ಗದರ್ಶನ ನೀಡುತ್ತಿದ್ದಾರೆ.

ಅಂತರ್ಜಾಲದಲ್ಲಿ ಮೂಡಿ ಬರುತ್ತಿರುವ ಹೊನಲು ಮಿಂದಾಣದಲ್ಲಿ (honalu.net) ಆದಿಪರ್ವದ 38 ಪ್ರಸಂಗಗಳೂ 38 ಕಂತುಗಳಲ್ಲಿ ಪ್ರಸಾರಗೊಳ್ಳುತ್ತಿವೆ. ಹೊನಲು ಮಿಂದಾಣದ ಸಂಪಾದಕರು ಮತ್ತು ಓದುಗರು ಈ ಬರಹಕ್ಕೆ ಉತ್ತೇಜನ ನೀಡುತ್ತಿದ್ದಾರೆ.

ಈ ಬರಹದ ಕರಡು ಪ್ರತಿಯನ್ನು ಓದಿದ ನನ್ನ ಗುರುಹಿರಿಯರು ಮತ್ತು ಗೆಳೆಯರು ಮೆಚ್ಚುಗೆಯ ನುಡಿಗಳನ್ನಾಡಿದ್ದಾರೆ. ನನ್ನೆಲ್ಲಾ ಬರಹಗಳ ಮೊದಲ ಓದುಗಳಾದ ನನ್ನ ಹೆಂಡತಿ ಎಚ್.ಎಲ್.ಗಾಯತ್ರಿ ತಮ್ಮ ಅನಿಸಿಕೆಯನ್ನು ತಿಳಿಸಿದ್ದಾರೆ. ಈ ಹೊತ್ತಿಗೆಯ ಪುಟ ವಿನ್ಯಾಸವನ್ನು ಕೆ.ಆರ್.ಹರೀಶ್ ಅವರು ಸಿದ್ಧಪಡಿಸಿದ್ದಾರೆ. ಗೆಳೆಯರಾದ ಅನಿಲ್ ರೇವೂರ್ ಅವರು ಮುಖಪುಟವನ್ನು ರಚಿಸಿದ್ದಾರೆ.

ಕುಮಾರವ್ಯಾಸ ಭಾರತ ಪ್ರಸಂಗ–ಆದಿ ಪರ್ವ ಹೊತ್ತಿಗೆಯ ಬರಹಕ್ಕೆ ನೆರವಾದ ಗುರುಹಿರಿಯರಿಗೆ, ಗೆಳೆಯರಿಗೆ, ಸಂಪಾದಕರಿಗೆ ಮತ್ತು ಮುನ್ನುಡಿಯನ್ನು ಬರೆದುಕೊಟ್ಟು ಉತ್ತೇಜಿಸಿದ ಗುರುಗಳಾದ ಕೆ.ವಿ.ನಾರಾಯಣ ಅವರಿಗೆ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ.

ಸಿ.ಪಿ.ನಾಗರಾಜ

ಓದಿಗೆ ನೆರವಾದ ಪುಸ್ತಕಗಳು

1. **ಕುವೆಂಪು**
   ಮತ್ತು
   ಮಾಸ್ತಿ ವೆಂಕಟೇಶ ಅಯ್ಯಂಗಾರ್ (ಸಂಪಾದಕರು):

   ಕುಮಾರವ್ಯಾಸ ಮಹಾಕವಿಯ ಕರ್ಣಾಟ ಭಾರತ ಕಥಾಮಂಜರಿ

   ಪ್ರಕಾಶನ: ಮೈಸೂರು ಸಂಸ್ಥಾನದ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆ
   ಪ್ರಕಟಣೆಯ ವರ್ಷ: 1958

2. **ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರೀ (ಪ್ರಧಾನ ಸಂಪಾದಕರು):**
   ಜಿ.ಎನ್. ನರಸಿಂಹ ಮೂರ್ತಿ (ಸಂಯೋಜಕ ಸಂಪಾದಕರು)

   ಕುಮಾರವ್ಯಾಸ ಭಾರತ ಎಂಬ ಕರ್ಣಾಟ ಭಾರತ ಕಥಾಮಂಜರಿ

   ಸಂಪುಟ 1 ಮತ್ತು 2
   ಪ್ರಕಟಣೆಯ ವರ್ಷ : 2022
   ಪ್ರಕಾಶಕರು: ಕನ್ನಡ ಗಣಕ ಪರಿಷತ್ತು, ಬೆಂಗಳೂರು.
   ಸಹಕಾರ: ಕರ್ನಾಟಕ ಸರ್ಕಾರ ಮತ್ತು ಕುಮಾರವ್ಯಾಸ ಅಧ್ಯಯನ ಪೀಠ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

ಪರಿವಿಡಿ

ಕುಮಾರವ್ಯಾಸ

ಕಾಲ	:	ಕ್ರಿ.ಶ.1400
ಊರು	:	ಕೋಳಿವಾಡ ಗ್ರಾಮ ಗದಗ ಜಿಲ್ಲೆ, ಕರ್ನಾಟಕ ರಾಜ್ಯ
ಕವಿಯ ಮೆಚ್ಚಿನ ದೇವರು	:	ಗದುಗಿನ ವೀರನಾರಾಯಣ
ರಚಿಸಿದ ಕಾವ್ಯ	:	ಕರ್ಣಾಟ ಭಾರತ ಕಥಾಮಂಜರಿ (ಹತ್ತು ಪರ್ವಗಳು. ಭಾಮಿನಿ ಷಟ್ಪದಿಯ 8,270 ಪದ್ಯಗಳು.)

ಕುಮಾರವ್ಯಾಸ ಕವಿಯ ವ್ಯಕ್ತಿಗತ ಜೀವನದ ವಿವರಗಳು ತಿಳಿದುಬಂದಿಲ್ಲ. ನಿಜ ಜೀವನದಲ್ಲಿ 'ನಾರಣಪ್ಪ' ಎಂಬ ಹೆಸರು ಕವಿಗೆ ಇದ್ದಿರಬಹುದೆಂದು ಸಾಹಿತ್ಯ ಚರಿತ್ರಕಾರರಲ್ಲಿ ಕೆಲವರು ಊಹಿಸಿದ್ದಾರೆ. 'ಕುಮಾರವ್ಯಾಸ' ಎಂಬುದು ಕವಿಯ ಕಾವ್ಯ ನಾಮ. ಗದುಗಿನ ಭಾರತ / ಕುಮಾರವ್ಯಾಸ ಭಾರತ ಎಂಬ ಹೆಸರುಗಳಿಂದಲೂ ಈ ಕಾವ್ಯ ಜನಪ್ರಿಯವಾಗಿದೆ.

1. ಮತ್ಸ್ಯಗಂಧಿ ಪ್ರಸಂಗ

(ಆದಿ ಪರ್ವ : ಎರಡನೆಯ ಸಂಧಿ : ಪದ್ಯ :23 ರಿಂದ 29)

ಪಾತ್ರಗಳು

ಪರಾಶರ : ಒಬ್ಬ ಮುನಿ. ಬ್ರಹ್ಮದೇವನ ಮೊಮ್ಮಗ.

ಮತ್ಸ್ಯಗಂಧಿ : ಬೆಸ್ತರ ಒಡೆಯನ ಸಾಕು ಮಗಳು. ಈಕೆಗೆ ಯೋಜನಗಂಧಿ ಮತ್ತು ಸತ್ಯವತಿ ಎಂಬ ಮತ್ತೆರಡು ಹೆಸರುಗಳು ಇದ್ದವು.

ವೇದವ್ಯಾಸ : ಮತ್ಸ್ಯಗಂಧಿ ಮತ್ತು ಪರಾಶರ ಮುನಿಯ ಮಗ.

ಶಂತನು : ಹಸ್ತಿನಾವತಿಯಲ್ಲಿ ನೆಲೆಸಿದ್ದ ಕುರುವಂಶದ ರಾಜ. ಗಂಗಾದೇವಿ ಮತ್ತು ಸತ್ಯವತಿ ಎಂಬುವರು ಈತನ ಇಬ್ಬರು ಹೆಂಡತಿಯರು.

ದೀವರ : ಯಮುನಾ ನದಿ ತೀರದಲ್ಲಿ ನೆಲೆಸಿದ್ದ ಬೆಸ್ತರ ಸಮುದಾಯದ ಒಡೆಯ. ಮತ್ಸ್ಯಗಂಧಿಯ ಸಾಕು ತಂದೆ.

ಭೀಷ್ಮ : ಶಂತನು ಮತ್ತು ಗಂಗಾದೇವಿಯ ಮಗ.

ವೈಶಂಪಾಯನ : ಒಬ್ಬ ಮುನಿ. ಈತನು ವ್ಯಾಸರು ರಚಿಸಿದ ಮಹಾಭಾರತದ ಕಥೆಯನ್ನು ಮತ್ತೊಮ್ಮೆ ಪಾಂಡುವಂಶದ ರಾಜನಾದ ಜನಮೇಜಯನಿಗೆ ಹೇಳತೊಡಗಿದ್ದಾನೆ. "ಕೇಳು ಜನಮೇಜಯ ಧರಿತ್ರೀಪಾಲ... ಅರಸ ಚಿತ್ತೈಸು... ರಾಯ ಕೇಳೈ..... ಧರಣಿಪತಿ ಕೇಳು" ಎಂಬ ನುಡಿಗಟ್ಟುಗಳು ಕುಮಾರವ್ಯಾಸ ಭಾರತ ಕಾವ್ಯದ ಉದ್ದಕ್ಕೂ ಬರುತ್ತವೆ.

ಮತ್ಸ್ಯಗಂಧಿ ಪ್ರಸಂಗ

ಮತ್ಸ್ಯದ ಬಸುರಲಿ ಉದಿಸಿದ ನಳಿನಲೋಚನೆ ಮತ್ಸ್ಯಗಂಧಿನಿ ಬೆಳೆವುತಿರ್ದಳು... ಪರಾಶರವ್ರತಿಯ ಸಂಗವಾಯ್ತು... ಬಳಿಕ ಯೋಜನಗಂಧಿಯಲ್ಲಿಂದ ಅಭ್ರಶ್ಯಾಮನ್ ಉರು ಪಿಂಗಳ ಜಟಾಪರಿಬದ್ಧ ವೇದವ್ಯಾಸ ಮುನಿರಾಯ ಇಳಿದನು.

ವೇದವ್ಯಾಸ : ವಿಪತ್ತಿನೊಳು ನೆನೆ.

(ಎಂದು ತಾಯನು ತನುಜ ಬೀಳ್ಕೊಂಡನು... ಪರಾಶರ ಮುನಿ ಆ ಸತಿಗೆ ಪುನಃ ಕನ್ಯತ್ವವನು ಕರುಣಿಸಿದನು... ವಿನುತ ಯಮುನಾ ತೀರದಲಿ ಬೇಂಟೆಯಾಡುತ ಜನಪ ಶಂತನು ಪರಿಮಳದ ಬಳಿವಿಡಿದು ಬಂದು ಈ ಮಾನಿನಿಯ ಕಂಡನು... ಮದನನ ಎಸುಗೆಯಲಿ ಮರುಳುಗೊಂಡನು... ತರುಣಿಯನು ಕಂಡು...)

ಶಂತನು : ಆರು ನೀನು

(ಎಂದು ಅರಸ ಬೆಸಗೊಳತ, ಎಸೆವ ಕಾಮನ ಶರಕೆ ಮೈಯೊಡ್ಡಿ...)

ಶಂತನು : ಅರಮನೆಗೆ ನಡೆ.

(ಎನಲು)

ಯೋಜನಗಂಧಿ: ತಂದೆಯ ಪರಮ ವಚನವು ಅಲಂಘ್ಯ.

(ಎನೆ, ಕಾತರಿಸಿ ಭಗ್ನ ಮನೋರಥನು ಮಂದಿರಕೆ ಮರಳಿದನು... ವಿರಹದ ಆವುಗೆ ಕಿಚ್ಚು ಭೂಮೀಶ್ವರನ ಮುಸುಕಿತು... ಅರಸ, ಬಲಿದ ಅವಸ್ಥೆಯನು ಬಣ್ಣಿಸಲು ಅರಿಯೆನು... **"ಏಳೆಂಟೊಂಬತರ ಬಳಿಯ ಮರಣವು ಈತಂಗೆ"** ಎಂಬ ಜನರ ಉಬ್ಬರದ ಗುಜುಗು ಪರಿದು, ಭೀಷ್ಮ ವಹಿಲದಲಿ ಯಮುನಾ ವರನದಿಯ ತೀರಕ್ಕೆ ಬಂದನು... ಧೀವರನನ್ ಕರೆಸಿದನು.)

ಭೀಷ್ಮ : ನಿನ್ನ ಮಗಳು ಅಯ್ಯಂಗೆ ಅರಸಿಯಾಗಲಿ.

ಧೀವರ : ಅರಸಿಯಾದರೆ ಮಗಳ ಮಕ್ಕಳು ರಾಜ್ಯವಾಳುವರೆ... ಬರಿ ಅರಸುತನ ನಮಗೇಕೆ... ಇದನು ನೀ ಅರಿದು ಸಲಿಸುವುದು.

(ಎನಲು, ಧೀವರನ ಮಾತಿಂಗೆ ಈತನು ಎಂದನು.)

ಭೀಷ್ಮ : ಆದರೆ... ಇಲ್ಲಿಮ್ ಮೇಲೆ ನಾರಿಯರಾದವರು ಭಾಗೀರಥಿಗೆ ಸರಿ... ನಿನ್ನಯ ಮಗಳ ಮಕ್ಕಳಿಗೆ ಮೇದಿನಿಯ ಸಲಿಸುವೆನು. ಈ ದಿವಿಜರು... ಈ ಹರಿ... ಹರ... ಬ್ರಹ್ಮಾದಿ ದೇವರು ಸಾಕ್ಷಿ.

(ಎಂದು ಆ ದಯಾಂಬುಧಿ ನಗುತ)

ಹೋಗು..ನಿನ್ನಯ ಮಗಳ ಕರಸು.

(ಎಂದ... ದಂಡಿಗೆಯ ತರಿಸಿದನು... ನೆಲನ ದಂಡಿಯ ಚರರ ಉಗ್ಗಡಣೆಯಲಿ ಸರಸಿರುಮುಖಿಯನು ತಂದು ಪಿತಗೆ ಮದುವೆಯ ಉರವಣಿಸಿ ಮಾಡಿದನು... ಮಗ ನುಡಿದ ಭಾಷೆಯನು ಅರಸ ಕೇಳಿದು ಬಳಿಕ... ಭೀಷ್ಮಗೆ ವರವನು ಇತ್ತನು.)

ಶಂತನು : ಮರಣವದು ನಿನ್ನಿಚ್ಛೆ ಹೋಗು.

(ಎಂದ.)

❍

2. ಅಂಬೆ ಪ್ರಸಂಗ

(ಆದಿ ಪರ್ವ : ಎರಡನೆಯ ಸಂಧಿ : ಪದ್ಯ:30 ರಿಂದ 38)

ಪಾತ್ರಗಳು

ಅಂಬೆ : ಕಾಶಿರಾಜನ ಹಿರಿಯ ಮಗಳು. ಕಾಶಿರಾಜನಿಗೆ ಅಂಬೆ–ಅಂಬಿಕೆ–ಅಂಬಾಲೆ ಎಂಬ ಹೆಸರಿನ ಮೂವರು ಹೆಣ್ಣು ಮಕ್ಕಳಿದ್ದರು.

ಶಂತನು : ಹಸ್ತಿನಾವತಿಯ ರಾಜ.

ಯೋಜನಗಂಧಿ : ಶಂತನು ರಾಜನ ಹೆಂಡತಿ. ರಾಣಿ.

ಚಿತ್ರಾಂಗದ ಮತ್ತು **ವಿಚಿತ್ರವೀರ್ಯ** : ಶಂತನು ಮತ್ತು ಯೋಜನಗಂಧಿ ದಂಪತಿಯ ಇಬ್ಬರು ಗಂಡು ಮಕ್ಕಳು.

ಭೀಷ್ಮ : ಶಂತನು ಮತ್ತು ಗಂಗಾದೇವಿಯ ಮಗ.

ಪರಶುರಾಮ : ಭೀಷ್ಮನ ವಿದ್ಯಾ ಗುರು.

ಅಂಬೆ ಪ್ರಸಂಗ

ಬಳಿಕ ಯೋಜನಗಂಧಿಯಲಿ ದೀಪ್ತಜ್ವಲನತೇಜರು... ಹಿಮಕರ ಅನ್ವಯಕೆ ಕಲ್ಪಭೂಜರು... ಮಕ್ಕಳುಗಳು ಅವತರಿಸಿದರು... ಆ ನೃಪ ತಿಲಕ... ಚಿತ್ರಾಂಗದನನ ವಿಚಿತ್ರವೀರ್ಯನ ನಾಮಕರಣದಲಿ ಲಲಿತ ಮಂಗಳ ಜಾತಕರ್ಮಾವಳಿಯ ನೆಗಳೆ... ಇರಲಿರಲು ಶಂತನು ಮಹೀಪತಿ ಸುರರೊಳಗೆ ಸೇರಿದನು.

ಬಳಿಕ ಚಿತ್ರಾಂಗದ ಕುಮಾರಂಗೆ ಈ ಧರಣಿ ಒಡೆತನವಾಯ್ತು... ಅರಸ ಕೇಳೈ, ಕೆಲವು ಕಾಲಾಂತರದಲಿ... ಆತನು ಗಂಧರ್ವರಲಿ ಕಾದಿ ಮಡಿದನು... ವಿಚಿತ್ರವೀರ್ಯಂಗೆ ಪಟ್ಟವಾಯ್ತು... ರಾಯ ಕೇಳೈ, ಭೀಷ್ಮನು ಸಕಲ ರಾಜ್ಯಶ್ರೀಯನು ಆತಂಗೆ ಇತ್ತು... ತಾಯ ಚಿತ್ತವ ಪಡೆದು ಜಗತ್ರಯವ ಮೆಚ್ಚಿಸಿದನು.

ರಾಯ ಕುವರನ ಮದುವೆಗೆ ಅಬ್ಜದಳಾಯತಾಕ್ಷಿಯರನು ವಿಚಾರಿಸಿ... ಒಂದು ವಿವಾಹ ಮಂಟಪಕೆ ದಳದುಳದೊಳು ಹಾಯಿದನು... ಫಲ್ಗಣೆಯ ಖಂಡೆಯದ ಚೌಪಟಮಲ್ಲ ಭೀಷ್ಮನು ಅಲ್ಲಿ ನೆರೆದ ಆ ಕ್ಷತ್ರವರ್ಗವ ಚೆಲ್ಲಬಡಿದು... ವಿವಾಹಶಾಲೆಯ ಚೆಲ್ಲೆಗಂಗಳ ಕಮಲಮುಖಿಯರ ಮೂವರನು ಪಿಡಿದು... ಅವರೆಲ್ಲರನು ಪುರಕೆ ತಂದು... ತಮ್ಮಂಗೆ ಮದುವೆ ಮಾಡಲು ಅನುವಾದ... ಆ ಕಮಲಲೋಚನೆಯರೊಳು ಮೊದಲಾಕೆ ಛಲದ ಬಿಗುಹಿನಲಿ... **"ಭೀಷ್ಮನ ಗಂಡನೆಂದೇ ನೂಕಿ ಭಾಷೆಯ ಮಾಡಿ"** ನಿಂದಳು.

ಭೀಷ್ಮ : ಆಕೆ ಮಾಣಲಿ... ಈ ಕುಮಾರಂಗೆ ಮಿಕ್ಕವರು ಬರಲಿ.

(ಎಂದು ಭೀಷ್ಮ ವೈದಿಕ ಲೌಕಿಕೋತ್ಸವದಿಂದ ಮದುವೆಯ ಮಾಡಿದನು... ಅರಸ ಚಿತ್ತೈಸು, ಅಂಬೆ ಎಂಬಳು ದುರುಳೆ...)

ಅಂಬೆ : ಭೀಷ್ಮನ ಕೂಟವಲ್ಲದೆ... ಮರಣದ ಎಡೆಯಲಿ ಬೆರಸಿದಲ್ಲದೆ... ಪಂಥವಿಲ್ಲ.

(ಎಂದು ಪರಶುರಾಮನ ಭಜಿಸಿ ಹಸ್ತಿನಪುರಕೆ ತಂದಳು... ಹೇಳಿಸಿದಳು... ಈ ಸುರನದೀನಂದನನು ಮಾಡಿದ ಪರಿಯ ಕೇಳೆಂದ.)

ಭೀಷ್ಮ : ಸತಿಯನು ಒಲ್ಲೆನು... ಬ್ರಹ್ಮಚರ್ಯ ಸ್ಥಿತಿಗೆ ತಪ್ಪುವನಲ್ಲ... ನೀವು ಅನುಚಿತವ ನೆನೆದರೆ... ನಡೆಯಿ... ನಿಮಗೆ ಕಾಳಗವ ಕೊಟ್ಟೆನು.

(ವ್ರತದ ನಿಧಿ ಭೀಷ್ಮ ಕುರುಭೂಮಿಯಲಿ ಶರತತಿಯಲಿ ಇಪ್ಪತ್ತೊಂದು ದಿನ ಭೃಗುಸುತನೊಡನೆ ಕಾದಿದನು... ವಿರಥನ ಮಾಡಿದನು... ನುಡಿಯ ಭಂಗಿಸಲೆಂದು ಗುರುವು ಅವಗಡಿಸಿ ಹೊಕ್ಕರೆ... ಸರಳ ಮೊನೆಯಲಿ ಕೊಡಹಿ ಬಿಸುಟನು... ಮಹಾವ್ರತ ಸ್ಥಿತಿಯ ಬಿಟ್ಟುದಿಲ್ಲ.)

ಪರಶುರಾಮ : ನುಡಿಯ ಮೀರದ ನಮ್ಮ ಶಿಷ್ಯನನು ಒಡಬಡಿಸಿಕೊಳ್ಳು.

(ಎಂದು ನಾರಿಗೆ ನುಡಿದು... ಪರಶುರಾಮಮುನಿ ತನ್ನಾಶ್ರಮಕೆ ಸರಿದನು... ಅಂಬೆ ಭೀಷ್ಮನ ಬೈದು..ಕಂಬನಿದುಂಬಿ ತಪಕೆ ಹೋದಳು... ಬಳಿಕ ಈ ಅಂಬಿಕೆಯನು ಅಂಬಾಲೆಯನು ನೃಪಸೂನು ರಮಿಸಿದನು..ಬೆಂಬಲಕೆ ಕಲಿ ಭೀಷ್ಮನಿರೆ... ಚತುರಂಬುಧಿಯ ಮಧ್ಯದ ನೃಪಾಲ ಕದಂಬವು ಈತಂಗೆ ಇದಿರೆ... ಅಖಿಳ ಭೂತಳವ ಸಲಹಿದನು.)

❍

3. ಧೃತರಾಷ್ಟ್ರ... ಪಾಂಡು... ವಿದುರ ಜನನ

(ಆದಿಪರ್ವ : ಮೂರನೆಯ ಸಂಧಿ : ಪದ್ಯ : 1 ರಿಂದ 10)

ಪಾತ್ರಗಳು

ಭೀಷ್ಮ : ಶಂತನು ಮತ್ತು ಗಂಗಾದೇವಿಯ ಮಗ ಗಾಂಗೇಯ. ಶಂತನು ಮಹಾರಾಜನ ಹಿರಿಯ ಮಗ. ಈತನು ಮತ್ಸ್ಯಗಂಧಿಯ ತಂದೆಯಾದ ಧೀವರನಿಗೆ ನೀಡಿದ್ದ ವಾಗ್ದಾನವನ್ನು ಬಿಡದೆ ಪಾಲಿಸಿದ್ದರಿಂದ... ಭೀಷ್ಮನೆಂಬ ಹಿರಿಮೆಯ ಹೆಸರು ಬಂದಿತ್ತು.

ಯೋಜನಗಂಧಿ: ಶಂತನು ಮಹಾರಾಜನ ಹೆಂಡತಿ. ಈಕೆಗೆ ಸತ್ಯವತಿ ಮತ್ತು ಮತ್ಸ್ಯಗಂಧಿ ಎಂಬ ಇನ್ನೆರಡು ಹೆಸರುಗಳಿವೆ.

ವಿಚಿತ್ರವೀರ್ಯ : ಶಂತನು ಮತ್ತು ಯೋಜನಗಂಧಿಯ ಮಗ.

ವ್ಯಾಸ : ಪರಾಶರ ಮುನಿ ಮತ್ತು ಮತ್ಸ್ಯಗಂಧಿಯ ಮಗ.

ಅಂಬಿಕೆ : ಹಸ್ತಿನಾವತಿಯ ರಾಜನಾಗಿದ್ದ ವಿಚಿತ್ರವೀರ್ಯನ ಮೊದಲನೆಯ ಹೆಂಡತಿ. ಕಾಶಿರಾಜನ ಎರಡನೆಯ ಮಗಳು.

ಅಂಬಾಲಿಕೆ : ಹಸ್ತಿನಾವತಿಯ ರಾಜನಾಗಿದ್ದ ವಿಚಿತ್ರವೀರ್ಯನ ಎರಡನೆಯ ಹೆಂಡತಿ. ಕಾಶಿರಾಜನ ಮೂರನೆಯ ಮಗಳು

ದಾಸಿ : ರಾಣಿವಾಸದಲ್ಲಿ ಅಂಬಿಕೆಯ ದಾಸಿ.

ಧೃತರಾಷ್ಟ್ರ... ಪಾಂಡು... ವಿದುರ ಜನನ

ಅರಸ ಕೇಳೈ, ಕೆಲವು ಕಾಲಾಂತರಕೆ ನಿಮ್ಮ ವಿಚಿತ್ರವೀರ್ಯನು ಅಮರಸ್ತ್ರೀಯರಲಿ ನೆರೆದನು... ಬಳಿಕ ಯೋಜನಗಂಧಿ ಈ ನದೀಸುತನ ಕರೆದು ನುಡಿದಳು.

ಯೋಜನಗಂಧಿ : ಮಗನೆ, ರಾಜ್ಯವ ಧರಿಸು... ಇನ್ನು ನೀನು ಉತ್ತರದ ಹಿಮಕರ ಕುಲವ ಬೆಳಗು.

(ಎಂದು ಯೋಜನಗಂಧಿ ಬೆಸಸಿದಳು.)

ಭೀಷ್ಮ : **"ತಾಯೆ... ರಾಜ್ಯಸ್ತ್ರೀಯಳ್ ನಿಮ್ಮೋಪಾದಿ"** ಎಂದ ಆ ನುಡಿಯೊಳಗೆ ಗಾಂಗೇಯ ಮುಳುಗನೆ... ಭೀಷ್ಮ ವಚನಕೆ ಬೇರೆ ಮೊಳೆಯುಂಟೆ... ಕಾಯದ ಅಲ್ಪ ಸುಖಕ್ಕೆ ಘನ ನಿಶ್ರೇಯಸವ ಕೆಡಿಸುವೆನೆ... ಯೆಲವದ ಕಾಯಿಗೋಸುಗ ಕಲ್ಪವೃಕ್ಷವ ಕಡಿವನಲ್ಲ.

(ಎಂದ. ಯೋಜನಗಂಧಿ ಮರುಗಿ ಚಿಂತೆಯ ಸೆರೆಗೆ ಸಿಲುಕಿದಳು... ಒಂದು ರಾತ್ರಿಯೊಳು ಪೂರ್ವಸೂಚಿತ ಪುತ್ರ ಭಾಷಿತವ ಅರಿದು ನೆನೆದಳು.)

ಯೋಜನಗಂಧಿ : (ತನ್ನಲ್ಲಿಯೇ)

ಮುರಿದ ಭರತ ಅನ್ವಯದ ಬೆಸುಗೆಯ ತೆರನು ತೋರಿತೆ... ಪುಣ್ಯ...

(ಎನುತ.)

ಮಗನೆ, ವೇದವ್ಯಾಸ ಬಹುದು.

(ಎಂದು ಎಚ್ಚರಿತು ನುಡಿದಳು... ಕೆಂಜೆಡೆಯ..ಮೊನೆ ಮುಂಜೆರಗಿನ ಕೃಷ್ಣಾಜಿನದ ಉಡಿಗೆಯ... ಬಲಾಹಕ ಪುಂಜಕಾಂತಿಯ... ಪಿಂಗತರಮುಖ ಕೇಶದ... ಉನ್ನತಿಯ ಕಂಜನಾಭನ ಮೂರ್ತಿ... ಶೋಭಾ ರಂಜಿತನು... ಜನದುರಿತ ದಶಮದ ಭಂಜಕನು ವ್ಯಾಸ ಮುನಿರಾಯ ತಾಯ್ಗೆ ಎರಗಿ ನುಡಿದನು.)

ವ್ಯಾಸ : ನೆನೆದಿರೇನೌ ತಾಯೆ... ಕೃತ್ಯವನು ಎನಗೆ ಬೆಸಸು.

ಯೋಜನಗಂಧಿ : ಮಗನೆ, ಭಾರತ ವಿನುತಕುಲ ಜಲರಾಶಿ ವಿಚಿತ್ರನಲಿ ಎಡೆವರಿತುದು... ತನುಜ, ನೀನೇ ಬಲ್ಲೆ.

ವ್ಯಾಸ : ಕೇಳ್ ಜನನಿ, ನಿಮ್ಮಡಿಯಾಜ್ಞೆಯಲಿ ವೈಚಿತ್ರವೀರ್ಯ ಕ್ಷೇತ್ರದಲಿ ಸುತರ ಸಂಜನಿಪುವೆನು.

(ಎಂದು... ಬಳಿಕ ಏಕಾಂತ ಭವನದೊಳು ಅಂದು ಮುನಿ ಇರಲು... ಅರವಿಂದಮುಖಿ ಅಂಬಿಕೆಯನು ಮುನಿಯ ಪೊರೆಗಾಗಿ ಸೊಸೆಯನು ಅಟ್ಟಿದಳು... ಬಂದು ಮುನಿಪನ ದಿವ್ಯರೂಪವನು ಇಂದುಮುಖಿ ಕಂಡು... ಭಯದಿಂದ ಅಕ್ಷಿಗಳ ಮುಚ್ಚಿದಳು... ಆಕೆ ತಿರುಗಿದಳು... ಬಳಿಕಲು ಅಂಬಾಲಿಕೆಯನು ಅಲ್ಲಿಗೆ ಕಳುಹಲು... ಮುನಿಯ ರೌದ್ರಾಕಾರ ದರ್ಶನದಿ ಆಕೆಗೆ ಮುಖದಲಿ ಬಿಳುಪು ಮಸಗಿತು... ಲಲನೆ ಮರಳಿದಳು... ಒಬ್ಬ ಸತಿಯನು ಕಳುಹಲು... ಆ ವಧು ಚಪಲ ದೃಷ್ಟಿಯೊಳ್ ಅಳುಕದೆ ಈಕ್ಷಿಸಲು... ಅನಿಬರಿಗೆ ಗರ್ಭಾದಾನವು ಆಯ್ತು... ಮುನಿಪತಿ ಬಂದು ತಾಯ್ಗೆ ಕೈಮುಗಿದು ಎಂದನು.)

ವ್ಯಾಸ : ಅಂಬಿಕೆಯಲಿ ಜನಿಸುವ ನಂದನನು ಜಾತ್ಯಂಧನು... ಅಂಬಾಲಿಕೆಗೆ ಪಾಂಡುಮಯ... ಬಂದ ಬಳಿಕಿನ ಚಪಲೆಗೆ ಅತಿಬಲನು... ತನಗೆ ನೇಮವೆ.

(ಎಂದು ಹೇಳಿದು, ಬಾದರಾಯಣನು ತನ್ನ ಆಶ್ರಮಕೆ ಸರಿದನು... ನವಮಾಸ ತುಂಬಿದುದು... ಅಂಬಿಕೆಯ ಬಸುರಿನಲಿ ಸೂನು ಗತಾಂಬಕನು ಜನಿಸಿದನು.. ಅಂಬಾಲಿಕೆಗೆ ಪಾಂಡುಮಯ ಮಗನಾದನ್... ಕುಮಾರೋದ್ಭವದ ವಿಭವದಲಿ ಪರಿತೋಷ ಚುಂಬಿಸಿತು... ನವ ಪುಳಕಾಂಬುಗಳು ಜನಜನಿತ ಉತ್ಸವವನು... ಅದನು ಏನೆಂಬೆನು... ಗಂಗಾಜಾತ ಜಾತಕರ್ಮಾದಿಯನು ಪಾರ್ಥಿವ ಜಾತಿ ವಿಧಿ ವಿಹಿತದಲಿ ಮಾಡಿಸಿ... ನಿಖಿಳ ಯಾಚಕರ ತುಷ್ಟಿ ಪಡಿಸಿದ. ಈತನೇ ಧೃತರಾಷ್ಟ್ರ... ಎರಡನೆಯಾತ ಪಾಂಡು... ವಿಲಾಸಿನೀ ಸಂಭೂತನೀತನು ವಿದುರನು ಎಂದು ಅವರಿಗೆ ಅಭಿದಾನ ಆಯ್ತು.)

❍

4. ಕರ್ಣನ ಜನನ

(ಆದಿ ಪರ್ವ : ಮೂರನೆಯ ಸಂಧಿ : ಪದ್ಯ : 11 ರಿಂದ 28)

ಪಾತ್ರಗಳು

ದೂರ್ವಾಸ : ಒಬ್ಬ ಮುನಿ.

ಕುಂತಿ : ಯದುಕುಲದ ಶೂರಸೇನ ರಾಜನ ಮಗಳು. ಕುಂತಳ ದೇಶದ ರಾಜನಾದ ಕುಂತಿಭೋಜನು ತನಗೆ ಮಕ್ಕಳಿಲ್ಲದ್ದರಿಂದ, ಕುಂತಿಯನ್ನು ದತ್ತು ಮಗಳನ್ನಾಗಿ ಪಡೆದು, ಸಾಕಿ ಸಲಹುತ್ತಿದ್ದನು.

ಸೂರ್ಯದೇವ : ಗಗನದಲ್ಲಿ ಉರಿಯುವ ಸೂರ್ಯನನ್ನು ಒಬ್ಬ ದೇವತೆಯೆಂದು ಜನಸಮುದಾಯ ಕಲ್ಪಿಸಿಕೊಂಡಿದೆ.

ಸೂತ : ಕರ್ಣನ ಸಾಕು ತಂದೆ.

ಕರ್ಣನ ಜನನ

ಕುಮಾರರು ಹರಿಣಪಕ್ಷದ ನಳಿನರಿಪುವಿನವೊಲ್ ಬೆಳೆವುತಿರ್ದರು... ತಾಯಿ ಉಮ್ಮಳಿಸದಂತಿರೆ... ಕಲಿ ಭೀಷ್ಮ... ಇಬ್ಬರಿಗೆ ಕುಲವಿಹಿತ ಚೌಲೋಪನಯನವನು ರಚಿಸಿ... ಕಲಿತ ವಿದ್ಯರ ಮಾಡಿ... ಸೋಮವಂಶದ ಬೆಳವಿಗೆಯನೇ ಮಾಡಿ ಕೊಂಡಾಡಿದನು.

ಧಾರುಣೀಪತಿ ಚಿತ್ತವಿಸು, ಧೃತರಾಷ್ಟ್ರ... ಭೂಪತಿಗೆ ಗಾಂಧಾರ ದೇಶದ ಸುಬಲರಾಜ ಕುಮಾರಿ ಕುಲವಧುವಾದಳು... ನಾರಿಯರೊಳು ಉತ್ತಮೆಯಲಾ ಆ ಗಾಂಧಾರಿಯೆನಿಸಿ ಸಮಸ್ತ ಜನ ಹೊಗಳೆ... ಪತಿವ್ರತಾ ವಿಸ್ತಾರಗುಣದಲಿ ಅಬಲೆ ಮೆರೆದಳು... ಕುಂತೀಭೋಜನೆಂಬ ನೃಪೋತ್ತಮನ ಭವನದಲಿ ಮುರಹರನ ಅತ್ತೆ ಬೆಳೆವುತ್ತಿರ್ದಳು... ಆ ವಸುದೇವ ನೃಪನ ಅನುಜೆ ಕುಂತಿ ಹೆತ್ತವರಿಗೆ... ಓಲೈಸುವರಿಗೆ ... ಮಹೋತ್ತಮರಿಗೆ... ಅಖಿಳ ಲೋಕದ ಚಿತ್ತಕೆ ಅಹುದೆನೆ ನಡೆವ ಗುಣದಲಿ ಮೆರೆದಳು.

ಒಂದು ದಿನ ದೂರ್ವಾಸಮುನಿ ನೃಪ ಮಂದಿರಕೆ ಬರಲು, ಆ ಮಹೀಪತಿ ರಾಜಕಾರ್ಯದಲಿ ಬಂದ ಬರವಿನಲಿ ಅವರ ಮರೆದನು... **"ಇಂದು ಕುಂತೀಭೋಜನ ಒಡೆತನ ಬೆಂದು ಹೋಗಲಿ"** ಎಂಬ ಶಾಪವನು ಇಂದುಮುಖಿ ಅವರ ಚರಣದಲಿ ಹೊರಳಿದಳು... ನಿಲಿಸಿದಳು. ತರುಣಿಯು ಆ ಮುನಿಯನು ಒಡಗೊಂಡು ಒಯ್ದು... ಕನ್ಯಾ ಪರಮ ಭವನದಲಿ ವಿವಿಧ ಅನ್ನ ಪಾನ ರಸಾಯನಂಗಳಲಿ ಉಪಚರಿಸಿದಳು.

ದೂರ್ವಾಸ : ಹರ... ಮಹಾದೇವ, ಈ ಮಗುವಿನ ಆದರಣೆಗೆ... ಈ ವಿನಯ ಉಪಚಾರಕೆ ಹಿರಿದು ಮೆಚ್ಚಿದೆನು.

(ಎಂದು ದೂರ್ವಾಸ ತಲೆದೂಗಿದನು.)

ಮಗಳೆ, ಬಾ... ಐದು ಮಂತ್ರಾಳಿಗಳನು ಕೊಳ್... ಇವು ಸಿದ್ಧ ಪ್ರಯೋಗವು... ದಿವಿಜರೊಳು ಸೊಗಸು ಆರ ಮೇಲುಂಟು... ಅವರ ನೆನೆ ಸಾಕು... ಮಗನು ಜನಿಸುವನು.

(ಎಂದು ಕುಂತಿಗೆ ಮುನಿ ರಹಸ್ಯದೊಳು ಅರುಹಿ... ಮುನಿ ಮೌಳಿಗಳ ಮಣಿ ಪರಿತೋಷದಲಿ ನಿಜಾಶ್ರಮಕೆ ಸರಿದನು.)

ಕುಂತಿ : (ತನ್ನಲ್ಲಿಯೇ)

ಮಗುವುತನದಲಿ ಬೊಂಬೆಯಾಟಕೆ ಮಗುವನೇ ತಹೆನು.

(ಎಂದು ಬಂದಳು... ಗಗನ ನದಿಯಲಿ ಮಿಂದಳು... ಲೋಹಿತಾಂಬರವ ಉಟ್ಟಳು... ವಿಗಡಮುನಿಪನ ಮಂತ್ರವನು ನಾಲಗೆಗೆ ತಂದಳು... ರಾಗರಸದಲಿ ಗಗನಮಣಿಯನು ನೋಡಿ ಯೋಗದಲಿ ಕಣ್ಮುಚ್ಚಿದಳು... ಅರಸ ಕೇಳ್, ಮುನಿಯಿತ್ತ ಮಂತ್ರಾಕ್ಷರ ಕರಹಕೆ ತಳುವಿದರೆ ದೂರ್ವಾಸ ವಿಗಡನಲ... ದಿನಕರನ ತೇಜವ ಕೊಂಬನ್ನೈ... ಸೂರ್ಯನು ಧರೆಗೆ ಬಂದನು. ಆತನ ಕಿರಣ ಲಹರಿಯ ಹೊಯ್ಲಿನಲಿ ಸರಸಿರುಹಮುಖಿ ಬೆಚ್ಚಿದಳು.)

ಕುಂತಿ : ಬಿಜಯಂಗೈಯಿ ನೀವು.

ಸೂರ್ಯದೇವ : ಎನ್ನಬಾರದಲೇ... ಋಷಿ ಪ್ರತಿಪನ್ನ ಮಂತ್ರವು ಅಮೋಘ... ಅದರಿಂದ ಎನ್ನ ತೂಕದ ಮಗನಹನು... ನೀನು ಅಂಜಬೇಡ.

(ಎನುತ ಕನ್ನಿಕೆಯ ಮುಟ್ಟಿದನು.)

ಸೂರ್ಯದೇವ : ಮುನ್ನಿನ ಕನ್ನೆತನ ಕೆಡದಿರಲಿ.

(ಎನುತವೆ... ತನ್ನ ರಥವಿದ್ದ ಎಡೆಗೆ ವಹಿಲದಲಿ ರವಿ ತಿರುಗಿದನು... ಅರಸ ಕೇಳ್, ಆಶ್ಚರ್ಯವನು...

"ತಾವರೆಯ ಮಿತ್ರನ ಕರಗಿ ಕರುವಿನೊಳು ಎರೆದರು" ಎಂದೆನೆ ಥಳಥಳಿಸಿ ತೊಳಗುವ ತನುಚ್ಛವಿಯ... ಕುರುಳು ತಲೆ... ನಿಟ್ಟೆಸಳು ಕಂಗಳ... ಚರಣ ಕರಪಲ್ಲವದ... ಕೆಂಪಿನ ವರಕುಮಾರಕನ ಕಂಡು... ಆ ಕುಂತಿ ಬೆರಗಿನೊಳು ಇರ್ದಳು. ಅಳುವ ಶಿಶುವನು ತೆಗೆದು... ತೆಕ್ಕೆಯ ಪುಳಕಜಲದಲಿ ನಾದಿ... ಹರುಷದ ಬಳಿಯ ಲಜ್ಜೆಯ ಭಯದ ಹೋರಟೆಗೆ ಅಳುಕಿ ಹಳುವಾಗಿ...)

ಕುಂತಿ : (ತನ್ನಲ್ಲಿಯೇ)

ಕುಲದ ಸಿರಿ ತಪ್ಪುವುದಲಾ... ಸಾಕು ಇಳುಹಬೇಕು.

(ಎಂದೆನುತ ಜನದ ಅಪವಾದ ಭೀತಿಯಲಿ ಗಂಗಾ ಜಲದೊಳಗೆ ಹಾಯ್ಕಿದಳು.)

ಕುಂತಿ : (ಗಂಗೆಯನ್ನು ಕುರಿತು)

ತಾಯೆ, ಬಲ್ಲ ಅಂದದಲಿ ಕಂದನ ಕಾಯಿ ಮೇಣ್ ಕೊಲ್ಲು.

(ಎನುತ ಕಮಲದಳಾಯತಾಕ್ಷಿ ಕುಮಾರಕನ ಮಡುವಿನಲಿ ಹಾಯ್ಕಿದಳು... ರಾಯ ಕೇಳೈ, ಸಕಲ ಲೋಕದ ತಾಯಲಾ ಜಾಹ್ನವಿ... ತರಂಗದಿ ನೋಯಲೀಯದೆ ಮುಳುಗಲೀಯದೆ ತಡಿಗೆ ಚಾಚಿದಳು... ಮಳಲ ರಾಶಿಯನು ಕಾಲಲಿ ಕೆದರಿ ಒದೆದು... ಕೈಗಳ ಕೊಡಹಿ... ಶಿಶುಗಳ ಅರಸನು ರವಿಯನು ಈಕ್ಷಿಸುತ... **'ಭೋ'** ಎಂದು ಒದರುತಿರ್ದನು... ಇದನು ಸೂತನೊಬ್ಬನು ಕಂಡನು. ಮುದದ ಮದದಲಿ ತನ್ನ ಮರೆದು ಉಬ್ಬಿದನು.)

ಸೂತ : ಇದು ಎತ್ತಣ ನಿಧಿಯೊ... ಶಿವ... ಶಿವ.

(ಎಂದು ನಡೆತಂದ.)

ಸೂತ : ತರಣಿ ಬಿಂಬದ ಮರಿಯೊ... ಕೌಸ್ತುಭ ವರಮಣಿಯ ಖಂಡದ ಕಣಿಯೊ... ಮರ್ತ್ಯರಿಗೆ ಮಗನು ಇವನಲ್ಲ... ಮಾಯಾ ಬಾಲಕನೊ... ಮೇಣು ಇರಿಸಿ ಹೋದವಳು

ಆವಳೋ... ಶಿಶುವರನ ತಾಯ್ ನಿರ್ಮೋಹೆಯ್ಯೈ...
ಹರಹರ ಮಹಾದೇವ.

(ಎನುತ ಬಾಲಕನ ತೆಗೆದಪ್ಪಿದನು.)

ಸೂತ : ತಾನಿನ್ನು ತ್ರೈಲೋಕ್ಯ ರಾಜ್ಯವ ಗಣಿಸುವೆನೆ... ತೃಣವಲಾ... ಮೇಣ್... ಈ ಬಾಲಕಂಗೆ ತನ್ನಲಿ ರಿಣ ವಿಶೇಷ ಇದೇನೊ.

(ಎನುತ ಕ್ಷಣದೊಳು ಒದಗುವ ಬಾಷ್ಪಲುಳಿತೇಕ್ಷಣನು ಮನೆಗೆ ಬಂದನು.)

ಸೂತ : ರಮಣಿ ಕೊಳ್... ಪರುಷದ ಕಣಿಯ ತಂದೆನು.

(ಎಂದು ಅರ್ಭಕನ ಇತ್ತನು... ರಾಧೆಯಲಿ ಮಗನಾದನು ಎಂದು ಉತ್ಸವವ ಮಾಡಿ ಮಹೀ ದಿವಿಜರನು ದಾನ ಮಾನಂಗಳಲಿ ಸತ್ಕರಿಸಿ ಆದರಿಸಿದನು... ಆ ದಿನಮ್ ಮೊದಲಾಗಿ ಅವನ ಐಶ್ವರ್ಯ ಉದ್ಭವಾದುದು... ಆ ರವಿನಂದನನು ರಾಧೇಯ ನಾಮದಲಿ ಉನ್ನತವಾದನು.

ಹೊಳೆ ಹೊಳೆದು... ಹೊಡೆಮರಳಿ... ನಡು ಹೊಸ್ತಿಲಲಿ ಮಂಡಿಸಿ... ಬೀದಿ ಬೀದಿಗಳೊಳಗೆ ಸುಳಿವರ ಸನ್ನೆ ಯೊಳಗೆ ಕರೆಕರೆದು ನಸುನಗುತ... ಲಲಿತ ರತ್ನದ ಬಾಲ ತೊಡಿಗೆಯ ಕಳಚಿ ಹಾಯ್ಕುವ ಹೆಸರು... ಜನಜನದ ಕರ್ಣದಲಿ ಜಗದಲಿ ಬೆಳೆವುತಿರ್ದುದು ಹಬ್ಬಿದುದು... ಅರಸ ಕೇಳ್ಯೆ, ಈತನ ಹೆಸರು ಕರ್ಣಪಾರಂಪರೆಯೊಳು ಜಗದಲಿ ಹರಿದುದು... ಅಲ್ಲಿಮ್ ಬಳಿಕಲ್ ಈತನ ನಾಮಕರಣದಲಿ ಸುರನರೋರಗ ನಿಕರವೇ ವಿಸ್ತರಿಸಿದುದು... ಕರ್ಣಾಭಿದಾನವ ಗುರುಪರಾಕ್ರಮಿ ಸೂತಭವನದಲಿ ಬೆಳೆವುತಿರ್ದನು.)

❍

5. ಧೃತರಾಷ್ಟ್ರನಿಗೆ ವ್ಯಾಸರ ಅನುಗ್ರಹ

(ಆದಿ ಪರ್ವ : ನಾಲ್ಕನೆಯ ಸಂಧಿ : ಪದ್ಯ:1 ರಿಂದ 11)

ಪಾತ್ರಗಳು

ಧೃತರಾಷ್ಟ್ರ : ವ್ಯಾಸ ಮತ್ತು ಅಂಬಿಕೆಯ ಮಗ. ಹಸ್ತಿನಾವತಿಯ ರಾಜ.

ವ್ಯಾಸ : ಪರಾಶರ ಮುನಿ ಮತ್ತು ಮತ್ಸ್ಯಗಂಧಿಯ ಮಗ. ವೇದಗಳನ್ನು ಸಂಗ್ರಹಿಸಿ ಸಂಪಾದನೆ ಮಾಡಿದ್ದರಿಂದ ವೇದವ್ಯಾಸ ಎಂಬ ಹೆಸರು ಬಂದಿದೆ.

ಧೃತರಾಷ್ಟ್ರನಿಗೆ ವ್ಯಾಸರ ಅನುಗ್ರಹ

ಕೇಳು ಜನಮೇಜಯ ಧರಿತ್ರೀಪಾಲ, ಕುಂತೀಭೋಜ ಭೂಪತಿಯ ಆಲಯದೊಳು ಈ ಕುಂತಿ ವಿವಿಧ ವಿಭವದಲಿ ಮೆರೆದಳು... ಆ ನೀಲಾಳಕಿಯ ಕುಲ ರೂಪು ಲಕ್ಷಣಶೀಲವನು ಗಾಂಗೇಯನು ಕೇಳಿದನು... ಪಾಂಡುವಿಗೆ ಪಾಸಟಿಯೆಂದು ರಾಗದಲಿ ಕುಂತೀಭೋಜನನು ಕರೆಸಿ ಸತ್ಕರಿಸಿ... ಕುಂತಿಯ ಪಾಂಡುವಿಗೆ ಭೂಸುರರ ಮತದಿಂದ ಅಗ್ನಿ ಸಾಕ್ಷಿಕ ವರವಿವಾಹವನು ಪರಮ ವಿಭವದಲಿ ಎಸಗಿ... ಮದ್ರೇಶ್ವರನ ಅನುಜೆ ಮಾದ್ರಿಯನು ವೈವಾಹಿಕ ಮುಹೂರ್ತದಲಿ ಪಾಂಡುವಿಗೆ ಅರಸಿಯನು ಮಾಡಿದನು.

ವರ ವಿವಾಹ ಮುಹೂರ್ತ ಸಮನಂತರ ಸುರನದೀಸುತ... ಧೃತರಾಷ್ಟ್ರ ವಿದುರರ ಪರಮ ಪರಿತೋಷ ಅನುಮತದಲಿ... ಸುಲಗ್ನದೊಳು ಪಾಂಡುವಿಗೆ ಅಖಿಳ ರಾಜ್ಯದ ಧುರದ ನಿರ್ವಾಹಕ ಮಹಾಪಟ್ಟಾಭಿಷೇಚನವ ವಿಸ್ತರಿಸಿದನು... ಆ ವಿಭವ ಮೆರೆದುದು.

ಅವನೀಪಾಲ ಕೇಳು, ಸೋಮಕುಲದವರಲಿ ಭವತ್ ಪ್ರಪಿತಾಮಹನವೋಲ್ ಧರ್ಮದಲಿ... ಸಂಗ್ರಾಮದಲಿ... ಸತ್ಯದಲಿ... ಸಾಹಿತ್ಯದಲಿ... ವಿನಯದಲಿ... ಸಾಮದಲಿ... ಶೌರ್ಯದಲಿ... ಸುಜನಪ್ರೇಮದಲಿ... ನೀತಿಯಲಿ... ದೃಢದಲಿ... ಭೂಮಿಯಲಿ ನಾ ಕಾಣೆನು ಎಂದ.

ಪಸರಿಸಿದ ಪರಿಧೌತಕೀರ್ತಿ ಪ್ರಸರದಲಿ ಜಗ ಬೆಳುಪಾಯ್ತು... ನಿಪ್ಪಸರದಲಿ ಝುಳಪಿಸುವ ಖಂಡೆಯ ಸಿರಿಯ ಸೊಂಪಿನಲಿ ಅಗ್ಗದ ಕೆಂಪು ಮಸಗಿತು... ಪರಬಲ ವಿಸರದಳನ ಕ್ರೋಧಮಯ ತಾಮಸದಿನ್ ಭುವನವಿಸ್ತಾರ

ಅಸಿತಾಭಾಸಮ್ ಆದುದು... ಮಿತ್ರ ರಾಯರ ಮೌಳಿಮಣಿ ಪಾಂಡುವಿನ ಚರಣ ನಖಾಳಿಯನು ಓಲಗಿಸುವುದು... ಸೆಣಸುವ ಮಹೀಶ್ವರ ಮೌಳಿಮಣಿ ಕಿರಣ ಪ್ರಣಯದ ಅಮರೀಬಾಲೆಯರ ಪದನಖವನು ಓಲಗಿಸಿತು.

ಪಾಂಡುವಿನ ಖಂಡೆಯ ಸಿರಿಯ ಸಡಗರವದನು ಏವೇಳುವೆನು... ಓಲಗಿಸಿ ಕೊಂಬಾತನು ಅಂಧನೃಪಾಲನು... ಪಾಂಡುಭೂಪತಿಗೆ ಉಳಿದಂತೆ ಅಖಿಳ ಧರಣೀಪಾಲಕತ್ವ... ಈ ಕುಮಾರಕರ ಲಾಲಿಸುವ ಕುಲನೀತಿ ವಿಧದಲಿ ಪಾಲಿಸುವ ಭರ ಭೀಷ್ಮನದು... ನಳ ನಹುಷ ಚರಿತವನು ಇವರ ಪರಿಪಾಟಿ ಸಂಬಾಳಿಸಿತು.

ಧೃತರಾಷ್ಟ್ರ : (ತನ್ನ ಮನದಲ್ಲಿ)

ನೃಪ ಪರಂಪರೆಯಿಂದ ಬಂದ ಈ ವಿಪುಳ ವಂಶಸ್ಥಿತಿ ವಿಸರ್ಗವನು... ಹಿಂದೆ ವೇದವ್ಯಾಸ ಮುನಿ ಬಂದು ಅಪಹರಿಸಿದನು... ಕೃಪೆಯ ಮಾಡನೆ... ತನ್ನ ಸಂತತಿ ಕೃಪಣವಾಯ್ತು.

(ಎಂದು ಅನವರತ ಕುರುನೃಪತಿ ಧೃತರಾಷ್ಟ್ರ ಚಿಂತಾಭಾರದಲಿ ಬಳಲುವನು... ಅರಸ ಚಿತ್ತೈಸು, ಒಂದು ದಿನ ಮುನಿವರನು ಬಿಜಯಂಗೈದು ಹಸ್ತಿನಪುರವ ಹೊಕ್ಕನು... ರಾಜಭವನಕೆ ಬಂದು ಹರ್ಷದಲಿ ಸುರನದೀತನುಜಾದಿಗಳ ಸತ್ಕರಣೆಯನು ಕೈಕೊಂಡು... ಮಕ್ಕಳ ಮುರಿದ ವಿಭವಕೆ ಮೈಯನಾಂತು ಮುನೀಂದ್ರನು ಇಂತು ಎಂದ...)

ವ್ಯಾಸ : ಭರತ ಕುಲದಲಿ ಕೋಮಲ ಸೌಖ್ಯಲತೆಗೆ ಮಕ್ಕಳಿಲ್ಲದ ಕೊರತೆ ಇದು ಕರಗಸವಲಾ... ತಂದೆ, ಬಾ..ಧೃತರಾಷ್ಟ್ರ..ಬಾ

(ಎನುತ ಕರೆದು ಕಟ್ಟೇಕಾಂತದಲಿ...)

ವ್ಯಾಸ : ಮಂತ್ರ ಪಿಂಡಕವ ಕೊಳ್... ನಿನ್ನ ಅರಸಿಗೆ ಅನುಪಮ ಪುತ್ರ ಶತ ಅವತರಿಸುವುದು.

(ಗಾಂಧಾರಿ ಗರ್ಭೋತ್ಕರವನು ಧರಿಸಿದಳು... ಇತ್ತ ನಿಜಾಶ್ರಮಕೆ ಮುನಿ ತಿರುಗಿದನು... ರಾಯನ ಅಭ್ಯುದಯ ದಿನದಿನದೊಳು ಉಬ್ಬಿತು.) ❍

6. ಶಾಪಕ್ಕೆ ಗುರಿಯಾದ ಪಾಂಡುರಾಜ

(ಆದಿ ಪರ್ವ : ನಾಲ್ಕನೆಯ ಸಂಧಿ : ಪದ್ಯ:11 ರಿಂದ 24)

ಪಾತ್ರಗಳು

ಕಿಂದಮ ಮುನಿ ದಂಪತಿ : ಕಾಡಿನಲ್ಲಿ ವಾಸವಾಗಿದ್ದ ಕಿಂದಮ ಮತ್ತು ಅವನ ಹೆಂಡತಿ.

ಪಾಂಡುರಾಜ : ಹಸ್ತಿನಾವತಿಯನ್ನು ಆಳುತ್ತಿರುವ ರಾಜ. ಅಂಬಿಕೆ ಮತ್ತು ವೇದವ್ಯಾಸ ಮುನಿಯ ಮಗ.

ಭೀಷ್ಮ : ಶಂತನು ಮತ್ತು ಗಂಗಾದೇವಿಯ ಮಗ

ಶಾಪಕ್ಕೆ ಗುರಿಯಾದ ಪಾಂಡುರಾಜ

ಅರಸ ಕೇಳ್ಳೈ, ಪಾಂಡು ನೃಪಾಲನೋಲಗಕೆ ಬೇಂಟೆಗಾರರು ಮೃಗನಿಕಾಯದ ನೆರವಿಗಳ ನೆಲೆಗೊಳಿಸಿ ಕರೆಯ ಬಂದರು... ಮೃಗದಿಕ್ಕೆ ಹಕ್ಕೆಯ ಗಾಳಿಯನು ಕೊಂಬುಗಳನು ಕೇಳಿದನು... ಆಗಳೆ ರಾಜಸಭೆಯನು ರಾಯನು ಉಚಿತದಲಿ ಬೀಳು ಕೊಟ್ಟನು... ಬೋಳೆ ಕವಲಂಬುಗಳ..ಹದವಿಲು... ತಾಳಿಕೆಯ ಕುಪ್ಪಸದ ಬೇಂಟೆಯ ಮೇಳದಲಿ... ಭೂಪಾಲ ನಿಜಾಲಯವ ಹೊರಹೊರಟನು... ನಿಮ್ಮನು ಏನನು ಎಂಬೆನು... **"ಪಿಶಾಚೋನ್ನೃಪಾಲಕರ್"** ಎಂಬವೋಲ್... ವ್ಯಸನ ಅನುಬಂಧದ ಬೇಗೆ... ಮಹೀಪತಿಯ ಕಾನನದೊಳು ಕೊಂಡೊಯ್ದುದು.

ಆಯತದ ಶರ ಸಂಧಾನ ಕಲಿತ ಶರಾಸನನು... ಮೃಗಹಾನಿಗಳ ಹೆಕ್ಕಳದೊಳು... ಬೇಂಟೆಯಲಿ ಓಲಾಡಿದನು... ಆ ಪಾಂಡುವಿಗೆ ನಿನ್ನಯ ತಂದೆಗಾದ ವಿಪತ್ತಿನ ಅಂದದಲಿ ಬಂದುದು..

ಒಂದು ತಾವಿನಲಿ ಒಬ್ಬ ಮುನಿ... ಮೃಗ ಮಿಥುನ ರೂಪಿನಲಿ ನಿಂದು ರಮಿಸುತ್ತಿರೆ... ಮೃಗದ್ವಯವೆಂದು ಅಂಬನು ಹೂಡಿದನು... ಇಬ್ಬರಿಗೆ ಒಂದು ಶರದಲಿ ಕೀಲಿಸಿದಡೆ... ನರರಾಗಿ ಒರಲಿದರು.

ಕಿಂದಮ ಮುನಿ : ಹಾ... ಮಹಾದೇವಾ...

(ಎನುತ್ತೆ ಸನಾಮಮುನಿ... ತೆತ್ತಿಸಿದ ಬೆನ್ನಿನ ತೋಮರದ ಮರುಮೊನೆಯ ಕಿಬ್ಬಸುರಿನ ನಿಜಾಂಗನೆಯ...)

ಕಿಂದಮ ಮುನಿ : ಕಾಮಿನಿಯೆ ಕಡುನೊಂದೆಲಾ... ಮುಖ ತಾಮರಸವನು ತೋರು ತೋರು...

(ಎನುತ ಆ ಮುನೀಶ್ವರನು ನಿಜಸತಿಯ ಅಪ್ಪಿ ಮುಂಡಾಡಿದನು... ಕಾತರಿಪ ಮುನಿಮಿಥುನವನು ನಿಸ್ನಾತ ಕಂಡನು... ಆತ... ಬಿಲ್ಲ ಕೊಪ್ಪಿನಲಿ ಕದಪಿನ... ಮಕುಟದ ಒಲವಿನ ಚಿಕ್ಕ ನಾಸಿಕದ ಬೀತಸೊಂಪಿನ ಬಿರುದನಿಯ... ತಳಿತ ಬೆರಗಿನ ಪಾತಕದ... ಪರುಠವದ ಮುಖದ ಮಹೀತಳಾಧಿಪ ಸುಯ್ದು...)

ಪಾಂಡುರಾಜ : ಶಿವ ಶಿವಾ...

(ಎನುತ ನೊಂದನು.)

ಪಾಂಡುರಾಜ : ಇವರು ಎಂದು ನಾನು ಅರಿಯೆ... ಮೃಗವೆಂದು ಅರಿದೊಡೆ... ಇದು ಮತ್ತೊಂದು ಪರಿಯಾಯ್ತು... ಉರುವ ಮಾಣಿಕವೆಂದು ಕೊಂಡಡೆ... ಕೆಂಡವಾದುದಲ... ಸರವಿಯೇ ಹಾವಾದುದು... ಈ ಕೌತುಕವನು ಏನೆಂದು ಅರಿಯೆನು... ವಿಧಿ ಉರೆ ಮೈಮರೆಸಿ ಕೊಂದುದೆ.

(ಎನುತ ಆ ಸ್ಥಳಕೆ ಹರಿತಂದನು... ಸರಳ ಉಗಿದು ಬಿಸುಟನು... ಮಗ್ಗುಲ ಮಗುಚಿ... ನೆತ್ತರ ಹೊನಲಿನ್ ಈಚೆಗೆ ತೆಗೆದು... ಸಗ್ಗಳೆಯ ನೀರಿನಲಿ ತೊಳೆತೊಳೆದು ಒರಸಿದನು.)

ಪಾಂಡುರಾಜ : ಮಾನಿಸರು ಮೃಗವಹರೆ... ಅಕಟ, ಪಾಪಿಗಳಿಗೆ ಎತ್ತಣ ತಪವು... ಇದು ಎತ್ತಣ ಮೃಗ ವಿನೋದ ಕ್ರೀಡೆ... ಕೊಂದಿರಿ.

(ಎನುತ್ತ ಬಿಸುಸುಯ್ದ.)

ಕಿಂದಮ ಮುನಿ : ಮತ್ತೆ ನಾವೇ ಪಾಪಿಗಳೆ... ನೀನು ಉತ್ತಮನಲಾ... ಸಾಕು ಇದೇತಕೆ...

(ಎನುತ್ತ... ಮರಳುವ ಕಂಗಳ... ಅಡಿಗಡಿಗೆ ಉಗಿವ ಮೇಲುಸುರ... ಎತ್ತಿ ಹಾಯ್ಕುವ ಕೊರಳ ಬಿಕ್ಕಳ... ಕೆತ್ತುವ

ಅಧರದ ರೋಷದಲಿ... ಅವನಿಪನ ಮೇಲೆ ಹೊಗೆಸುತ್ತಿದ ಉರಿವಾತುಗಳ ಸೂಸಿದರು.)

ಕಿಂದಮ ಮುನಿ : ಎಲವೊ ರಾಜಬ್ರುವನೆ... ತನ್ನಯ ಲಲನೆಯ ಒಡನಿರೆ ಕೊಂದೆ... ಹಲವು ಮಾತೇಕೆ... ನಿನ್ನಯ ಲಲನೆಯನು ನೀ ಕೂಡಿದಾಗಲೇ... ಮರಣ ನಿನಗಹುದು.

(ಎನುತ ಆ ಮುನಿ ಮಿಥುನವು ಹರಣವ ಕಳೆದುದು... ಅವನಿಪ ತಿಲಕ ಹಸ್ತಿನಾಪುರಕೆ ದುಮ್ಮಾನದಲಿ ಬಂದನು... ಆದ ಹದನನು ಭೀಷ್ಮ ಧೃತರಾಷ್ಟ್ರಾದಿಗಳಿಗೆ ಅರುಹಿದರೆ...)

ಭೀಷ್ಮ ಮತ್ತು ಇತರರು : ವೈದಿಕೋಕ್ತಿಯ ಮಂತ್ರದಲಿ... ಹಯ ಮೇಧಾದಿ ಯಜ್ಞದಲಿ... ಈ ಮಹಾ ಪಾತಕ ವಿಘಾತಕವ ಸಂಪಾದಿಸುವೆವು.

(ಎನೆ, ಶಿರವ ಬಿದುರಿ... ಮಹಾ ದುರಾಗ್ರಹ ಬುದ್ಧಿಯಲಿ ಅರಮನೆಯ ಹೊರವಂಟನು... ಸಕಲ ಭಂಡಾರವನು ಭೂಸುರ ನಿಕರದಲಿ ಚೆಲ್ಲಿದನು... ಸುಜನ ಪ್ರಕರವನು ಗಾಂಗೇಯ ಧೃತರಾಷ್ಟ್ರರಿಗೆ ಕೈಗೊಳಿಸಿ...)

ಪಾಂಡುರಾಜ : ಮುನಿಹತಿಯ ಪಾತಕದ ನೆತ್ತಿಯ ಸಬಳವು ಸಕಲ ಯೋಗಾವಳಿಯೊಳು ಆವುದೊ...

(ಎನುತ ಚಕಿತಚಿತ್ತನು ಕಾನನವ ಐದಿದನು... ಅರಸ ಕೇಳ್, ನಿಮ್ಮ ಅರಸ ಶತಶೃಂಗ ಶೈಲದ ವರತಪೋಧನರ ಆಶ್ರಮಕೆ ಬಂದನು... ಆ ಪರಮ ಮುನಿವರರ ವಂದಿಸಿದನು... ಜಾಬಾಲಿ, ಗಾರ್ಗಿ, ಅಂಗಿರಸ, ಗಾಲವ, ಗೌತಮಾದ್ಯರು ಅರ್ಘ್ಯಾಸನಾದಿಯಲಿ ಧರಣಿಪನ ಹರುಷದಲಿ ಸಂಭಾವಿಸಿದರು... ಈತನು ಅಮಲ ಅಷ್ಟಾಂಗ ಯೋಗ ವಿಧೂತ ಕಿಲ್ಬಿಷನಾಗಿ... ಬಳಿಕ ತೀವ್ರ ತೇಜದಲಿ ಮಹಾ ತಪಸ್ವಿಗಳೊಳಗೆ ಸಂದನು... ಕುಂತಿ ಮಾದ್ರಿಯರು ತಾವು ಆ ತಪೋನಿಷ್ಠಂಗೆ ಅತಿಭೀತಿ ಭಕ್ತಿಯೊಳು ಅಧಿಕ ಶುಶ್ರೂಷ ಅತಿಶಯದಲಿ ಮನವ ಹಿಡಿದರು.) ❍

7. ಕುಂತಿಯ ಬಯಕೆ

(ಆದಿ ಪರ್ವ : ನಾಲ್ಕನೆಯ ಸಂಧಿ : ಪದ್ಯ:25 ರಿಂದ 35)

ಪಾತ್ರಗಳು

ಕುಂತಿ : ಪಾಂಡು ರಾಜನ ಮೊದಲನೆಯ ಹೆಂಡತಿ.

ಪಾಂಡು : ಹಸ್ತಿನಾವತಿಯ ರಾಜನಾಗಿದ್ದವನು. ಮುನಿಯ ಶಾಪಕ್ಕೆ ಗುರಿಯಾಗಿ, ಮನನೊಂದು ರಾಜ್ಯವನ್ನು ತೊರೆದು ಕಾಡಿನಲ್ಲಿರುವ ಶತಶೃಂಗ ಪರ್ವತ ಪ್ರಾಂತ್ಯದಲ್ಲಿ ತನ್ನ ಇಬ್ಬರು ಹೆಂಡತಿಯರಾದ ಕುಂತಿ ಮತ್ತು ಮಾದ್ರಿಯರೊಡನೆ ನೆಲೆಸಿದ್ದಾನೆ.

ಕುಂತಿಯ ಬಯಕೆ

ಪರಮ ವೈರಾಗ್ಯದಿ... ನಿರಂತಃಕರಣ ಭಾವ ಶುದ್ಧಿಯ... ನಿರುಪಮ ಮುರಹರ ಧ್ಯಾನೈಕ ಪೀಯೂಷ ಅಭಿಷೇಕದಲಿ ಹೊರೆದು ಹೊಂಗಿದ... ನಿಷ್ಪ್ರಪಂಚೋತ್ಕರದ ಸುಖದ ಧರಣಿಪತಿ... ಮುನಿಪನ ಮಹಾಪಾತಕವ ಕೆಡೆ ಒದೆದು ಉನ್ನತಿಯಲಿದ್ದನು... ನಾರಿಯರು ಮರುಗಿದರು.

ಕುಂತಿ : ಅಕಟ... ಮುದಿ ಹಾರುವನ ತನಿಬೇಂಟ... ನಮ್ಮಯ ಬೇರುಗೊಲೆ ಆಗಿರ್ದುದೇ... ಹಾ...

(ಎನುತ ಬಿಸುಸುಯ್ದು... ವಾರಿಜಾನನೆ ಕುಂತಿ ಆರು ಅರಿಯದವೋಲ್ ರಹಸ್ಯದಲಿ ಮೆಲ್ಲನೆ ಸಾರಿದಳು... ನಯದಲಿ ಪತಿಗೆ ಬಿನ್ನಹ ಮಾಡಿದಳು.)

ಕುಂತಿ : ನಿಮ್ಮಡಿಗಳು ಅರಿಯೆ... ಗಾಂಧಾರಿ ದೇವಿಗೆ ವರ ಮುನೀಶ್ವರನು ಇತ್ತ ವರವದು... ಭರತ ವಂಶಕೆ ಪುತ್ರ ಶತ ಅವತರಿಸುವುದು... ಅರಸ, ಇನ್ನು ನಮಗೆ ದುರುಳ ಮುನಿಪನ ಶಾಪವೇ ಸ್ತ್ರೀಪುರುಷ ಸಂಗ ವಿರೋಧ... **'ನಾಪುತ್ರಸ್ಯ ಗತಿ'** ಎಂದಿರದೆ ಶ್ರುತಿ ವಚನ... ಧರೆಯ ರಾಜ್ಯ ಸ್ಥಿತಿಗೆ ಗಾಂಧಾರಿಗೆ ಸುತರು ಅವತರಿಸುವರು... ಆ ಪುತ್ರರಿಗೆ ಸುತರು... ಆ ಸುತರ ಸುತರು... ಆ ಸುತರ ಸೂನುಗಳು... ಧರೆ ಪರಂಪರೆಯಿಂದಲಿ ಅತ್ತಲೆ ಸರಿವುದು... ಕಡೆಗೆ ಈ ನಿಮ್ಮಡಿಗೆ ದರ್ಭಾಸ್ತರಣ ಸಮಿಧಾಧಾನವೇ.

(ಎಂದಳು ಆ ಕುಂತಿ.)

ಪಾಂಡುರಾಜ : ವಜನಮುಖಿ ಕೇಳ್, ಪುಣ್ಯಹೀನರಿಗೆ ಪುತ್ರಮುಖ ದರ್ಶನವು ಸುಲಭವೆ... ಎನಿತು ಹಲುಬಿದರೇನು... ಮುನಿಯ ಬೇಟದ ಬೇಳುವೆಯ ದುಷ್ಕೃತಿಗೆ ಆವು ಹಂಗಿಗರು... ಮಾತಿನ ಹವಣ ನೀ ಬಲ್ಲೆ... ಇನ್ನು ಎನಗೆ ಕರ್ತವ್ಯವನು ಹೇಳು... ಮಾನಿನಿ, ಭೀತಿ ಬೇಡ.

ಕುಂತಿ : ನಾರಿಯರು... ಮತ್ತಲ್ಲಿ ರಾಜಕುಮಾರಿಯರು ಛಲವಾದಿಗಳು... ಗಾಂಧಾರಿಗೆ ಆದುದು ಪುತ್ರ ಸಂತತಿಯೆಂಬ ಭೇದದಲಿ ಬಿನ್ನವಿಸಿದೆನು... ಧೀರ, ಕಾರ್ಯದ ಭಾರವನು ನೀ ಬಲ್ಲೆ... ಇವಳು ವಿಕಾರಿ ಎನ್ನದಿರು.

(ಎಂದು ರಾಯನ ಚರಣಕೆ ಎರಗಿದಳು.)

ಪಾಂಡುರಾಜ : ಲೋಲಲೋಚನೆ... ದೃಢ ಪತಿವ್ರತೆ... ಏಳು ದುಃಖಿಸ ಬೇಡ... ಭೃಗು, ಜಾಬಾಲಿ, ಜಮದಗ್ನಿ, ಆದಿ ದಿವ್ಯ ಮುನೀಂದ್ರ ಗಣವಿದೆಲ... ಓಲಗಿಸುವುದು... ದುಷ್ಕೃತಿಗೆ ನಿಷ್ಪಾಳೆಯವು ಬಳಿಕ ಅಹುದು... ಕಾಂತೆ ಕೇಳು, ಮಂತ್ರ ವಿಶಾಲ ಬೀಜದಿ ಸಂತತಿ ಅಹುದು.

ಕುಂತಿ : ಭವದನುಗ್ರಹದಿಂದ ಸುತರು ಉದ್ಭವಿಸಿದರೆ ಲೇಸು... ಅನ್ಯಥಾ ಸಂಭವಿಸಿದರೆ... ದುಷ್ಕೀರ್ತಿ ವಧುವು ಕುಲವ ಎಂಜಳಿಸಲೇ... ಅವನಿಪತಿ ಕೇಳ್, ನಹುಷ, ನಳ, ಪೌರವ, ಸುಹೋತ್ರ ಆದ್ಯರ ನಿಜಾತ್ಮ ಉದ್ಭವರ ಪಾರಂಪರೆಗೆ ಗತಿಯೇನು.

ಪಾಂಡುರಾಜ : ಅರಸಿ ಕೇಳ್, ತತ್ ಬೀಜ ಪಾರಂಪರೆ ಮುರಿಯೆ... ತತ್ ಕ್ಷೇತ್ರದಲಿ ಮುನಿವರರ ಕಾರುಣ್ಯದಲಿ ಪುತ್ರೋದ್ಭವವು... ಅದೇ ವಿಹಿತ... ಪರಮ ವೈದಿಕ ಸಿದ್ಧವಿದು... ಸರಸಿರುಹ ಮುಖಿ, ನಿಶ್ಶಂಕೆಯಲಿ ನೀ ಮುನಿ ಮಂತ್ರೋಪದೇಶವನು ಧರಿಸು... ಇದುವೆ ನಿರ್ದೋಷ.

ಕುಂತಿ : ಆದಡೆ ಅವನಿಪ ಬಿನ್ನಹವು... ತನಗೆ ಆದಿಯಲಿ ದೂರ್ವಾಸಮುನಿ ಕರುಣೋದಯಲಿ ಇತ್ತ ಐದು ಮಂತ್ರಾಕ್ಷರದ ವರವುಂಟು... ನೀ ದಯಾಂಬುಧಿ, ನಿನ್ನ ಅನುಗ್ರಹವು ಆದುದಾದರೆ, ತತ್ ವಿಧಾನದಲಿ ಪುತ್ರ ಕಾಮ್ಯವನು ಆದರಿಸುವೆನು.

ಪಾಂಡುರಾಜ : ಲೇಸನಾಡಿದೆ ಕುಂತಿ. ಮುನಿಯು ಉಪದೇಶಿಸಿದನೇ... ನಮ್ಮ ಭಾಗ್ಯವು ಇದೈಸಲೇ... ನೀ ದೃಢಪತಿವ್ರತೆ... ಎನ್ನ ಅನುಜ್ಞೆಯಲಿ ನೀ ಭಾಸುರರ... ಭರತವಂಶ ವಿಲಾಸರನು... ಕೃತ ಶತ್ರುಪಕ್ಷ ವಿನಾಶರನು ಬೆಸಲಾಗು. ಹೋಗು... ಎನ್ನಾಣೆ ಹೋಗು.

(ಎಂದ)

8. ಧರ್ಮರಾಯನ ಜನನ

(ಆದಿಪರ್ವ : ನಾಲ್ಕನೆಯ ಸಂಧಿ : ಪದ್ಯ–36 ರಿಂದ 40)

ಪಾತ್ರಗಳು

ಕುಂತಿ : ಪಾಂಡುರಾಜನ ಮೊದಲನೆಯ ಹೆಂಡತಿ

ಯಮ : ದೇವಲೋಕದಲ್ಲಿರುವ ದೇವತೆ.

ಧರ್ಮರಾಯನ ಜನನ

ತರುಣಿ ಪಾಂಡುವಿನ ಆಜ್ಞೆಯನು ನಿಜ ಶಿರದೊಳು ಆಂತು... ಸಮಸ್ತ ಮುನಿ ಮುಖ್ಯರಿಗೆ ವಂದಿಸಿ... ಹರಿ ಹರ ಬ್ರಹ್ಮಾದಿಗಳಿಗೆ ಎರಗಿ... ಸರಸಿಯಲಿ ಮಿಂದಳು... ಮುನೀಂದ್ರನ ಪರಮ ಮಂತ್ರಾಕ್ಷರವ ತಾನು ಉಚ್ಚರಿಸಿ ಯಮನನು ನೆನೆದಳು... ಆ ಕ್ಷಣ ಆತನು ಐತಂದ... ಸತಿಯ ಸಮ್ಮುಖನಾಗಿ ವೈವಸ್ವತನು ನುಡಿದನು...

ಯಮ : ಇದೇಕೆ ನಮ್ಮನು ಕ್ಷಿತಿಗೆ ಬರಿಸಿದೆ.

(ಎನಲು... ಲಜ್ಜಾ ಅವನತಮುಖಿಯಾಗಿ...)

ಕುಂತಿ : ಸುತನ ಕರುಣಿಪುದು.

(ಎನಲು... ಭಯ ಪರಿ ವಿತತ ವಿಮಲ ಸ್ವೇದಜಲ ಕಂಪಿತೆಯ ಮುಟ್ಟಿ...)

ಯಮ : ತಥಾಸ್ತು.

(ಎನುತ ಕೃತಾಂತ ಬೀಳ್ಕೊಂಡ... ಧಾರುಣೀ ಪತಿ ಕೇಳು, ಕುಂತೀ ನಾರಿಗೆ ಗರ್ಭ ಆದುದು... ಹರುಷದ ಭಾರದಲಿ ಸತಿ ತಗ್ಗಿದಳು... ನವ ಪೂರ್ಣಮಾಸದಲಿ ಚಾರುತರ ನಕ್ಷತ್ರ... ಶುಭ ದಿನ ವಾರ ಲಗ್ನದೊಳು... ಇಂದುಕುಲ ವಿಸ್ತಾರಕನು ಸುಕುಮಾರನು ಧರಣಿಯಲಿ ಅವತರಿಸಿದನು... ಅಖಿಲ ದೆಸೆ ನಿರ್ಮಲಿನವಾಯ್ತು... ದುಷ್ಕರ್ಮ ತತಿ ಬೆಚ್ಚಿದುದು... **"ಸಾಕ್ಷಾತ್ ಧರ್ಮವೇ ಧರಣಿಯಲಿ**

ನೃಪ ರೂಪಾಗಿ ಜನಿಸಿತಲ.. ದುರ್ಮಹೀಶರ ಹೊತ್ತ ಭಾರದ ಕರ್ಮ ವೇದನೆ ಧಾತ್ರಿಗೆ ಇಳಿದುದು... ... ಧರ್ಮವು ಇನ್ನು ಎಮಗೆ ಅಹುದು" ಎನುತ ಮುನಿ ನಿಕರ ಹೆಚ್ಚಿದುದು... ಧರಣಿಪತಿ ಧರ್ಮಜನ ಮುಖ ಸಂದರುಶನವ ಮಾಡಿದನು... ಹೆಚ್ಚಿದ ಹರುಷ ಭಾರಕೆ ಚಿತ್ತ ತಗ್ಗಿತು... ಗಜಪುರದೊಳು ಪುತ್ರೋತ್ಸವದ ನುಡಿ ಅಡಿಗಡಿಗೆ ಹರಿದು ಅಬ್ಬರವಾಯ್ತು... **"ಪಾಂಡುವಿನ ಅರಸಿಯಲಿ ಸಂತಾನ ಜನಿಸಿದುದು"** ಎಂದು ಜನಜನಿತ ಮುಗ್ಗಿತು.

❍

9. ಗಾಂಧಾರಿಯ ಆತಂಕ

(ಆದಿಪರ್ವ : ನಾಲ್ಕನೆಯ ಸಂಧಿ : ಪದ್ಯ 40 ರಿಂದ 46)

ಪಾತ್ರಗಳು

ಗಾಂಧಾರಿ : ಧೃತರಾಷ್ಟ್ರನ ಹೆಂಡತಿ. ಪಟ್ಟದ ರಾಣಿ.

ವ್ಯಾಸ : ಪರಾಶರ ಮುನಿ ಮತ್ತು ಮತ್ಸ್ಯಗಂಧಿಯ ಮಗ. ವೇದಗಳನ್ನು ಸಂಪಾದಿಸಿದ್ದರಿಂದ ವೇದವ್ಯಾಸನೆಂಬ ಹೆಸರು ಬಂದಿತ್ತು.

ಗಾಂಧಾರಿಯ ಆತಂಕ

"ಪಾಂಡುವಿನ ಅರಸಿಯಲಿ ಸಂತಾನ ಜನಿಸಿದುದು" ಎಂದು ಜನಜನಿತ ಗಾಂಧಾರಿ ಕೇಳಿದಳು.

ಗಾಂಧಾರಿ : ಕುಂತಿಗೆ ಬಾಲ ಕೇಳಿ ವಿನೋದವೇ... ಹಾ... ಮುನ್ನ ಕೈ ಮೇಳವಿಸಿತೇ... ತಪ್ಪೇನು ತಪ್ಪೇನು... ಎನಗೆ ಮುನಿಪತಿ ಕಾಳು ಮಾಡಿದನೆ... ಠೌಳಿಕಾರನಲಾ... ಈ ಗರ್ಭಾಳಿಗಳನು ಸುಡಿ.

(ಎಂದು ಅಬಲೆ ಬಸುರನು ಒಡೆಮುರಿದು ಹೊಸೆದಳು... ಧರಣಿಯಲಿ ಖಂಡದ ಸುಥಾಳದ ಜಿಗಿಯ ಪೇಸಿಕೆ ನಿಕರ ನೂರೊಂದು ಬಲು ಮಾಂಸದ ಸುರಕ್ತದ ಘಟ್ಟಿಗಳು ಉದುರಿದವು... ವಾಮಾಂಘ್ರಿಯಲಿ ಕೆದರಿದಳು ನೂಕಿದಳು.)

ಗಾಂಧಾರಿ : ಕೈನೆಯರನು ಕರೆ... ಹಾಯ್ಕಿವ ಹೊರಗೆ.

(ಎನುತ ಕಠೋರ ಕೋಪದಲಿ ನೋಡಿದಳು... ತನ ತನಗೆ ನಡುನಡುಗಿ ಕಾಂತಾಜನವು ಬಂದುದು.)

ಕಾಂತಾಜನ : ತಾಯೆ, ಬೆಸನ ಏನು.

ಗಾಂಧಾರಿ : ಊರ ಹೊರಗೆ ಇವನು ಬಿಸುಡಿ.

(ಎಂಬ ಆ ಮುಹೂರ್ತದಲಿ... ಮುನಿಪ ವೇದವ್ಯಾಸನು ಆಕೆಯ ಮನೆಗೆ ಬಂದನು... ಈ ಕಾಮಿನಿಯ ಕೋಲಾಹಲವ ಕಂಡನು.)

ವೇದವ್ಯಾಸ : ಇದೇನು... ಏನು

(ಎಂದು ಬೆಸಗೊಂಡ.)

ಗಾಂಧಾರಿ : ಭರತ ಸಂತಾನಕೆ ಕುಮಾರರ ಹೆರುವೆ ನಾ ಮುನ್ನ ಎಂದು..ನಿಮ್ಮಡಿಯ ಕೃಪೆಯಲಿ ಮಂತ್ರಭಾವಿತವ ಗರ್ಭವ ಧರಿಸಿದೆನು..ಇವರ ಭಾರವ ಧರಿಸಿದೆನು..ವರುಷವು ಎರಡಾಯ್ತು..ದಾಯಾದ್ಯರೊಳಗೆ ಮಗನು ಅವತರಿಸಿದನು.

(ಎನುತ ಗಾಂಧಾರಿ ಮುಖ ತಿರುಹಿದಳು.)

ವ್ಯಾಸ : ಮರುಳು ಹೆಂಗುಸಲಾ..ಮಹಾತ್ಮರ ಪರಿಯ ನೀನು ಎಂತು ಅರಿವೆ.. ಪಾಪಿ, ಗರ್ಭೋತ್ಕರವ ಕೆಡಿಸಿದೆ..ನೀ ಸಾರು.

(ಎನುತ ಮುನಿ ಮುಳಿದು..ಘೃತಪೂರಿತದ ಕೊಪ್ಪರಿಗೆಗಳನು ತರಿಸಿದನು..ಒಂದೊಂದನು ಒಂದರೊಳು ಇರಿಸಿ..ರಕ್ಷೆಗಳ ರಚಿಸಿ..ಮಂತ್ರಿಸಿ ನೀರ ತಳಿದನು.)

ವ್ಯಾಸ : ಗಾಂಧಾರಿ, ಚಿಂತೆಯಿಲ್ಲದೆ ನೂರುದಿನ ಪರಿಯಂತ ರಕ್ಷಿಸು... ಬಳಿಕ ನಿನ್ನಯ ಸಂತತಿಯ ಸಾಮರ್ಥ್ಯವನು ನೋಡು.

(ಎಂದು ಕಂತುಪಿತ ಸನ್ನಿಭನು ಸತಿಯನು ಸಂತವಿಸಿ ಮರಳಿದನು.)

❍

10. ಭೀಮ... ದುರ್ಯೋಧನ ಜನನ

(ಆದಿ ಪರ್ವ : ನಾಲ್ಕನೆಯ ಸಂಧಿ : ಪದ್ಯ–46 ರಿಂದ 54)

ಪಾತ್ರಗಳು

ವಾಯುದೇವ : ದೇವಲೋಕದ ದೇವತೆ.

ಕುಂತಿ : ಪಾಂಡುರಾಜನ ಮೊದಲನೆಯ ಹೆಂಡತಿ

ವಿದುರ : ವ್ಯಾಸ ಮುನಿ ಮತ್ತು ದಾಸಿಯ ಮಗ.

ದ್ವಿಜರು : ಧೃತರಾಷ್ಟ್ರ ರಾಜನ ಓಲಗದಲ್ಲಿರುವ ಬ್ರಾಹ್ಮಣರು

ಭೀಮ... ದುರ್ಯೋಧನ ಜನನ

ಧರಣೀ ಕಾಂತ ಕೇಳೈ, ಬನದೊಳು ಇತ್ತಲು ಭೀಮನ ಉದ್ಭವವ... ಕಾಮಿನಿ ಸರೋವಾರಿಯಲಿ ನಿಯಮದಲಿ ಮಿಂದಳು... ಬೀಜಮಂತ್ರ ವ್ಯಯವ ಮಾಡಿದಳು... ಅಮರ ನಿಕರವ ನೋಡಿ... ಕೈ ಮುಗಿದು ವಾಯುವನು ಬಯಸಿದಳು... ಸಮೀರನು ನಿಜ ಮೂರ್ತಿಯಲಿ ಬಂದು... ಆ ಕುಂತಿಯನು ನುಡಿಸಿದನು.

ವಾಯುದೇವ : ಎಮ್ಮ ಬರಿಸಿದ ಹದನ ಅದೇನು?

ಕುಂತಿ : ಬರಿಸಿದುದು ಬೇರೇನು... ಸುತನನು ಕರುಣಿಸುವುದೈಸಲೆ.

(ಎನಲು, ಸಂಸ್ಪರುಶನದಿ...)

ವಾಯುದೇವ : ಭವತ್ ಇಷ್ಟಮಸ್ತು.

(ಎನುತ್ತಲು... ಪವಮಾನನು ಅಂಬರಕೆ ಮರಳಿದನು... ಈ ಪಂಕರುಹಮುಖಿ ಬೆಸಲಾದಳು... ಒಂದೇ ವರುಷ ಗರ್ಭವ ಧರಿಸಿ... ಅವನಿಸುತ ವಾರ ತ್ರಯೋದಶಿ ದಿವದ ಮಧ್ಯದೊಳು ಅರ್ಕನಿರೆ... ಮಘೆಯಲಿ ಶುಭಗ್ರಹ ಲಗ್ನದ ಉದಯದಲಿ ಸಂಭವಿಸಿದನು... ಪರಬಲ ಕಾಲ ಭೈರವನ ಭವದ ಮಾತ್ರದೊಳು... ಅಹಿತ ಪಾರ್ಥಿವ ನಿವಹ ನಡುಗಿತು... ಭೂಮಿಪತಿ, ಭೀಮಸೇನನ ಜನನದ ಅದ್ಭುತವ ಅದೇನನು ಹೇಳುವೆನು... ಭೀಮನು

ಉದಯಿಸಿದ ಇರುಳು ಕೌರವ ಭೂಮಿಪತಿ ಜನಿಸಿದನೆಲ್ಲೈ... ನಿಮ್ಮ ಆ ಮಹಾತ್ಮನ ಹುಟ್ಟು ಅಖಿಳ ಜನಮನವ ಬೆದರಿಸಿತು... ಭೂಮಿ ನಡುಗಿತು... ಧೂಮಕೇತುಗಳು ದೆಸೆಗೆ ಹರಿದವು... ಬಳಿಕ ಆ ಮಹಾನಗರದಲಿ ಭರದಲಿ ಭೂರಿ ಗೋಮಾಯು ಒದರಿದವು... ಧೃತರಾಷ್ಟ್ರನು ಅವನೀಸುರರ ಕರೆಸಿದನು... ಕುಮಾರನ ದರುಶನದ ಸಮನಂತರದಲಿ ಉತ್ಪಾತ ಫಲಗತಿಯ ಬೆಸಗೊಂಡನು.)

ದ್ವಿಜರು : ಭರತ ವಂಶವನು... ಉಳಿದ ಭೂಮೀಶ್ವರರ ಅನಂತವನು... ಈತನೇ ಸಂಹರಿಸುವನು... ಇದಕೇನು ಸಂದೇಹ.

(ಎಂದರು ಆ ದ್ವಿಜರು .)

ವಿದುರ : ಕುಲಕೆ ಕಂಟಕನಾದಡೆ ಒಬ್ಬನ ಕಳೆವುದು... ಊರ ಅಳಿವಿನಲಿ ಕುಲವನು ಒಂದನು ಕಳೆವುದು... ದೇಶದ ಅಳಿವಿನಲಿ ಊರ ಕೆಡಿಸುವುದು... ಇಳೆಯನು ಅಖಿಳವ ಬಿಸುಡುವುದು... ತನ್ನ ಉಳಿವ ಮಾಡುವುದು ಎಂಬ ವಚನವ ತಿಳಿವುದು... ನೀನು ಈತನ ಬಿಸುಟು ಕಳೆ.

(ಎಂದನಾ ವಿದುರ... ಸುತನ ಮೋಹದ ತಿಮಿರವು... ಆ ದುಸ್ಥಿತಿಯನು ಈಕ್ಷಿಸಲು ಈವುದೇ... ಗಾಂಧಾರಿ ದುರ್ಮತಿಯೊಳು ಈತನ ಬಿಸುಡಲು ಈಸಿದುದಿಲ್ಲ... ಅನಿಬರಿಗೆ ಗುಣನಾಮಕರಣದಲಿ ಸುತನಿರೀಕ್ಷಣ ಜಾತಕರ್ಮ ಉಚಿತದ ದಾನಂಗಳಲಿ ಜನಪ ಭೂಸುರ ತತಿಯ ದಣಿಸಿದನು... ದುರ್ಯೋಧನನು... ದುಶ್ಶಾಸನ.. ವಿಕರ್ಣ... ಸುಬಾಹು... ದುಸ್ಸಹ... ಕನಕವರ್ಣ... ಸುಷೇಣ.. ದೀರ್ಘೋದರ... ಮಹೋದರನು... ಜನವಿಜಯ... ಜಲಸಂದ... ದೃಢವಾಹನ.. ವಿವಿಂಶತಿ.. ಕುಂಡಧಾರಕನು ಎನಲು...ನೂರ್ವರ ನಾಮಕರಣವನು ಅರಸ ಮಾಡಿಸಿದ.)

❍

11. ಅರ್ಜುನ... ನಕುಲ... ಸಹದೇವ... ಕೃಷ್ಣ ಜನನ

(ಆದಿಪರ್ವ: ನಾಲ್ಕನೆಯ ಸಂಧಿ : ಪದ್ಯ–59 ರಿಂದ 66)

ಪಾತ್ರಗಳು

ಕುಂತಿ : ಪಾಂಡುರಾಜನ ಮೊದಲನೆಯ ಹೆಂಡತಿ

ಮಾದ್ರಿ : ಪಾಂಡುರಾಜನ ಎರಡನೆಯ ಹೆಂಡತಿ.

ದೇವೇಂದ್ರ : ದೇವತೆಗಳ ಒಡೆಯ. ಈತನ ಅನುಗ್ರಹದಿಂದ ಕುಂತಿಯು ಅರ್ಜುನನ್ನು ಮಗನನ್ನಾಗಿ ಪಡೆದಳು.

ಅಶ್ವಿನೀ ದೇವತೆಗಳು : ಇಬ್ಬರು ಸೋದರರು. ಈ ದೇವತೆಗಳ ಅನುಗ್ರಹದಿಂದ ಮಾದ್ರಿಯು ನಕುಲ ಮತ್ತು ಸಹದೇವರನ್ನು ಮಕ್ಕಳಾಗಿ ಪಡೆದಳು.

ಕೃಷ್ಣ : ಯದುಕುಲದ ವಸುದೇವ ಮತ್ತು ದೇವಕಿ ದಂಪತಿಯ ಮಗ.

ಅರ್ಜುನ... ನಕುಲ... ಸಹದೇವ... ಕೃಷ್ಣ ಜನನ

ಕುಂತಿ : ವಸುಧೆಗೆ ಅತಿ ಬಲನೊಬ್ಬ ಕಂದನ ಬೆಸಲಹೆನು.

(ಎಂದೆನುತ ಆ ಕುಂತಿ... ಸಾರಸ ಲಸಿತ ಕಮಲಾಕರದ ತೀರಕೆ ಬಂದಳು... ಮಿಂದು ಕಡು ಶುಚಿಯಾಗಿ... ಸುಮನೋವೃಂದದೊಳಗೆ ಮುನೀಂದ್ರನ ಮಂತ್ರ ಶಕ್ತಿಯಲಿ ಆರೈದು ನೋಡಿ... ಪುರಂದರನ ನೆನೆದಳು... ಅಲ್ಲಿಗೆ ಬಂದನು.)

ದೇವೇಂದ್ರ : ಅರವಿಂದಲೋಚನೆ, ಬಯಕೆಯೇನು ಹೇಳು...

(ಎನಲು... ಲಜ್ಜಾನುಭಾವದಲಿ ಪೂರ್ಣೇಂದುಮುಖಿ ತಲೆವಾಗಿದಳು.)

ದೇವೇಂದ್ರ : ನಿನಗೆ ಸುತನನು ಇತ್ತೆನು. ಲೋಕತ್ರಿತಯದಲಿ ಬಲುಗೈ ಕಣಾ... ಪಶುಪತಿಗೆ ಪುರುಷೋತ್ತಮಗೆ ಸರಿಮಿಗಿಲೆಂಬ ಸಂದೇಹ... ಶತ ಭವಾಂತರ ಪುಣ್ಯತರು ಕಾಮಿತವ ಫಲಿಸಿತು ಹೋಗು.

(ಎನುತ ಸುರಪತಿ ಲತಾಂಗಿಗೆ ವರವನಿತ್ತು... ಗಗನವನು ಅಡರಿದನು... ನವಮಾಸ ತೀವಿದವು... ವಿಮಲ ವಿಭಾವಿಸುವಿನ ಉದಯದಲಿ... ತಾರೆ ಉತ್ತರೆ ಫಲುಗುಣಾಹ್ವಯದ ಶುಭ ಲಗ್ನಾವಲಂಬನ ಜೀವಕೇಂದ್ರ

ಸ್ಥಿತಿ... ದಶಾ ದಿಗ್ಭಾವಿತ ಗ್ರಹರಾಶಿಯಿರೆ... ಗಾಂಡೀವಿ ಜನಿಸಿದನು... ಒಡನೆ ಜನದ ಸುಮ್ಮಾನ ಜನಿಸಿತು... ದೇವ ದುಂದುಭಿ ಮೊಳಗಿದವು... ಕುಸುಮಾವಳಿಯ ಮಳೆ ಸುರಿದುದು... ಆಡುವ ದೇವ ವಧುಗಳ ಹೊಳೆವ ಕಂಗಳ ಥಾಳ ಮಿಂಚಿದವು... ಭುವನಾವಳಿಯೊಳು ತೀವಿದ ಉತ್ಸಹವು ಉಬ್ಬರಿಸೆ... ಇಂದ್ರಾದಿ ನಿಖಿಳ ಸುರಾವಳಿಗಳು ಉರೆ ಕೂಡೆ ಧನಂಜಯನ ಕೊಂಡಾಡಿತು... ರಣ ಭಯಂಕರನು ಅರ್ಜುನನು ಧಾರುಣಿಯೊಳು ಉದಿಸುವ ಮುನ್ನ... ತಿಂಗಳನು ಎಣಿಸಿದರೆ ಆರಾಯ್ತು... ಮಧುರೆಯ ರಾಜಭವನದಲಿ ವರ ಶ್ರಾವಣ ಬಹುಳದ ಅಷ್ಟಮಿ ಇರುಳು ರೋಹಿಣಿಯಲಿ ದೇವಕಿಯ ಜಠದಲಿ ಗುಣರಹಿತನು ಅಚ್ಯುತನು ಅವತರಿಸಿದನಲ್ಲೈ... ಕೇಳು ನೃಪ... ಈತ ನರ ಋಷಿ... ಆತನು ನಿಖಿಳ ಭುವನ ಖ್ಯಾತ ನಾರಾಯಣನಲ್ಲೈ... ಕೃಷ್ಣಾವತಾರದಲಿ ಉರ್ವೀಭಾರ ಸಂಹರಣದ ವಿನೋದದಲಿ... ಭೂತಪತಿ ಮೊದಲಾದ ದಿವಿಜವ್ರಾತವೇ ನರ ರೂಪದಲಿ ಬಳಿಕ ಸಂಭೂತವಾದುದು.)

ಕುಂತಿ : ತನಗೆ ಮೂವರು ಸುತರು ಸಾಕು .

(ಎಂದು ಈಕೆ ಮಾದ್ರೀ ದೇವಿಗೆ... ಅಗ್ಗದ ಶೋಕಿತೆಗೆ... ಮಂತ್ರೋಪದೇಶ ವಿಧಾನವನು ಕಲಿಸಿ...)

ಕುಂತಿ : ನಾಕ ನಿಲಯರ ಒಲಿಸು.

(ಎನಲು... ಆಕೆ ಹರ್ಷದಲಿ ಬಂದು... ಲೋಕ ವಿಶ್ರುತರು ಅಶ್ವಿನೀ ದೇವರನು ಕೃತ ನಿಯಮದಲಿ ನೆನೆದಳು... ಮಹೀತಳಕೆ ಅವರಿಬ್ಬರು ಬಂದರು... ಇಂದುವದನೆಗೆ ಸುತರನು ಇತ್ತರು... ಮಂದಗಮನೆಯ ಕಳುಹಿ... ಗಗನ ಮಂಡಲಕೆ ಹಾಯ್ದರು... ಅರ್ಜುನನಿಂದ ಬಳಿಕ ಒಂದು ವರುಷಕೆ ಕಿರಿಯರು ಅವತರಿಸಿದರು... ಮುನಿ ವೃಂದ ಕುಮಾರಕರ ನೆರೆ ಪತಿಕರಿಸಿ ಕೊಂಡಾಡಿತು.) ❍

12. ಪಾಂಡುರಾಜನ ಸಾವು

(ಆದಿಪರ್ವ : ಅಯ್ದನೆಯ ಸಂಧಿ : ಪದ್ಯ 1 ರಿಂದ 25)

ಪಾತ್ರಗಳು

ಪಾಂಡುರಾಜ : ಹಸ್ತಿನಾವತಿಯ ರಾಜನಾಗಿದ್ದವನು. ಈಗ ರಾಜ್ಯವನ್ನು ತೊರೆದು ತನ್ನ ಹೆಂಡತಿಯರಾದ ಕುಂತಿ ಮತ್ತು ಮಾದ್ರಿಯರೊಡನೆ ಶತಶೃಂಗ ಪರ್ವತ ಪ್ರಾಂತ್ಯದ ಮುನಿಗಳ ಆಶ್ರಮವಾಸಿಯಾಗಿದ್ದಾನೆ.

ಕುಂತಿ : ಪಾಂಡುರಾಜನ ಮೊದಲನೆಯ ಹೆಂಡತಿ.

ಮಾದ್ರಿ : ಪಾಂಡುರಾಜನ ಎರಡನೆಯ ಹೆಂಡತಿ.

ಪಾಂಡು ನಂದನರು : ಧರ್ಮರಾಯ–ಭೀಮ–ಅರ್ಜುನ–ನಕುಲ–ಸಹದೇವ.

ಪಾಂಡುರಾಜನ ಸಾವು

ಕೇಳು ಜನಮೇಜಯ ಧರಿತ್ರೀಪಾಲ, ಶತಶೃಂಗಾದ್ರಿಯಲಿ ತನ್ನ ವೀರಕುಮಾರಕರು ಸಹಿತ ಭೂಪಾಲನಿರ್ದನು... ವ್ಯಾಳ..ವನಗಜ.. ಸಿಂಹ.. ವೃಕ.. ಶಾರ್ದೂಲ ಭಯವನು ಪರಿಹರಿಸಿ... ಪಾವನ ತಪೋವನವ ಮುನಿಪಾಳಿಗೆ ಆಶ್ರಯವೆನಿಸಿದನು... ಆ ಸಮಸ್ತ ಮುನೀಂದ್ರರೊಡನೆ ಅಭ್ಯಾಸ... ಆ ದಿವ್ಯಾ ಶ್ರಮದ ಸಹವಾಸ... ಆ ತಪ... ಆ ಕುಮಾರ ಪರಾಕ್ರಮ ಆಲೋಕ... ಆ ಸಮಂಜಸ ಸತಿಯರಿಬ್ಬರ ಉಪಾಸನೆಗಳು... ಆ ವಿಭವಕೆ ಇಭಪುರಿಯಾ ಸಮಸ್ತ ಐಶ್ವರ್ಯವದು ಭೂಪತಿಗೆ ತೃಣವಾಯ್ತು.

ಪಾಂಡುರಾಜ : (ತನ್ನ ಮನದಲ್ಲಿ)

ವಿಪಿನದಲಿ ಸುತ ವಿನೋದದ ಸಿರಿಗೆ ಅಮರಾವತಿಯ ಸಿರಿ ತೊತ್ತೆಂದು.. ವಿಮಲವ್ರತ ತಪೋಲಕ್ಷ್ಮಿಗೆ ವಿಲಾಸಿನಿ ಮುಕ್ತಿವಧುವೆಂದು... ಯತಿ ಪದಾಂಬುಜ ನಿತ್ಯಸೇವಾ ಸತಿಗೆ ಜಗತ್ರಯಾದಿ ಸ್ಥಿತಿ ಪದವಿ ದಾಸಿ...

(ಎಂದು ಕಲಿಪಾಂಡು ಉಬ್ಬಿದನು... ಧರಣೀಶ್ವರನ ಹಿರಿಯ ಮಗಂಗೆ ವರುಷ ಹದಿನಾರಾಯ್ತು... ಭೀಮಗೆ ವರುಷ ಹದಿನೈದು... ಅರ್ಜುನಗೆ ಹದಿನಾಲ್ಕು... ಕಿರಿಯರಿಬ್ಬರಿಗೆ ಹದಿಮೂರು... ಅನಿಬರು ಆ ಮುನಿವರರಿನ್ ಅಧ್ಯಯನಾದಿ ವಿದ್ಯಾನಿರತರಾದರು... ಒಂದು ವಸಂತಮಯ ಸಮಯ ಬಂದುದು... ಅಗ್ಗದ ತಂಪು ತೆಗೆದುದು... ನದಿ ಸರಸಿಗಳ

ತಡಿಯಲಿ ಹೆಜ್ಜೆಯಾದುದು... ಹಾವಸೆ ಹರಿದುದು... ಹಗಲು ಹಿಮಜಲವ ಓಕರಿಸಿದುದು... ದೂರಕೆ ನೆಳಲುಗಳು ಸೊಗಸಿದವು... ಸೆಗಳಿಕೆಗಳು ಏರಿದವು... ಜನ ನಿಕರ ತಂಗಾಳಿಗೆ ವಿಹಾರಿಸಿ ಕೂಡೆ ಮೈಯ ತೆತ್ತುದು...

ಕುಸುಮಮಯ ಸಮಯ... ಯೋಗಿಗೆ ಎತ್ತಿದ ಖಡುಗ ಧಾರೆ... ವಿಯೋಗಿಗೆ ಎತ್ತಿದ ಸಬಳ... ಅಖಿಳ ರಾಗಿಗಳ ಹೆಡತಲೆಯ ದಡಿ... ನೈಷ್ಠಿಕರಿಗೆ ಅಲಗಣಸು... ಆಗಮಿಕರ ಎದೆ ಶೂಲ... ಗರ್ವಿತ ರಾಗಿಗಳ ಗಳಗಾಳ... ಭೋಗಿಗಳ ಕುಲದೈವವು ವೆಗ್ಗಳ ಎಸೆದುದು.

ಮೊರೆವ ತುಂಬಿಯ ಗಾಯಕರ... ನಯಸರದ ಕೋಕಿಲ ಪಾಠಕರ... ಬಂಧುರದ ಗಿಳಿಗಳ ಪಂಡಿತರ... ಮಾಮರದ ಕರಿಘಟೆಯ... ಅರಳಿದ ಅಂಬುಜ ಸತ್ತಿಗೆಯ... ಮಂಜರಿಯ ಕುಸುಮದ ಚಾಮರದ ಚಾತುರ ವಸಂತನೃಪಾಲ ಪಾಂಡುವಿನ ಮೇಲೆ ನಡೆದನು... ಫಲಿತ ಚೂತದ ಬಿಣ್ಪುಗಳ... ನೆರೆ ತಳಿತ ಅಶೋಕೆಯ ಕೆಂಪುಗಳ... ಪರಿ ದಲಿತ ಕಮಲದ ಕಂಪುಗಳ... ಬನಬನದ ಗುಂಪುಗಳ... ಎಳಲತೆಯ ನುಣ್ಪುಗಳ... ನವ ಪರಿಮಳದ ಪವನನ ಸೊಂಪುಗಳ ವೆಗ್ಗಳಿಕೆ ಝಳಪಿಸಿ ಹೊಯ್ದು... ಜನದ ಕಣ್ಮನವ ಸೆಳೆದುದು...

ಮಧುಮಾಸ ಪಸರಿಸಿತು... ಕೂಡೆ ತುಂಬಿಗಳು ಕುಸುಮ ರಸದ ಉಬ್ಬರದ ತೊರೆಯನು ತಾವರೆ ಎಸಳ ದೋಣಿಯ ಮೇಲೆ ಹಾಯ್ದವು... ಕೊಂಚೆಗಳು ಹಗಲೆಸೆವ ದಂಪತಿವಕ್ಕಿ ಸಾರಸ... ರಾಜಹಂಸಗಳು ಒಸರ್ವ ಮಕರಂದದ ತುಷಾರದ ಕೆಸರೊಳದ್ದವು... ಬಹಳ ಪರಿಮಳದ ಒಗುಮಿಗೆಯ ತಂಗಾಳಿ ಜಗವ ಹೊರೆದುದು... ವಿರಹಿಗಳು ವನ ವೀಧಿಗಳ ವಳಯವ ಹೊಕ್ಕು ಮರಳಿದುದಿಲ್ಲ... ವಿಗಡ ಮುನಿ ಜನವು ಹೊಗುವ ಕಾಮನ ದಳದ ಚೂಣಿಯ ಸೊಗಸು ಹೊಯ್ದರೆ ಕೈದುವಿಕ್ಕಿತು... ಏನನು ಎಂಬೆನು

ನೃಪತಿ ಕೇಳೆಂದ. ಆ ವಸಂತದೊಳು ಒಮ್ಮೆ ಮಾದ್ರೀ ದೇವಿ... ವನದೊಳಗೆ ಹೂವಿನಲಿ ಸರ್ವಾಂಗ ಶೃಂಗಾರದ ವಿಲಾಸದಲಿ ಆಡುತಿರ್ದಳು... ಅಲ್ಲಿಯೇ ತಿರುಗಾಡುತ್ತಿದ್ದ ಪಾಂಡುರಾಜನು ಮಾದ್ರಿಯನ್ನು ನೋಡಿ..)

ಪಾಂಡುರಾಜ : ಆವಳ್ ಇವಳ್... ಊರ್ವಶಿಯೊ... ರಂಭೆಯೊ... ದೇವವಧುಗಳ ಸುಳಿವೊ ತಾನ್ ಎನಲು... ಆವ ಚೆಲುವಿಕೆ ಶಿವಶಿವಾ...

(ಎಂದು ಅರಸ ಬೆರಗಾದ... ಕಾಮನ ಶರ ನಿಕರ ಲಾಗು ವೇಗವದು ಎಂತುಟೋ... ತೆಗೆ... ಹೂಗಣೆಗಳು ಐದಲ್ಲ... ರೋಮಗಳು ಎಂಟು ಕೋಟಿಯಲಿ ಕಣೆಗಳು ತಾಗಿದವು... ತೂಗಿ ನೆಟ್ಟವು. ಪ್ರಜ್ಞಾಸಾಗರಂಗಳು ಮಧ್ಯಕಟಿ ಜಾನ್ವಂಘ್ರಿ ಮಿತವಾಯ್ತು ಎಂಬವೊಲು... ಆ ಗರುವನು ಅಳುಕಿದನು... ಹಿಂದೆಲ್ಲವನು ಮರೆದು... ಕುಂತಿಯನು ಅರಿಯಲೀಯದೆ... ಮೆಲ್ಲಮೆಲ್ಲನೆ... ಎಳಲತೆ ತುರುಗಿದ ವನದೊಳು ಆಡುವ ವಧುವ ಸಾರಿದನು... ಸೆರಗ ಹಿಡಿದರೆ...)

ಮಾದ್ರಿ : ಬೇಡ... ಬೇಡ...

(ಎಂದು ಚರಣದಲಿ ಎರಗಿದಳು... ತರುಣಿಯ ತುರುಬ ಹಿಡಿದೆತ್ತಿದನು... ಹೆಣಗಿದರು... ಒಡನೆ ಝೋಂಪಿಸಿದ.)

ಮಾದ್ರಿ : ಕೊಂದೆಲಾ ಕಡುಪಾಪಿ... ಹಿಂದೆ ಮಾಡಿದ ಕೃತ್ಯವನು ಮರೆದಾ... ಮುನಿಯೆಂದ ನುಡಿ ಹೊಳ್ಳಹುದೆ... ಸುಡು... ದುರ್ವಿಷಯಕೆ ಎಳಸಿದಲಾ... ನಿನ್ನ ಅರಿವು ಬೆಂದುದೇ... ಇಂದು ಧೈರ್ಯವನು ನೀಗಿದೆ... ಅಕಟ... ನಿನ್ನಯ ನಂದನರಿಗೆ ಆರುಂಟು...

(ಎನುತ ಲತಾಂಗಿ ಹೆಣಗಿದಳು... ಶಂಬರಾರಿಯ ಸಬಳವಲ್ಲಾ... ಬಯಲ ಅರಿತಗಿರಿತದ ಡೊಂಬಿನ ಆಗಮ ನೀತಿಗೀತಿಯ ಕೊಂಬುದೆ... ಬೇಗೆ ಮೂಡಿದುದು...

ಬೆಂಬಿಡದೆ ಮರಳಿದೊಡೆ ಮರುಮೊನೆ ಕೊಂಬುದು ಎಂಬವೊಲು... ಅವನಿಪತಿಯು ಅಬಲೆಯನು ಒತ್ತಂಬರದಿ ಹಿಡಿದು ಕಳವಳಿಸಿ ಕೂಡಿದನು... ಆ ಸುಖದ ಝೋಂಪಿನಲಿ ಮೈಮರೆದು ವದನ ಓಸರಿಸಿದುದು... ಕಂಗಳು ಪೈಸರಿಸಿದವು... ತೆಕ್ಕೆ ಸಡಲಿತು... ದೇಹ ಬಾರಿಸಿತು... ನಿಟ್ಟುಸುರು ಸೂಸಿದುದು... ರಾಣೀವಾಸದ ಉರದಲಿ ಕದಪನಿಟ್ಟು ಮಹೀಶನು ಒರಗಿದ ಹದನ... ಕಾಂತೆ ಭೀತಿಯಲಿ ಕಂಡಳು)

ಮಾದ್ರಿ : ಅಕಟ... ಪಾಂಡು ಮಹೀಶ, ವಿಷಕನ್ಯೆಯನು ಎನ್ನನು ಮುಟ್ಟಿದೈ... ಬೇಡ... ಕೆಡಿಸದಿರು ಎನ್ನೆನ್ನೇ... ಹದನ ತಾನರಿಯೆನೇ... ಪ್ರಕಟ ಕುರುಕುಲ ತಿಲಕರು ಈ ಬಾಲಕರನು ಆರಿಗೆ ಕೊಟ್ಟೈ... ಅಕಟ... ತನ್ನೊಡನೆ ಮುನಿದೈ ಮಾತಾನಾಡು.

(ಎಂದು ಒರಲಿದಳು ಮಾದ್ರಿ... ಸ್ವಲ್ಪ ದೂರದಲ್ಲಿದ್ದ ಕುಂತಿಯು ಈ ಆಕ್ರಂದನ ದನಿಯನ್ನು ಕೇಳಿ...)

ಕುಂತಿ : ಏನಿದು... ಎತ್ತಣ ರಭಸ... ಮಾದ್ರೀ ಮಾನಿನಿಯೊ... ಹಾ... ರಾಯನು ಆವ ಎಡೆ... ಅಂಗಸ್ಫುರಿತ ಶಕುನದಲಿ ಅರಿವೆನು... ಹಾನಿ ಹಿರಿದುಂಟು... ಏನು ಮಾರಿಯೊ... ಶಿವಶಿವಾ.

(ಎನುತ ಆ ನಿತಂಬಿನಿ ಕಾನನದೊಳು ಅಕ್ಕೆಯ ಸರದ ಬಳಿವಿಡಿದು... ಗಾಢ ಗತಿಯಲಿ ಐತಂದಳು... ಅವರಿಬ್ಬರನು ಕಂಡಳು... ಮೂರ್ಛೆಯಲಿ ಧೊಪ್ಪನೆ ದಿಂಡುಗೆಡೆದಳು... ಎಚ್ಚರು ಮರೆಗೊಂಡುದು... ಮಾದ್ರಿ ಮಿಗೆ ಹಲುಬಿದಳು... ಐವರು ಪಾಂಡುನಂದನರು ಗೋಳಿಡುತ ಚಂಡಿಕೆಗಳು ಅಲ್ಲಾಡೆ ಹರಿದರು... ಈತನ ಕಂಡು...)

ಪಾಂಡು ನಂದನರು : ಹಾ...

(ಎಂದು ಒರಲಿ... ಅವನಿಪನ ಮೇಲೆ ಹೊರಳಿದರು.)

ಬೊಪ್ಪ... ದೇಶಿಗರಾದೆವೈ... ನಮ್ಮ ಭಾಗ್ಯವನು ವಿಧಿ ತಪ್ಪಿಸಿತಲಾ... ಪೂರ್ವಕಾಲದಲಿ ಎಮ್ಮನು ನೀನಾರಿಗೆ ಒಪ್ಪಿಸಿದೆ... ನಿನಗೆ ಮುಪ್ಪಿನಲಿ ಈ ಅವಸ್ಥೆಯಿದು ಒಪ್ಪುದೇ... ಹೇರಡವಿಯಲಿ ಮಲಗಿಪ್ಪುದು ಏಕೆ...

(ಎಂದು ಒರಲಿ... ಆ ಕುಮಾರಕರು ಮರುಗಿದರು... ಕೇಳಿ, ಮುನಿವ್ರಜ ಹರಿತಂದುದು... ಕುಮಾರಕರ ಸಂತೈಸಿಯೆ ಏಳಿಗೆಯ ಕಡು ಶೋಕರಸದ ಛಡಾಳವನು ನಿಲಿಸಿದರು... ಆ ಕುಂತಿ ಮೂರ್ಛಾ ವ್ಯಾಳವಿಷ ಪರಿಹರಿಸಿ ಆಲಿಸಿದಳು.)

ಕುಂತಿ : ಇಂದು ತನ್ನನು ಬಿಸುಟ್ಯೆ...

(ಎನುತ ಧರಣೀಪಾಲಕನ ನೋಡಿದಳು.)

ಕುಂತಿ : ಅರಸ, ತನಗೆ ಅರುಹದೆ ಸುರಸ್ತ್ರೀಯರಿಗೆ ಹರಿದ್ಯೆ... ನಿನ್ನ ವಧುಗಳ ತುರುಬ ಕೊಯ್ಸುವೆನು... ತನಗೆ ಅವರ ತೊತ್ತಿರ ಮಾಡುವೆನು.

(ಎಂದು ಗೋಳಾಡುತ್ತಿರುವ ಕುಂತಿಯು ಈಗ ಮಾದ್ರಿಯನ್ನು ಕುರಿತು...)

ಕುಂತಿ : ಅರಸಿ, ನೀನು ಈ ಮಕ್ಕಳನು ಸಂವರಿಸಿಕೊಂಡು ಇಹುದು.

(ಎಂದು ಮಾದ್ರಿಯ ಕರವ ಹಿಡಿದರೆ... ಕಾಂತೆ ಕುಂತಿಗೆ ವಿನಯದಲಿ ಎಂದಳು.)

ಮಾದ್ರಿ : ಅಕ್ಕ, ಮರುಳೆಲೌ ನೀವು... ನಿಮ್ಮೈವರು ಕುಮಾರರು ನಿಮ್ಮ ಕೈಯೆಡೆ... ನನ್ನ ತೋಳಿನಲಿ ಧರಣಿಪತಿ ನಿಡು ನಿದ್ರೈದನು... ಸುರವಧುಗಳೊಡನೆ ಇರಲಿ... ನಿನ್ನಯ ಹರಿಬವು ಎನ್ನದು... ನೋಡು, ತನ್ನಯ ಪರಿಯನು... ಈತನ ನಿನಗೆ ಕೊಡೆನು.

(ಎಂದು ಅಂಘ್ರಿಗೆ ಎರಗಿದಳು... ಮುನಿಗಳು ಈಕೆಯ ತಿಳುಹಿ... ಮಾದ್ರಿಗೆ ಜನಪತಿಯ ಸಹಗಮನದಲಿ ಮತವೆನಿಸಿ... ಮುನಿಗಳೇ ಶವಸಂಸ್ಕಾರವನು ವೈದಿಕ

ವಿಧಾನದಲಿ ಮಾಡಿದರು... ಮಾದ್ರೀ ವನಿತೆ ಧರ್ಮಜನ ಕರೆದು... ತನ್ನ ಕುಮಾರರಿಬ್ಬರನ್ನು...)

ಮಾದ್ರಿ : ತನುಜ ನೀ ಸಲಹು.

(ಎಂದು ಕೊಟ್ಟಳು... ಪತಿಯ ಸಹಗಮನದಲಿ ಮಾದ್ರೀ ಸತಿ ಶರೀರವ ಬಿಟ್ಟಳು... ಈ ಕುಂತಿ ಐವರು ಸುತರು ಸಹಿತ ಮಿಂದು... ಅಖಿಳ ಮುನಿ ಸಂತತಿಗಳನು ಮುಂದಿಟ್ಟು ಪರೇತಕೃತ್ಯವನು ಶ್ರುತಿ ವಿಧಾನದೊಳು ಮಾಡಿಸಿ... ಆ ಶತಶೃಂಗ ಶೈಲದಲಿ ಸುತರ ಪಾಲಿಸುತಿರ್ದಳು.)

❍

13. ಹಸ್ತಿನಾವತಿಗೆ ಕುಂತಿ ಮತ್ತು ಪಾಂಡವರನ್ನು ಕರೆತಂದಿದ್ದು

(ಆದಿಪರ್ವ : ಅಯ್ದನೆಯ ಸಂಧಿ : ಪದ್ಯ 26 ರಿಂದ 32)

ಪಾತ್ರಗಳು

ಮುನಿಗಳು : ಶತಶೃಂಗ ಪರ್ವತ ಪ್ರಾಂತ್ಯದ ಆಶ್ರಮವಾಸಿಗಳು.

ವ್ಯಾಸ : ಪರಾಶರ ಮುನಿ ಮತ್ತು ಯೋಜನಗಂಧಿಯ ಮಗ.

ಯೋಜನಗಂಧಿ : ಶಂತನು ಮಹಾರಾಜನ ಹೆಂಡತಿ. ವ್ಯಾಸನ ತಾಯಿ.

ಹಸ್ತಿನಾವತಿಗೆ ಕುಂತಿ ಮತ್ತು ಪಾಂಡವರನ್ನು ಕರೆತಂದಿದ್ದು

ಮುನಿಗಳು : (ತಮ್ಮ ತಮ್ಮಲ್ಲಿಯೇ)

ಅರಸನು ಅಪಗತನಾದನು... ಆ ನೃಪನ ಅರಸಿ ಬಾಲಕಿ... ಮಕ್ಕಳೈವರು ಭರತ ಕುಲಜರು... ನಾವು ತಪಸಿಗಳು ಇರ್ಪುದು ಅರಣ್ಯ... ಆ ರಾಕ್ಷಸರು ಅರಿಗಳು... ನಾವು ಇನ್ನು ಇರಿಸುವುದು ಮತವಲ್ಲ... ಹಸ್ತಿನಪುರದೊಳು ಒಪ್ಪಿಸಿಬಹುದು ಮತ.

(ಎಂದುದು ಮುನಿಸ್ತೋಮ... ಕುಂತೀದೇವಿ ಸಹಿತ ಆ ನಂದನರನು ಐವರನು ಮುನಿಗಳು ಇಭಪುರಿಗಾಗಿ ತಂದರು... ಭೀಷ್ಮಾದಿಗಳಿಗೆ ಈ ಹದನ ಮುಂದೆ ಸೂಚಿಸಲು... ಉತ್ಸವದಿ ಅನಿಬರು ಇದಿರ್ವಂದರು... ಅಂದು ಭೀಷ್ಮ ಶುಭಮುಹೂರ್ತದೊಳು ನಗರಿಯ ಪರಿತೋಷದಲಿ ಹೊಗಿಸಿದನು...

ತಪೋಧನ ನಿವಹ ಇವರ ಜನನ ಕ್ರಮವನು... ಆ ಪಾಂಡುವಿನ ವಿಕ್ರಮವನು ಕೊಂಡಾಡಿದುದು... ಅವರಿಗೆ ಬಳಿಕಿನ ಮರಣ ಸಂಗತಿಯ... ಅವನಿಪನ ಸಂಸ್ಕಾರ... ಮಾದ್ರೀ ಯುವತಿ ಸಹಗಮನ... ಊರ್ಧ್ವ ದೇಹಿಕ ವಿವಿಧ ಕೃತ್ಯವನು... ಈ ಪ್ರಪಂಚವನು ಅರುಹಿದರು... ಮುನಿಗಳು ಆ ಕ್ಷಣ ಮರಳಿದರು... ಬಳಿಕ ತಜ್ಜನಪ ವೃತ್ತಾಂತವನು

ಜನಜನಿತ ವಿವರಿಸೆ, ಶೋಕರಸ ಜಲಧಿ ಉಬ್ಬಿ ಹರಿದುದು... ಜನಪ ಧೃತರಾಷ್ಟ್ರಾದಿ ಬಾಂಧವಜನ ಪುನಃ ಸಂಸ್ಕಾರದಲಿ ಭೂಪನನು ದಹಿಸಿದರು... ಅಲ್ಲಿ ಮಗುಳು ಊರ್ಧ್ವ ದೇಹಿಕವಾಯ್ತು...

ಅರಸ ಕೇಳೈ, ಪಾರಾಶರವ್ರತಿಪ ಭೀಷ್ಮ ಧೃತರಾಷ್ಟ್ರರನು ಬೋಧಿಸಿ... ಬಹಳ ಶೋಕ ಜ್ವರಕೆ ಬಿಡುಗಡೆ ಮಾಡಿದನು... ಯೋಜನಗಂಧಿಯನು ಕರೆದು...)

ವ್ಯಾಸ : ತಾಯೆ, ನೀವು ಇರಲು ಬೇಡೌ... ನಿಮ್ಮ ಈ ಭರತವಂಶದೊಳು ಒಗೆದ ಕಿಚ್ಚು... ನೃಪಕುಲವ ಉರುಹುವುದು... ಹೇಳಬಾರದು ಮುಂದಣದು ದುಷ್ಕಾಲವು... ಇಂದಿಗೆ ನಾಳೆ... ನಾಳೆಗೆ... ನಾಳೆ ಬೆಟ್ಟಿತು... ಕಾಲ ವಿಷಮವು... ವರ್ಣಧರ್ಮಾಶ್ರಮದ ನೆಲೆಹೋಯ್ತು... ಕೌರವ ಕ್ಷಿತಿಪಾಲ ಪಾಂಡು ಕುಮಾರರಲಿ ಕೈಮೇಳವಿಸುವುದು... ತಾಯೆ, ನೀವು ಬಿಜಯಂಗೈಯಿ.

(ಎಂದ. ಎನಲು ಯೋಜನಗಂಧಿ...)

ಯೋಜನಗಂಧಿ: ನಿಜ ನಂದನನ ನುಡಿಯೇ ವೇದಸಿದ್ಧವಿದು.

(ಎನುತ ಸೊಸೆಯರು ಸಹಿತ ವರ ತಪೋವನಕೆ ನಡೆದಳು... ಅತ್ತಲು ಮುನಿಪನು ಬದರಿಕಾ ನಂದನಕೆ ಮರಳಿದನು... ಇತ್ತ ಗಂಗಾತನುಜ ಅಖಿಳ ಪಾಂಡವ ಕೌರವ ವ್ರಜವ ಸಲಹಿದನು.)

❍

14 ದ್ರೋಣನಿಗೆ ದ್ರುಪದನಿಂದ ಅಪಮಾನ

(ಆದಿ ಪರ್ವ : ಆರನೆಯ ಸಂಧಿ : ಪದ್ಯ 24 ರಿಂದ 36)

ಪಾತ್ರಗಳು

ಪರಶುರಾಮ : ಜಮದಗ್ನಿ ಮತ್ತು ರೇಣುಕಾ ದೇವಿಯ ಮಗ.

ದ್ರೋಣ : ಭರದ್ವಾಜನ ಮಗ. ದ್ರೋಣನಿಗೆ ಅಶ್ವತ್ಥಾಮ ಎಂಬ ಹೆಸರಿನ ಮಗನಿದ್ದಾನೆ.

ದ್ರುಪದ : ಪಾಂಚಾಲ ದೇಶದ ಅರಸ. ಛತ್ರಾವತಿ ಪಟ್ಟಣದಲ್ಲಿ ನೆಲೆಸಿದ್ದಾನೆ.

ದ್ರೋಣನಿಗೆ ದ್ರುಪದನಿಂದ ಅಪಮಾನ

ಈ ದ್ರೋಣ ದ್ರುಪದರು ನೃಪವೃಂದ ಸಹಿತ ತಂದೆಯೊಳ್ ಶ್ರಮ ಮಾಡಿದರು... ಆ ದ್ರುಪದಾಖ್ಯನ ಅಯ್ಯನು ದಿವಿಜ ನಗರಿಯಲಿ ನಿಂದನು... ಅಂದು ದ್ರುಪದ ಸಖ್ಯ ಪ್ರೀತಿಯನು ಸಾನಂದದಲಿ ದ್ರೋಣಂಗೆ ವಿರಚಿಸಿ ಬಂದು... ನಿಜ ರಾಜ್ಯಾಭಿಷೇಕವ ಧರಿಸಿದನು.

ಇತ್ತಲು ಕೆಲವು ದಿವಸಕೆ ಈ ದ್ರೋಣನ ಪಿತನು ಸುರರತ್ತ ಸರಿದನು... ದ್ರೋಣ ತತ್ತಪೋವನದಲ್ಲಿ ವಿಪ್ರಕ್ರಿಯೆಗಳನು ಮಾಡಿ... ಹೊತ್ತ ದಾರಿದ್ರ್ಯದಲಿ ಮನಮರುಗುತ್ತ ತನ್ನ ಮಗ ಸಹಿತ ಅಡವಿಯಲಿ ದೇಶಾಂತರದೊಳಗೆ ತೊಳಲುತ್ತ ಬಂದನು... ಪರುಶುರಾಮ ಆಶ್ರಮಕೆ ಮುನಿಯು ಐತರಲು, ಜಾಮದಗ್ನ್ಯನು ಭಾರದ್ವಾಜನನು ಸತ್ಕರಿಸಿ ಮಧುರ ವಚನದಲಿ ನುಡಿದನು.

ಪರಶುರಾಮ : ದ್ವಿಜರಿಗೆ ಧರೆಯನು ಇತ್ತೆನು... ಈ ಅವಸರದೊಳು ಆನ್ ನಿರ್ಧನನು... ನೀನೇ ಪರಮ ಋಷಿ... ನಾನು ಆತಿಥ್ಯ ಪೂಜೆಗೆ ಅಭಾಗ್ಯ... ಧನರಹಿತ... ನಾ ಹೊತ್ತ ಭಾರಿಯ ಧನುವಿದು ಒಂದಿದೆ... ದಿವ್ಯ ಶರವಿದೆ... ನೀನು ಮನಕೆ ಬಂದುದ ವರಿಸು.

(ಎನೆ..ದ್ರೋಣ ನಸುನಗುತ...)

ದ್ರೋಣ : ಎನಗೆ ನಿಮ್ಮಡಿಗಳ ಕೃಪಾಲೋಕನವಲೇ ಪರಿಯಾಪ್ತಿ...

ಲೋಕದ ಜನ ಮನೋರಂಜನವೆ ಬೇಹುದು... ಶರವ ಕೊಡಿ.

ಪರಶುರಾಮ : ಇವು ಮಹಾ ನಿಸ್ಸೀಮತರ ವೈಷ್ಣವವಲೇ ...

(ಅವರು ದಿವ್ಯಾಸ್ತ್ರ ನಿವಹವನು ಕೊಟ್ಟರು... ದ್ರೋಣ ಉಚಿತ ವಿಧಾನದಲಿ ಕೊಂಡನು.)

ದ್ರೋಣ : ಇವು ಮಹಾ ರಣರಂಗದಲಿ ಶಾತ್ರವ ನಿವಾರಣವೈಸಲೆ... ಎಮ್ಮ ಈ ವ್ಯವಹೃತಿಗೆ ತಾನೇನು ಉಪಾಯ.

(ಎನುತ್ತ ಚಿಂತಿಸಿದ. ತನ್ನ ಮಗ ಅಶ್ವತ್ಥಾಮನೊಡನೆ ಈ ರೀತಿ ನುಡಿಯುತ್ತಾನೆ.)

ದ್ರೋಣ : ಮಗನೆ ಬಲ್ಲೈ... ದ್ರುಪದ ಭೂಪತಿ ಮಗುವುತನದಿಂದ ಎಮ್ಮ ಸಖನು... ನಾವು ಓಲಗಿಸುವೆವು... ಅಲ್ಲಿ ಮಿತ್ರ ಭಾವದಲಿ ಸಲಹನೆ... ಪಾಂಚಾಲರಾಯನ ನಗರಿಯನು ನಾವು ಹೊಗುವ ನಡೆ.

(ಎಂದು ಮುನಿ ಮೌಳಿಗಳ ಮಣಿಯನು ರೇಣುಕಾ ಸುತನ ಬೀಳುಕೊಂಡನು... ಈತನು ದ್ರುಪದ ರಾಯನ ಮಂದಿರಕೆ ಬಂದನು... ಆ ಬಾಗಿಲವನೊಡನೆ ಎಂದನು.)

ದ್ರೋಣ : ಎಲವೋ, ನಾವು ನಿಮ್ಮ ಅರಸಂಗೆ ಪೂರ್ವದಲಿ ಸಂದ ಮಿತ್ರರು... ದ್ರೋಣ ಮುನಿಪತಿಯೆಂದು ನಮ್ಮ ಅಭಿಧಾನ... ನೀ ಹೇಳು.

(ಎಂದು ಕಳುಹಲು... ಬಂದು ಹದನ ಬಿನ್ನಹ ಮಾಡಿದನು... ಸಿರಿಯ ಮದ... ಅಧಿಕ ಪ್ರತಾಪೋತ್ಕರದ ಮದ ಮೊದಲಾದ ಮದ ಸಂಚರಣ ರಜದಲಿ... ಈತನ ಮನದ ಮಡಿ ವರ್ಗ ಮಾಸಿತು.)

ದ್ರುಪದ : ತಿರಿವ ಹಾರುವರೊಡನೆ ಭೂಮೀಶ್ವರರಿಗೆ ಎತ್ತಣ ಮೈತ್ರಿ... ಹೋಗಲಿ... ಕರೆಯಬೇಡ.

(ಎನೆ, ಬಂದು ಬಾಗಿಲಲಿ ಅವ ನಿವಾರಿಸಿದ.)

ದ್ರೋಣ : ಮರೆದನೇ... ತಪ್ಪೇನು... ನಾ ಕಂಡು ಅರುಹಿ ಮರಳುವೆನ್ಯೆಸಲೆ...

(ಎನುತ ಉರುಬಿದರೆ... ಬಾಗಿಲಲಿ ಕಂಬಿಯನು ಇಕ್ಕಿ ತರುಬಿದರು... ಒರೆಯನು ಉಗುಳಿಚಿ ಖಡ್ಗದಲಿ ಇಕ್ಕೆಲದವರನು ಬಿಡದೆ ಅರಿದನು... ಓಲಗಕೆ ಉರವಣಿಸಿದನು... ದ್ರುಪದ ಭೂಪತಿಯ ಮುಂದೆ ನಿಂದನು.)

ದ್ರೋಣ : ಏನೆಲವೋ ಪಾಂಚಾಲ, ಚಿಕ್ಕಂದು ಆನು ನೀನು ಒಂದಾಗಿ ತಂದೆಯೊಳು ಏನನು ಅರಿದೆವು... ಮರೆದು ಕಳೆದಾ... ಹಾ ಮಹಾದೇವ... ಏನು ಬಂದಿರಿ ಎಂಬ ಗುಣವಚನ ಅನುರಾಗವು ಸಾಲದೇ... ಧನವೇನು... ಫಲ ಕಕ್ಕುಲಿತೆ ಎಮಗೆ ಇಲ್ಲ.

ದ್ರುಪದ : ಸೂರಿಗಳಿಗೆ ಅತಿ ಮೂರ್ಖರಿಗೆ... ಗಂಭೀರರಿಗೆ ಭಂಡರಿಗೆ... ವೇದಾಚಾರ ಸಂಯುಕ್ತರಿಗೆ ಅನಾಚಾರ ಪ್ರಸಕ್ತರಿಗೆ... ಧೀರರಿಗೆ ಹಂದೆಗಳಿಗೆ ಎತ್ತಣ ಸೇರುವೆಗಳ್ಯೆ... ಭೂಪರಿಗೆ ಬಡ ಹಾರುವರಿಗೆ ಎತ್ತಣದು ಸಖತನವು.

ದ್ರೋಣ : ಎಲವೋ, ನಿನ್ನ ಆಸ್ಥಾನ ಸಹಿತ ಈ ಹೊಳಲ ಸುಡುವೆನು... ನಿನ್ನ ಸೀಳಿದು ಭೂತಗಣಕೆ ಬಲಿಯ ಕೊಡುವೆನು... ನೀನು ಎನಗೆ ಇದಿರಲ್ಲ... ಕಲಿತ ವಿದ್ಯದ ಕೋಲ ಮಕ್ಕಳ ಕಳುಹಿ ಕಟ್ಟಿಸಿ... ವಾಮ ಪಾದದಿ ತಲೆಯನು ಒದೆವೆನು... ನೀನು ಮರೆಯದಿರು.

(ಎಂದನಾ ದ್ರೋಣ... ಎಂದು ಭಾಷೆಯ ಮಾಡಿ..ತನ್ನಯ ನಂದನನ ಒಡಗೊಂಡು ಜನಪದ ವೃಂದ ಹಲವನು ಕಳೆದು... ಹಸ್ತಿನಾಪುರಿಗೆ ಬಂದನು.)

❍

15. ಕರ್ಣನಿಗೆ ಅಂಗರಾಜ್ಯದ ಪಟ್ಟ

(ಆದಿಪರ್ವ : ಏಳನೆಯ ಸಂಧಿ : ಪದ್ಯ–38 ರಿಂದ 58)

ಪಾತ್ರಗಳು

ಅರ್ಜುನ : ಪಾಂಡುರಾಜ ಮತ್ತು ಕುಂತಿಯ ಮಗ. ದೇವೇಂದ್ರನ ಅನುಗ್ರಹದಿಂದ ಕುಂತಿಯ ಹೊಟ್ಟೆಯಲ್ಲಿ ಹುಟ್ಟಿದವನು.

ಕರ್ಣ : ಕುಂತಿಯ ಹಿರಿಯ ಮಗ. ಸೂರ್ಯದೇವನ ಅನುಗ್ರಹ ದಿಂದ ಹುಟ್ಟಿದವನು.

ಕೃಪಾಚಾರ್ಯ : ಕೌರವರ ಮತ್ತು ಪಾಂಡವರ ವಿದ್ಯಾಗುರು.

ದ್ರೋಣಾಚಾರ್ಯ: ಕೌರವರ ಮತ್ತು ಪಾಂಡವರ ವಿದ್ಯಾಗುರು.

ಧೃತರಾಷ್ಟ್ರ : ಹಸ್ತಿನಾವತಿಯ ರಾಜ.

ಕುಂತಿ : ಕರ್ಣ ಮತ್ತು ಪಾಂಡವರ ತಾಯಿ.

ದುರ್ಯೋಧನ : ಧೃತರಾಷ್ಟ್ರ ಮತ್ತು ಗಾಂಧಾರಿಯ ಮಗ.

ಪುರಜನರು : ಹಸ್ತಿನಾವತಿಯ ಪ್ರಜೆಗಳು.

ಕರ್ಣನಿಗೆ ಅಂಗರಾಜ್ಯದ ಪಟ್ಟ

ಘುಳುಘುಳಿಸಿದ ಅಂಬುಧಿಯವೋಲ್... ಜನಜಲಧಿ ಜಾತ ಕ್ಷೋಭೆಯಲಿ... ಅಗ್ಗದ ಸಾಧು ವಾದವಿವಾದ ರಭಸದಲಿ ವೆಗ್ಗಳಿಸಿತು... ಕಲ್ಪಾಂತ ಮೇಘಾವಳಿಯ ಗುರುವೆನೆ... ವಾದ್ಯತತಿ ಕಳಕಳದೊಳು ಮೊಳಗಿದವು... ಮುನಿಯ ಸನ್ನೆಯಲಿ ಅರ್ಜುನ ದೇವನು ಎದ್ದನು.

ಪುರಜನರು : ಈತನಾರು ಅರ್ಜುನನೆ... ಹೋ... ಹೋ... ಮಾತು ಮಾಣಲಿ... ಮಾಣಲಿ...

(ಎಂಬ ಈ ಮಾತು ಹಿಂಚಿತು... ಮುನ್ನ ಆಸ್ಥಾನ ಮೌನದೊಳಿರ್ದುದು... ಭೀತ ಕಳಕಳರಂಗದಲಿ ಪುರುಹೂತ ಸುತ ಮೈದೋರಿದನು... ಜನವು ಈತನನು ಕೊಂಡಾಡುತಿರ್ದುದು ರಾಯ ಕೇಳೆಂದ... ದ್ರೋಣ ಕೃಪ ಮೊದಲಾದ ಮಾನ್ಯ ಶ್ರೇಣಿಗೆ ಎರಗಿದನು... ಅಮರ ನಿಕರಕೆ ಲಲಾಟದಲಿ ಕರಪುಟವನು ಇಟ್ಟು ಗೋಣನು ಎತ್ತಿದನು.)

ಪುರಜನರು : ಪ್ರಾಣ ಪಣವಿದು... ನಿಖಿಳ ವಿದ್ಯದ ಜಾಣತನವಿದು... ಇದು ವಿನಯ.

(ಎಂದು ನೆರವಿ ಧನಂಜಯನ ಕೇಣವಿಲ್ಲದೆ ನೆರೆ ಹೊಗಳಿತು. ನಿಲುವಿನಲ್ಲಿ... ಸ್ವಸ್ಥಾನದಲಿ... ಕೈಚಳಕದಲಿ... ಭಂಗಿಯಲಿ... ಭರದಲಿ... ಉಳಿಯಲಿ... ಒಯ್ಯಾರದಲಿ...

ಮೋಡಾಮೋಡಿಯ ಅಂದದಲಿ... ಅಳವಿಯಲಿ... ಪರಿವಿಡಿಯಲಿ... ಊಹಾಬಲದಲಿ... ಅವಧಾನದಲಿ ಶಸ್ತ್ರಾವಳಿಯ ಸಾಂಗೋಪಾಂಗ ಶ್ರಮವನು ಪಾರ್ಥ ತೋರಿದನು.

ಪುರಜನರು : ತುರಗಚಯ ರೇವಂತ... ಮದ ಕುಂಜರ ಮಹಾ ದಿವಿಜೇಂದ್ರ... ಪಥ ಸಂಚರಣ ವರ ಮಾರ್ತಾಂಡ...

(ಎಂದು ಜನ ನಿಕರ ಅಬ್ಬರಿಸೆ... ತುರಗ..ಗಜ..ರಥ..ವಿವಿಧ ಶಿಕ್ಷಾಪರಿಣತಿಯ ತೋರಿದನು... ಗುರು ಕೃಪ ಸುರನದೀಜರು ಪುಳಕಾಂಬು ಪೂರದಲಿ ಮುಳುಗಿದರು. ಮತ್ತೆ ಧನುವ ಕೊಂಡನು.)

ಅರ್ಜುನ : ನೆರವಿಯನು ಅತ್ತ ಹೊಯ್... ಹೊಯ್... ಹೋಗ ಹೇಳು... ದುರ್ವೃತ್ತರ ಎದೆ ಜರ್ಝರಿತವಾಗಲು ತೋರಬೇಕು...

(ಎನುತ ಬತ್ತಳಿಕೆಯಿಂದ ಉಗಿದು ಹೂಡಿ ವಿಯತ್ತಳಕೆ ಹಾಯ್ಸಿದನು... ಆಗ್ನೇಯಾಸ್ತ್ರ ಧಾರೆಯಲಿ ಕರ್ಬೊಗೆ ಸುತ್ತಿ ದಳ್ಳುರಿ ಸುರಿದುದು... ಧನುವಿಂದೆ ವಾರುಣವನು ಉಗಿಸಿದನು... ಶಿಖಿಶರವ ತೆಗೆಸಿದನು... ಅದ್ಭುತ ವಾರಿ ಅಭ್ರವ ಮೊಗೆದುದು... ಉಪಸಂಹರಿಸಿದನು... ವಿಗಡ ತಿಮಿರಾಸ್ತ್ರದಲಿ ಹಗಲನು ಒಂದೇ ತುತ್ತು ಮಾಡಿದ... ಸುರನಿಕರ ಬೆರಗಾಗೆ... ಸೂರ್ಯಾಸ್ತ್ರದಲಿ ಮರಳಿ ತಿಮಿರವ ತೆಗೆಸಿದನು... ಅದ್ರಿಗಳ ಗಿರಿಶರದಲಿ... ಅಭ್ರವನು ಮೇಘದ ಶರದಿನ್... ನೂರು ಭುಜಂಗವನು ಉರಗ ಬಾಣದಿ... ತೀವ್ರ ಮಾರುತನ ಅನಿಲ ಶರದಲಿ ಪರುಠವವ ತೋರಿದನು. ಜನ ಅಡಿಗಡಿಗೆ ನುಡಿಯ ನಾಟಕ ಹರ್ಷ ಭಾರದಲಿ ಉಬ್ಬರಿಸಲು... ಅಂಧ ಭೂಪನ ಕೊರಳು ಕುಸಿದುದು... ಇವರ ಗಂಗಾಭವ ಕೃಪ ದ್ರೋಣಾದಿಗಳ ಮುಖ ಅರಳಿದವು... ಬಳಿಕ ಅವರ ಧೃತರಾಷ್ಟ್ರಾದಿ ಕೌರವರ ತಲೆವಾಗಿದವು... ಇವರ ಜನನಿಯ ಮುಖದ

ಸುಮ್ಮಾನವನು... ದುರ್ಯೋಧನನ ಜನನಿಯ ಜವಳಿ ದುಮ್ಮಾನವನು ಬಣ್ಣಿಸಲು ಅರಿಯೆ ನಾನೆಂದ.)

ಕರ್ಣ : ಫಲುಗುಣನ ಹೊಗಳುವ ನಾಯಿಗಳನ್ ಬಾಯ ಹೊಯ್... ಕೌತುಕವಾಯಕೆ ಏನಾಯ್ತು... ಇವದಿರ ಪಕ್ಷಪಾತವ ನೋಡು ನೋಡು.

(ಎನುತ ಸಾಯಕವ ತಿರುಹುತ್ತಲು ಕರ್ಣ... ಆ ಕರ್ಣಾಯತಾಂಬಕನು ಎಡಬಲದ ಕುರುರಾಯನ ಅನುಜರ ಮೇಳದಲಿ ಹೊರವಂಟನು... ಗುರುಗಳಿಗೆ ಕೈಮುಗಿದು... ತರಣಿ ಮಂಡಲಕೆ ಶಿರದಲಿ ಎರಗಿ... ನೋಡುವ ನೆರವಿಗೆ **"ಇವನಾರು... ಈತನಾರು"** ಎಂಬ ಅದ್ಭುತವ ಬೀರಿ... ಅರಸ ಕೇಳೈ, ಕರಿ ತುರಗ ರಥವಾಹನದ ಶಿಕ್ಷಾ ವಿದ್ಯಗಳು ಸಹಿತ ವಿವಿಧ ಶಸ್ತ್ರೋತ್ಕರದ ಶ್ರಮವನು ತೋರಿದನು... ಆವ ವಿಧದಲಿ ಪಾರ್ಥ ತೋರಿದನು.. ಆವ ದಿವ್ಯಾಸ್ತ್ರ ಪ್ರಪಂಚವ ಪಾವಕ ಅನಿಲ ವಾರುಣಾದಿಯನು ಐದೆ ವಿರಚಿಸಿದ... ಆ ವಿಧಾನದಲಿ... ಆ ವಿಹಾರದಲಿ... ಆ ವಿಬಂಧದಲಿ ಅರ್ಜುನನ ಬಾಣಾವಳಿಯ ಬಿನ್ನಾಣವನು ಕಲಿಕರ್ಣ ತೋರಿದನು.)

ಕರ್ಣ : ಸೆಣಸುವಡೆ ಬಾ...

(ಎಂದು ಪಾರ್ಥನ ಕೆಣಕಿದನು... ಘನರೋಷ ಶಿಖಿಯಲಿ ಇಬ್ಬರ ಮೀಸೆ ಕುಣಿದವು... ಕಂಗಳೊಳು ಒಗುವ ಕೆಂಪಿನಲಿ... ಕಣಿ ಕಣಿಗಳಾಟದಲಿ... ಶರ ಖಂಡಣಿಯ ಕೋಲಾಟದಲಿ... ಖಣಿ ಖಣಿ ಖಣಿಲು ಖಣಿ ಖಣಿ ಮಸಗಲು... ಚಳಕದಲಿ ಎಚ್ಚಾಡಿದರು... ರಾಯ ಸಭೆ ಕಳವಳಿಸೆ...)

ಕೃಪ ಮತ್ತು ಇತರರು : ಹೋ... ಹೋ... ಹೋ... ಇದೇನು... ಏನು...

(ಎನುತ ವಾಯುಸುತ... ಕೃಪ... ಗುರುಜ... ದ್ರೋಣಾದ್ಯರು ಧನಂಜಯನ ಹಿಡಿದರು. ಕೃಪನು ಖಾತಿಯಲಿ...)

ಕೃಪ : ಆಯಿತು... ಎಲವೋ ಕರ್ಣ, ನೃಪಹಾರದಲಿ ನೀನು ಅನುನಾಯಕನೊ... ಮೇಣ್... ನಾಯಕನೊ... ನೀನು ಆವನು..

ಧೃತರಾಷ್ಟ್ರ : (ತನ್ನ ಮನದಲ್ಲಿ)

ಕರ್ಣನು ಎಂಬವನು... ಈತನಾವನು... ಈತನು ಅರ್ಜುನನೊಡನೆ ತಾ ಮಾರಾತು ಕೈಮಾಡಿದನು... ಧನಂಜಯನ ಕೈಕೊಳ್ಳನು... ಈತ ತಪ್ಪಲ್ಲ.

(ಎನುತ ಧೃತರಾಷ್ಟ್ರನು ಮಿಗೆ ಮೈಯಾತನು... ಈತನ ಮಾತೆ ಕುಂತಿ ಕಂಡಳು. ಪೂರ್ವ ಸಂಗತಿಯ ನೆನೆದಳು.)

ಕುಂತಿ : (ತನ್ನ ಮನದಲ್ಲಿ)

ಎನ್ನ ಮಗನು ಎನೆ ಬಂದುದಿಲ್ಲ... ಅದು ತನ್ನ ವಶವೇ... ವಿಷ್ಣು ಮಾಯೆಯ ಬಿನ್ನಣವಲೇ...

(ಮಾತು ಬಿಗಿದುದು... ಮನವನು ಒಳಗಿಕ್ಕಿ... ತನ್ನ ತಾನೇ ಮರುಗಿ ಕುಂತಿಯಿತ್ತಲು ಮೂರ್ಛಾಪನ್ನೆಯಾದಳು... ಇತ್ತಲು ಕರ್ಣ ಕೃಪನ ನುಡಿಯಲಿ ದುಗುಡ ಮಿಗೆ ಖಿನ್ನನಾದನು.)

ದುರ್ಯೋಧನ : ಈತನು ಅರಸಲ್ಲ ಎಂದು ಕೃಪ ಪಳಿವಾತನೇ... ತಪ್ಪೇನು... ರಾಜ್ಯದೊಳು ಈತನ ಅರಸು ಎನಿಸುವೆನು... ನಮ್ಮಯ ಪುರೋಹಿತರ ಕರೆ... ಶಾತ ಕುಂಭಾಸನವ ಮಂಗಳಜಾತ ವಸ್ತುವ ತರಿಸು... ತರಿಸು.

(ಎಂದು ಆ ತತುಕ್ಷಣದಲಿ ಸುಯೋಧನನು ರಭಸದಲಿ ಎದ್ದು... ತರಿಸಿ ಭದ್ರಾಸನದೊಳು... ಈತಂಗೆ ಅರಸು ಪದವಿಯೊಳು ಅಂಗ ದೇಶದ ಸಿರಿಯನಿತ್ತನು... ಮೂರ್ಧಾಭಿಷೇಚನವ ರಚಿಸಿದನು... ಅಖಿಳ ಭೂಮೀಶ್ವರರು ದರುಶನವನಿತ್ತು ಕಂಡರು... ಪೂರ್ವ ಶೈಲದ ತರಣಿಯಂತಿರೆ ಕರ್ಣನು ರಾಜತೇಜದಲಿ ಎಸೆದನು... ಈತನ ಉತ್ಸವ ತನ್ನದೆಂದೇ ಪ್ರೀತಿಯಿಂದ ಆ

ಸೂತನು ಐತರಲು... ಈತನು ಇಳಿದು ಪದದಲಿ ಎರಗಿದನು... ಬಳಿಕ... **"ಇವನು ಸೂತ ಸುತನು"** ಎಂದು ಜನಜನಿತ ಭುವನ ಖ್ಯಾತವಾದುದು... ಬಳಿಕ ಆ ಭೀಮ ನಸುನಗುತ... ಈತನನು ಕುಲವೆತ್ತಿ ಭಂಗಿಸಿ ನುಡಿದನು. ಭೀಮನ ನುಡಿಯನ್ನು ಕೇಳಿ ಕೋಪದಿಂದ ಕೆರಳಿದ ದುರ್ಯೋಧನನು ಈ ರೀತಿ ನುಡಿಯುತ್ತಾನೆ.)

ದುರ್ಯೋಧನ : ಇವನ ತಂದೆ ಅದಾರು... ಪಾಂಡುವೊ ಪವನನೋ... ಕೃಪ, ನಿಮ್ಮ ಜನ್ಮವನು ಎವಗೆ ಹೇಳಿರೆ... ಹಿರಿಯ ಗುರುಗಳ ತಾಯಿ ಅದಾವವಳೊ... ಅವಘಡಿಸದಿರಿ... ನಿಮಗೆ ಹಿರಿಯತನಕೆ ಅಂಜುವೆನು.

(ಎನುತ ಕೌರವ ಮಹೀಪತಿ ಗುರು ಕೃಪಾದಿಗಳ ಅಡಿಗಡಿಗೆ ಜರಿದು ನುಡಿದನು... ಒಳಗೆ ಗಜಬಜವಾಯ್ತು... ಅಲ್ಲಿಯದಲ್ಲಿ ಕೈದುವ ಸೆಳೆದುದು... ಗುರು ಕೃಪರ ಉಲುಹ ಕೇಳುವರಿಲ್ಲ... ಕಳನೊಳಗೆ ಕೈದೊಳಸಾಯ್ತು...

ಭೀಷ್ಮಾದಿಗಳು ಇಳಿದು ತಮ್ಮಯ ನಿಳಯಕೆ ಐದಿದರು... ಎರಡು ಬಲ ತಮ್ಮೊಳಗೆ ತಾವೇ ಹಣಿದು ಹರಿದುದು... ರಾಯ ಕೇಳೆಂದ... ಕೆಲವರು ಭೀಮನನ ಅರ್ಜುನನ... ಕೆಲಕೆಲರು ಕರ್ಣನ... ಕೆಲರು ಕೌರವೇಂದ್ರನ ಹೊಗಳುತ ಬಂದು ಹಸ್ತಿನಾಪುರವ ಹೊಕ್ಕರು.

❍

16. ದ್ರುಪದನ ಮಾನಹಾನಿ

(ಆದಿಪರ್ವ : ಏಳನೆಯ ಸಂಧಿ : ಪದ್ಯ 59 ರಿಂದ 69)

ಪಾತ್ರಗಳು

ದ್ರೋಣ : ಕೌರವರ ಮತ್ತು ಪಾಂಡವರ ವಿದ್ಯಾಗುರು.

ದ್ರುಪದ : ಪಾಂಚಾಲ ದೇಶದ ಅರಸ. ಛತ್ರಾವತಿ ಪಟ್ಟಣದಲ್ಲಿ ನೆಲೆಸಿದ್ದಾನೆ. ಚಿಕ್ಕಂದಿನಲ್ಲಿ ದ್ರೋಣನ ಒಡನಾಡಿಯಾಗಿದ್ದ. ರಾಜನಾದ ಬಳಿಕ ತನ್ನ ಬಳಿಗೆ ದ್ರೋಣನು ಬಂದಿದ್ದಾಗ, ಆತನನ್ನು ಅಪಮಾನಗೊಳಿಸಿದ್ದನು.

ಕೌರವರು : ಧೃತರಾಷ್ಟ್ರ ಮತ್ತು ಗಾಂಧಾರಿಯ ಮಕ್ಕಳು.

ಪಾಂಡವರು : ಪಾಂಡುರಾಜ ಮತ್ತು ಕುಂತಿಯ ಮಕ್ಕಳು.

ದ್ರುಪದನ ಮಾನಹಾನಿ

ಬಳಿಕಲಾ ಮರುದಿವಸದಲಿ ಗುರು ಗರುಡಿಯ ನಿಳಯದಲಿ ಕುಳ್ಳಿರ್ದು... ಮಕ್ಕಳುಗಳೆಲ್ಲರ ಕರೆಸಿ... ಕುಮಾರರಿಗೆ ನುಡಿದನು.

ದ್ರೋಣ : ಏನಿರೈ ಕುರುವಂಶ ನಳಿನೀ ಭಾನುಗಳಿರ... ವಿದಗ್ಧ ಜನ ಸುರಧೇನುಗಳಿರಾ... ಆವು ಇಂದು ನಿಮ್ಮಲಿ ದಕ್ಷಿಣಾರ್ಥಿಗಳು... ಏನನು ಈವಿರಿ... ನಮಗೆ ಕೊಡಲು ಸಘಾನರೈ... ಕೊಡಲಾಪ ಸತ್ವ ನಿಧಾನವುಂಟೇ ಹೇಳಿ.

(ಎಂದನು ದ್ರೋಣನು ಅನಿಬರಿಗೆ...)

ಕುಮಾರಕರು : ಆವುದನು ಬಯಸುವಿರಿ... ನಿಮ್ಮಡಿ ಯಾವ ಕಾರ್ಯವ ಬೆಸಸಿದುದ ತಂದು ಈವೆವು... ಇದಕೆ ವಿಚಾರವೇನು.

(ಎಂದರು... ಮುನಿಗೆ ತೀವಿದ ಅಗ್ಗದ ಹರುಷರಸದಲಿ ಭಾವ ನೆನೆದುದು... ವರ ಶಿಷ್ಯಾವಳಿಗೆ ನಿಜಾಭಿಪ್ರಾಯ ಸಂಗತಿಯ ನುಡಿದನು.)

ದ್ರೋಣ : ಕೇಳಿ ಬಲ್ಲಿರೆ... ಗಂಗೆಯ ಉತ್ತರ ಕೂಲದಲಿ ಪಾಂಚಾಲ ದೇಶ... ಅಲ್ಲಿಗೆ ದ್ರುಪದನು ಎಂಬವನು ನೃಪಾಲನು... ಅತುಳ ಭುಜಬಲನು... ಆಳುತನದ ಅಂಗದಲಿ ಪರರಿಗೆ ಸೋಲನು... ಅವನ ಒಟ್ಟೈಸಿ... ದ್ರುಪದ ನೃಪಾಲಕನ ಪಿಡಿದು ಒಪ್ಪಿಸಿದರೆ... ಎಮಗೆ ಪರಿತೋಷವಹುದು.

ಕೌರವರು : ಐಸಲೇ... ಗುರುದಕ್ಷಿಣಾರ್ಥವಿದು ಏಸು ಘನ... ತಂದು ಈವೆವು.

(ಎಂದು ಕೌರವರು ಉಪಹಾಸದಲಿ ಕೈ ವೊಯ್ದು ತಮ್ಮೊಳು ನಗುತ... ಆ ಸುಯೋಧನ ಕರ್ಣಸಹಿತ ಮಹೀಶ ತನುಜರು ಬೀಳುಕೊಂಡರು... ಪಾಂಡುಸುತ ಕೌರವ ಕುಮಾರರಿಗೆ ವಾಸಿ ಬಿದ್ದುದು... ರಾಯದಳ ಪಾಂಚಾಲ ದೇಶಕೆ ಧಾಳಿಯಿಟ್ಟುದು... ಊರನು ಉರವಣಿಸಿ ಚೂಳಿಕೆಯಲಿ ಮುಂದೆ ಹೊಕ್ಕುದು... ಸುಯೋಧನಾದಿಗಳು ಧೂಳಿಗೋಟೆಯ ಕೊಂಡು... ಇವರು ರಾಜಾಲಯಕೆ ಬರೆ... ದ್ರುಪದನ ಅನುಜರು ಕೌರವೇಂದ್ರನ ಬಲವ ಬರಿಕೈದು ಸೋಲಿಸಿದರ್ರೈ... ಪುರದ ಹೊರ ಬಾಹೆಯಲಿ ಗುರುಸಹಿತಲು ತಾವು ಐವರು ಮಹಾ ಸನ್ನಾಹ ಚಾಪಸ್ಫುರಿತ ತೂಣೀಬದ್ಧ ಕಂಪಿತ ಖಡ್ಗ ಪಾಣಿಗಳು ಇವರಿದ್ದರು... ಇತ್ತಲು ಪುರಜನಂಗಳ ಮುಸಲ ಹತಿಯಲಿ ಕೌರವೇಂದ್ರನ ದಳ ವಿಘಾತಿಯಲಿ ಮುರಿದು ಬಂದುದು... ಪಾಂಡುಸುತರು ಅಭಿಜಾತ ಸಮರವನು ಆತು ಕೊಂಡರು.)

ಪಾಂಡವರು : ಇವರ ಕೈಯಲಿ ಮಾತು ಹಲವಿಲ್ಲ.

(ಎನುತ ಹೊಕ್ಕರು.)

ಪಾಂಡವರು : ಘಾತಿಗೆ ಆನುವರಿಲ್ಲ ದೊರೆ...

(ಎನುತ... ಕೊಂದು ಪರಬಲವ... ಆತನನು ಮುತ್ತಿದರು.)

ಪಾಂಡವರು : ಗುರುಗಳಿಗೆ ಈತನೇ ದಕ್ಷಿಣೆ...

(ಎನುತ ಮಹೀಪತಿಯ ಹಿಡಿದರು... ಕೊಂಡು ಬಂದರು... ದ್ರೋಣನ ಇದಿರಲಿ ದಿಂಡುಗೆಡಹಿದರು... ಈತನನು ಕೈಕೊಂಡನು.)

ದ್ರೋಣ : ಎಲವೋ, ದ್ರುಪದ ಸಖ... ಪೂರ್ವವನು ನೆನೆ.

(ಎನುತ... ಪಾಂಡು ಕುಮಾರ ಕಡೆಗೆ ತಿರುಗಿ ನೋಡುತ್ತ...)

ಭಂಡನು ಇವನನು... ಸಾಕು ಬಿಡಿ... ಸಲೆ ಚಂಡಿ ಯಾದನು... ದರ್ಪವಿಷ ಮುಂಕೊಂಡ ಮೂರ್ಛಿತನ ಏನ ಮಾಡುವೆನು.

(ಎಂದನಾ ದ್ರೋಣ... ಈಗ ಸೆರೆಯಾಳಾಗಿರುವ ದ್ರುಪದನನ್ನು ಉದ್ದೇಶಿಸಿ...)

ಎಲವೊ ಜೀವದಾನವನು ಕೊಟ್ಟೆನು... ಅಳಲು ನಿನಗೇಕೆ... ಇನಿತು ಸಾಹಸದ ಅಳವಿಯಲಿ ನೀ ಹಗೆಯನು ನೆರಹು... ಕಳೆದು ಕೊಟ್ಟೆನು... ಭಂಡ ಹೋಗು... ನಿನ್ನ ರಾಜ್ಯದ ನೆಲದೊಳು ಅರ್ಧವನು ಇತ್ತು ನೀ ನಡೆ.

(ಎಂದು ಒಡಬಡಿಸಿ ಬಳಿಕಲು... ಆ ದ್ರೋಣ ದ್ರುಪದನ ಬಿಟ್ಟನು... ಅರಸ ಕೇಳೈ, ದ್ರುಪದನು ಈ ಪರಿ ಪರಿಭವಕೆ ಗುರಿಯಾಗಿ ತನ್ನಯ ಪುರವ ಹೊಗದೆ... ಗಂಗಾತೀರ ದೇಶದಲಿ ಐತಂದು... ಪುತ್ರಕಾಮ್ಯ ಅಧ್ವರವ ವಿರಚಿಸಲು... ಆಗ ನಾನಾ ಅಗ್ರಹಾರದಲಿ ಸತ್ಪೋತ್ಕರುಷವಂತರನು ಅರಸಿದನು.)

❍

17. ದ್ರೌಪದಿ... ಧೃಷ್ಟದ್ಯುಮ್ನ ಜನನ

(ಆದಿಪರ್ವ : ಏಳನೆಯ ಸಂಧಿ : ಪದ್ಯ 69 ರಿಂದ 74)

ಪಾತ್ರಗಳು:

ದ್ರುಪದ : ಪಾಂಚಾಲ ದೇಶದ ಅರಸ. ಛತ್ರಾವತಿ ಪಟ್ಟಣದಲ್ಲಿ ನೆಲೆಸಿದ್ದಾನೆ. ಚಿಕ್ಕಂದಿನಲ್ಲಿ ದ್ರೋಣನ ಒಡನಾಡಿಯಾಗಿದ್ದ. ರಾಜನಾದ ಬಳಿಕ ತನ್ನ ಬಳಿಗೆ ದ್ರೋಣನು ಬಂದಿದ್ದಾಗ, ಆತನನ್ನು ಅಪಮಾನಗೊಳಿಸಿದ್ದನು. ಅದಕ್ಕೆ ಪ್ರತಿಯಾಗಿ ಈಗ ದ್ರೋಣನಿಂದ ಅಪಮಾನಕ್ಕೆ ಗುರಿಯಾಗಿದ್ದಾನೆ.

ಜನ ಸಮುದಾಯ : ದ್ರುಪದನು ಮಾಡಿಸುತ್ತಿದ್ದ ಯಾಗವನ್ನು ನೋಡುತ್ತಿದ್ದ ಪ್ರಜೆಗಳು.

ದ್ರೌಪದಿ... ಧೃಷ್ಟದ್ಯುಮ್ನ ಜನನ

ಅರಸ ಕೇಳ್ಳೈ, ದ್ರುಪದನು ಈ ಪರಿ ಪರಿಭವಕೆ ಗುರಿಯಾಗಿ ತನ್ನಯ ಪುರವ ಹೊಗದೆ... ಗಂಗಾತೀರ ದೇಶದಲಿ ಐತಂದು... ಪುತ್ರಕಾಮ್ಯ ಅಧ್ವರವ ವಿರಚಿಸಲು... ಆಗ ನಾನಾ ಅಗ್ರಹಾರದಲಿ ಸತ್ವೋತ್ಕರುಷವಂತರನು ಅರಸಿದನು... ದ್ರೋಣ ಭಯದಲಿ ಸಕಲ ವಿಪ್ರಶ್ರೇಣಿಯಿರೆ... ಯಾಜೋಪಯಾಜರು ಪ್ರಾಣ ನಿಸ್ಪೃಹರಾಗಿ ಮಹಾಕ್ರತುವ ಮಾಡಿಸಿದರು... ಕೇಣವಳಿದು ಆಹುತಿಯನು ಅಮರರ ಬಾಣಸಿಗಗೆ ಉಣಬಡಿಸೆ... ದೇವ ಶ್ರೇಣಿ ದಣಿದುದು... ಪಾಂಚಾಲನ ಅಭಿಮತವ ಸಲಿಸಿದರು...

ಅರಸ ಕೇಳ್ಳೈ, ಕುಂಡ ಮಧ್ಯದೊಳು ಉರಿಯ ಕರುವಿಟ್ಟು ಎರಕಿದರೊ... ಭಾಸುರ ಮಹಾ ಅನಲನ ಅಪರ ರೂಪೋ ತಾನು ಇದೇನು ಎನಲು... ಶರ ಅಡಾಯುಧ... ಚಾಪ... ವರ್ಮ... ಉತ್ಕರಸಹಿತ ರೌದ್ರಾಂಗನು ಆಗ ಅವತರಿಸಿದನು... ಪಾಂಚಾಲ ಭೂಪತಿ ಭುಜವ ಸೂಳೈಸೆ... ವೇದಿ ಮಧ್ಯವನು ಒಡೆದು ಮೂಡಿದಳು... ಜನ ಆದರಿಸೆ...

ಜನಸಮುದಾಯ : ಅಮಮ... ಕಾಮನ ಕೈದುವೋ... ತ್ರೈಲೋಕ್ಯ ಮೋಹನ ಮಂತ್ರ ದೇವತೆಯೊ... ದ್ರುಪದಾತ್ಮಜೆಯ ಜನನದಲಿ ಆ ಕಾಮಂಗೆ ಕಾದುವರೆ ಕರೆ... ಹರಿ ಹರ ಬ್ರಹ್ಮಾದಿಗಳಿಗೆ ಒರೆ.

(ಎಂಬ ಹೂಂಕೃತಿ ಆದುದು.)

ದ್ರುಪದ : ಈ ಮಗನು ದ್ರೋಣವಧೆಗೆ... ಈ ಮಗಳು ಪಾರ್ಥಗೆ ರಾಣಿ.

(ಎಂದು ದ್ರುಪದ ಕ್ಷೋಣಿಪತಿ ಸುತರನು ಸಾನುರಾಗದಲಿ ಸಲಹಿದನು... ದ್ರೋಣನು ಈತನ ಕರೆಸಿ ಶಸ್ತ್ರದ ಜಾಣಿಕೆಯ ಕಲಿಸಿದನು... ಈ ಕಲಶಜನ ಪರಿಯಲಿ ವಿಗಡರ ಕಾಣೆನು ರಾಯ ಕೇಳೆಂದ.)

ದ್ರುಪದ : ಧೃಷ್ಟದ್ಯುಮ್ನ ಮಗನು... ದ್ರೌಪದಿ ಮಗಳು... ಭಾರದ್ವಾಜನು ಎತ್ತಿದ ಹಗೆಗೆ ಹರುವಾಯ್ತು.

(ಎನುತ ದ್ರುಪದ ಭೂಪಾಲ ಹಿಗ್ಗಿದ.)

❍

18. ಸಹಚರರೊಡನೆ ದುರ್ಯೋಧನನ ಸಮಾಲೋಚನೆ

(ಆದಿಪರ್ವ–ಎಂಟನೆಯ ಸಂಧಿ–
ಪದ್ಯ 1 ರಿಂದ 21, 23, 29, 30, 32, 53 ರಿಂದ 56)

ಪಾತ್ರಗಳು

ದುರ್ಯೋಧನ : ಧೃತರಾಷ್ಟ್ರ ಮತ್ತು ಗಾಂಧಾರಿಯ ಮಗ

ಕರ್ಣ : ಸೂರ್ಯದೇವ ಮತ್ತು ಕುಂತಿಯ ಮಗ. ಅಂಗದೇಶದ ಒಡೆಯ.

ಶಕುನಿ : ಗಾಂಧಾರಿಯ ಸೋದರ. ದುರ್ಯೋಧನನಿಗೆ ಆತ್ಮೀಯ ಸಲಹೆಗಾರ.

ಪುರಜನರು : ಹಸ್ತಿನಾವತಿಯ ಜನರು

ಸಹಚರರೊಡನೆ ದುರ್ಯೋಧನನ ಸಮಾಲೋಚನೆ

ಕೇಳು ಜನಮೇಜಯ ಧರಿತ್ರೀಪಾಲ, ಗಜನಗರಿಯಲಿ ದಿವಸ ದಿವಸದಲಿ ಕೌರವರಾಳ ಪಾಂಡವರಾಳ ಸೆಣಸಿನ ಕಾಲು ಮೆಟ್ಟುಗಳ ಸೂಳು... ಮತ್ಸರ ಬಿರುದು ಪಾಡಿನ ಚೂಳಿ ಕಲಹದ ಕದಡು... ಜೂಜಿನ ತೋಳುವಲರ ಒಳ ತೋಟಿ ಮಸಗಿತು... ಬೀದಿ ಕಲಹದ ಕದಡು ಬೀಡಿನಲ್ಲೈದೆ ಹಬ್ಬಿತು... ಬೀಡು ಕಲಹದ ಕೈದೊಳಸುಕೊಂಡು ನಾಡು ನಾಡಿನಲಿ ಎಸಗಿ ನಟಿಸಿತು... ಎರಡು ಅರಸು ಆದುದು... ಇಭಪುರಿಗೆ ಕಾಳಾದುದು... ಭೀಮ ದುರ್ಯೋಧನರ ಹೋರಟೆಗೆ... ಪುರಜನವೈದೆ ಇನ್ನೇನೆಂದು ಹೆದರಿತು.

ಪುರಜನ : ಪಾಂಡುವರು ಬೇರೆ ಇರಲಿ... ರಾಯನ ನೂರು ಮಕ್ಕಳು ಪುರವನು ಆಳಲಿ... ಕೌರವರು ಬೇರೆ ಇರಲಿ... ಪಾಂಡವರು ಇಭಪುರಿಯ ಆಳಲಿ... ಈ ಪುರಿ ನೂರರೊಡನೆ ಐವರನು ಧರಿಸಿರಲಾರದು.

(ಎನುತ ಹಸ್ತಿನಾನಗರ ದುಗುಡವ ಹೇರಿ ಹೊದಕುಳಿ ಗೊಳುತಲು ಇರ್ದುದು... ಒಂದು ದಿವಸ ಸುಯೋಧನನು ನಿಜಮಂದಿರದೊಳು ಏಕಾಂತದಲಿ ಶಕುನಿ... ಕರ್ಣ ಜಯದ್ರಥಾದ್ಯರಿಗೆ ಮನನೊಂದು ನುಡಿದನು.)

ದುರ್ಯೋಧನ : ಅಂದು ಭೀಮಾರ್ಜುನರು ದ್ರುಪದನ ತಂದು ಗುರುವಿಗೆ ದಕ್ಷಿಣೆಯಿತ್ತು ಸಂದರ್ಶೈ... ತಮಗೆ ಸಮರದಲಿ

ಪರಿಭವವಾಯ್ತು... ಭೀಮಸೇನನ ಇರವು ತಮ್ಮೊಳಗೆ ವನಜ ವನದಲಿ ತುರುಚೆ... ಕಬ್ಬಿನ ಬನದಿ ಕಡಸಿಗೆ... ಚೂತಮಯ ಕಾನನದಿ ಬೊಬ್ಬುಲಿ... ಪಾರ್ಥನ ಮೇಲೆ... ಯಮಳರ ಜಿನುಗಿನಲಿ ಇನಿತು ಜಾರೆನು... ಯುಧಿಷ್ಠಿರ ಜನಪನಾಗಲಿ ಮೇಣು ಮಾಣಲಿ ಭೀತಿಯಿಲ್ಲ... ಇವರೊಡನೆ ಹುದು ನಡೆಯದು... ನಮ್ಮಲಿ ಕದನವೇ ಕೈಗಟ್ಟುವುದು... ಕಾದಿದೊಡೆ ಹೆಬ್ಬಲವಹುದು... ದುರ್ಬಲ ದೈವಗತಿ ಬೇರೆ... ನದಿಗಳು ಅರಳೆಯ ಹಾಸು... ನವ ವಿಷವು ಉದರ ದೀಪನ ಚೂರ್ಣ... ಆವ ಅಂಗದಲಿ ಸಾಪತ್ನರಲಿ ಸದರವ ಕಾಣೆ ತಾನು.

(ಎಂದ... ಆಗ ಕರ್ಣನು ದುರ್ಯೋಧನನ ಆತಂಕವನ್ನು ಹೋಗಲಾಡಿಸುವಂತೆ ನುಡಿಯತೊಡಗುತ್ತಾನೆ.)

ಕರ್ಣ : ದುಗುಡವೇತಕೆ ಜೀಯ, ಡೊಂಬಿನ ಜಗಳವನು ತೆಗೆದು ಅರಿನೃಪರ ಸುಂಟಗೆಯನು ಆಯ್ಸುವೆನು... ಅವರ ತನುವನು ಯುದ್ಧ ರಂಗದಲಿ ದಿಗುಬಲಿಯ ಕೊಡಿಸುವೆನು... ಸಾಕಿನ್ನು ಒಗುಮಿಗೆಯ ಚಿಂತಾಂಗನೆಯನು ಓಲಗಿಸದಿರು... ಕುರುರಾಯ ಚಿತ್ತೈಸು... ತನಗೆ ನೇಮವನು ಕೊಡು... ಒಂದು ನಿಮಿಷದಲಿ ಹೊಡೆದು ಹೊಡೆ ಚೆಂಡಾಡಿ ರಿಪುಗಳ ಗಡಣವನು ಯಮ ರಾಜಧಾನಿಗೆ ನಡೆಸುವೆನು... ನೀ ನೋಡುತಿರು ಸಾಕು... ದುಗುಡವ ಬಿಡು... ಮನಸ್ಸಿನ ಕಂದು ಕುಂದನು ಹಿಡಿಯದಿರು...

ಕುರುರಾಯ ಚಿತ್ತೈಸು... ಪಾಂಡವರ ಕೊಬ್ಬುಗಳ ನಿಲಿಸುವೆನು... ಹದಿನಾಲ್ಕು ಲೋಕದ ಹಬ್ಬುಗೆಯ ಮೊಬ್ಬುಗಳನು ಈಡಾಡಿ... ನಭದೊಳಗೆ ಒಬ್ಬನೇ ರವಿ ತೊಳಗಿ ಬೆಳಗುವವೋಲು ಧರೆಯೊಳಗೆ ಒಬ್ಬನೇ ದುರ್ಯೋಧನನು ಮತ್ತೊಬ್ಬರಿಲ್ಲ ಎಂದೆನಿಸಿ ತೋರುವೆನು... ವಿದುರ ಭೀಷ್ಮಾದಿಗಳು ನಿನ್ನಯ

ಸದನದೊಳಗೆ ಉಂಡುಟ್ಟು ಪರರ ಅಭ್ಯುದಯವನೆ ಬಯಸುವರು... ಎಮ್ಮನು ದೂರುವರು.. ಅವರುಗಳ ಹದನ ನೀನೇ ಬಲ್ಲೆ... ಸಾಕಿನ್ನು ಅದರ ಮಾತೇಕೆ... ಅರಸ, ತನ್ನಯ ಕದನವನು ಚಿತ್ತೈಸು ಸಾಕಿನ್ನು.

(ಎಂದನಾ ಕರ್ಣ.)

ಶಕುನಿ : ಕರ್ಣನು ಆಡಿದನು... ಅಹುದು... ಈ ನುಡಿ ಸಹಜ... ಪಾಂಡವರೆಂಬವರು ಕಡುಸಹಸಿಗಳು.. ಗೆಲಲು ಅರಿದು... ಅಹಿತರನು ಕುಹಕೋಪಾಯ ಮಾರ್ಗದಲಿ ಪರಿಕರಸಹಿತ ಅವರುಗಳ ಗೆಲಬಹುದು... ನಿಮ್ಮ ಚಿತ್ತಕೆ ಬಹರೆ ತನ್ನ ಅಭಿಮತವನು ಅವಧರಿಸು...

ಐದು ಮುಖ... ಈರೈದು ಭುಜ... ಹದಿನೈದು ಕಂಗಳ... ವಿಗಡ ರುದ್ರನು ಮೇದಿನಿಯ ಮೇಲೆ ಒಂದು ಶಿರ..ಭುಜ ಎರಡನು ಅಳವಡಿಸಿ ಆದಿಪುರುಷನು ಭೀಮ ಪೆಸರಿನಲೈದೆ ಜನಿಸಿದನು... ಆತನ ಇದಿರಲಿ ಕೈದುಕಾರನು ಅದಾವನೈ ಹೇಳು... ಅರಸ ಕೇಳು, ಧರೆಯೊಳಗೆ ಬಿಲು ವಿದ್ಯದಲಿ ಮೂವರು ಕಣಾ ಸಾಮರ್ಥ್ಯ ಪುರುಷರು... ಒಬ್ಬರಿಗೆ ಒಂದು ಗುಣ... ಪಾರ್ಥಂಗೆ ಮೂರು ಗುಣ ಭರಿತ ವಾಗಿಹುದು... ಆತನೊಬ್ಬನ ಸರಿಸದಲಿ ಮಾರಾಂತು ಜೀವಿಸಿ ಮರಳ ಬಲ್ಲವನು ಆವನೈ ಹೇಳು...

ಸಮರದಲಿ ರಾಮಚಂದ್ರನ ಚರಣಯುಗ... ನಿಸ್ಸೀಮ ಭೀಷ್ಮಾಚಾರಿಯರ ಶಿರ... ಆ ಮಹಾರಥ ದ್ರೋಣನ ಎದೆ ನಡುಗುವುದು... ಸೌಮನಸ್ಯನು ನಿಷ್ಪ್ರಕಂಪ ಸನಾಮನು ಅರ್ಜುನ ದೇವನ ಇದಿರಲಿ ಭೂಮಿಯಲಿ ಬಿಲ್ಲಾಳು ಅದಾವವನು... ಶತ್ರುಗಳ ಸಂಹರಿಸಿ ರಾಜ್ಯವನು ಒತ್ತಿ ಆಳುವೆನು ಎಂಬ ಸಾಹಸ ಸತ್ವಗುಣ ನಿನಗಿಲ್ಲ...

ಪಾಂಡವರು ಅತುಲ ಭುಜಬಲರು... ಕೃತ್ರಿಮದ ಮುಖದಿಂದ ರಿಪುಗಳ ಕಿತ್ತು ಹಾಯಿಕಿ, ನೆಲನನು ಏಕಚ್ಛತ್ರದಲಿ ಸಲಹುವುದು ಮತ... ಕೇಳು. ನೀವು

ಸೋದರರುಗಳು... ನಿಮ್ಮೊಳು ಭೇದ ಮಂತ್ರವ ಮಾಡುವುದು ಮರ್ಯಾದೆಯೇ... ನಾವ್ ನಿಮ್ಮಡಿಯಲಿ ಅರಮನೆಯ ಸೇವಕರು... ವಾದಿಸುವರು ಇತ್ತಂಡ ಸರಿ... ನಮಗಾದರೆಯು ಕಂಡುದ ನುಡಿಯಬೇಕು... ಆದರಿಸು ಮೇಣ್ ಮಾಣು ಬಿನ್ನಹವು..

ಲೋಕದೊಳ್ ಪಕ್ಷವೆರಡೇ... ಪಿತೃ ಪಕ್ಷ... ಮೇಣ್... ಆ ಮಾತೃಪಕ್ಷ... ತಂದೆಯ ದೆಸೆ ವಿಪಕ್ಷ... ತಾಯ ದೆಸೆಯವರು ಸಪಕ್ಷವು... ತಕ್ಷಕನ ತೆರನಂತೆ ನಿಮ್ಮನು ಭಕ್ಷಿಸುವರು... ಪಾಂಡು ಪುತ್ರರನು ಆವ ಅಂಗದಲಿ ನೀನು ಈಕ್ಷಿಸುವುದೈ... ಮೊಳೆಯಲೇ ಮುರುಡಿಸಲು ಬೇಹುದು... ಬಲಿದ ಬಳಿಕ ಅದು ನಿನ್ನ ಹವಣೇ... ಇಳೆಯೊಳು ಅರ್ಧವನು ಇತ್ತು ರಿಪುಗಳ ಹೆಚ್ಚಿಸಿದ ಬಳಿಕ ಗೆಲುವನಾವನು... ದೇವ ದಾನವರೊಳಗೆ ಭೀಮಾರ್ಜುನರ ಕೈಮನದ ಅಳವನು ಅರಿಯಾ..ಮೇಲೆ ಭಾರವೈ..

ಧಾರುಣಿಯೊಳು ಪಿಪೀಲಿಕೆಯು ವಿಸ್ತಾರದಲಿ ಮಾಡಿದ ಮನೆಯ ಕಾಳೋರಗನು ಹೊಗುವಂತೆ ರಿಪು ಕುಂತೀ ಕುಮಾರಕರು ವೈರದಲಿ ಸಪ್ತಾಂಗವನು ತಪ್ಪದೆ ಕೈಸೂರೆ ಗೊಂಬರು... ಇದಕೆ ಕಾಲದಲಿ ವಿಚಾರವನು ಮಾಡುವುದು... ಹಿಂದೆ ನೀನು ಅವರುಗಳ ನಾನಾ ಚಂದದಲಿ ನೋಯಿಸಿದೆ... ಕಷ್ಟವೃತ್ತಿಯನು ಆಚರಿಸುತಿಹರು... ಮನದಲಿ ಕಂದು ಕುಂದದು... ಇಂದು ನೀನು ಆ ಪಾಂಡುಪುತ್ರರನು ಅಂದಗೆಡಿಸದೆ ಬಿಟ್ಟೆಯಾದೊಡೆ ಮುಂದೆ ರಾಜಕಾರಿಯವು ಬೆಟ್ಟಿತು..

ಇರುಬಿನಲಿ ಸಿಕ್ಕಿರ್ದ ಹುಲಿಯನು ಮುರಿದು ಕಳೆಯದೆ ತಳಪಟಕೆ ಬಿಟ್ಟು ಇರಿಯಬಹುದೇ... ಬಳಿಕ ಕೊಂದು ಕೂಗದೆ ಬಿಡುವುದೇ... ಕರುಬರಹ ಪಾಂಡವರಿಗೆ ಈಗಲೆ ಹರುವ ನೆನೆ... ಹೊರ ಬಿದ್ದರಾದೊಡೆ ತರಿದು ಬಿಸುಡದೆ ಮಾಣ್ಬರೇ ಹೇಳು... ಅಡವಿಯಲಿ ಜನಿಸಿದರು...

ಅಡವಿಯೊಳಗೆ ಬೆಳವಿಗೆ... ಅಡವಿಯೇ ಇನ್ನು ಅವರ ಬಾಳಿಕೆಗೆ ನೆಲಮನೆ ಯದಲ್ಲದೆ... ಪಾಂಡುಪುತ್ರರಿಗೆ ಪೊಡವಿಯ ಒಡೆತನ ಸಲ್ಲದು... ಕಾಲದಲಿ ರಾಜ್ಯವ ಕೊಡುವುದು... ಅವರನು ನಡೆಸುವುದು... ಆವ ಅಂಗದಲಿ ಮತವಲ್ಲ..

ಗೂಗೆಗಳು ಕಾಲವನು... ಆ ದೈತ್ಯರುಗಳು ನಿರ್ಜರರ ಏಳಿಗೆಯನು... ತಮಾಳಿ ರವಿರಶ್ಮಿಗಳನು... ಆ ಚೋರ ಬಲು ನಿದ್ರೆಯನು... ಕಾಲ ಭುಜಗನು ಗರುಡನ ಉಳಿವನು ತಾಳದ ಅಂದದಿ... ಪಾಂಡವರು ನಿನ್ನ ಏಳಿಗೆಯ ಸೈರಿಸರು ಚಿತ್ತೈಸು... ವಿಗಡ ರುದ್ರನು ಲೋಚನಾಗ್ನಿಯೊಳು ಒಗುಮಿಗೆಯ ಕೋಪದಲಿ ಕಾಮನ ಮಿಗೆ ದಹಿಸಿದ ಅಂದದಲಿ... ಲಾಕ್ಷಾಭವನದಲಿ ರಿಪು ಕುಂತೀಕುಮಾರಕರ ಹೊಗೆದು ಕಳೆ... ಹಗೆಗೆ ಹರಿವಹುದು... ಅಲ್ಲದಿರ್ದೊಡೆ ರಾಜಕಾರ್ಯವಿದು ವಿಗಡಿಸುವುದೈ...

ಕೌರವ ಜನಪ, ಇನಿತು ಚಿಂತಿಸಲೇಕೆ... ನಿಮ್ಮಡಿಗಳಿಗೆ ತಾನೊಂದು ಅನುವ ಬಿನ್ನಹ ಮಾಡುವೆನು... ಪಾಂಡವರ ನೆಳಲಿರಲು ನಿನಗೆ ರಾಜ್ಯವನು ಆಳ್ವ ಫಲ ಸಂಜನಿಸಲರಿಯದು... ಕಾಲದಲಿ ನೀ ನೆನೆ ಉಪಾಯವನು ಒಂದನು.

(ಎಂದು ಕಳಿಂಗ ಕೈಮುಗಿದ..)

ದನಿಗೆ ನಡೆದು ಒಳಪೊಕ್ಕು ಮರೆಗೂಡಿನಲಿ ಸಿಲುಕಿದ ಹುಲಿಯವೋಲು... ಗಾನಕ್ಕೆ ಮನ ಸೋಲ್ದು ಕಾನನದಿ ಬೀಸಿದ ಬಲೆಯೊಳಗೆ ಹನನವ ಅರಿಯದ ಮೃಗದ ವೋಲು... ಇರುಬಿನಲಿ ಕೆಡಹಿದ ಕರಿಯವೋಲು... ರಿಪು ಜನಪರ ಅಭ್ಯುದಯದ ವಿನಾಶವನು ಎಸಗಬೇಕು...

(ಎಂದು ಕಳಿಂಗ ಸುಯೋಧನಂಗೆ ಆನಂದವೆನಿಸಿ ದುರ್ಬೋಧೆಗಳ ನಾನಾ ಚಂದದಲಿ ಬೋಧಿಸಿ...

ಸುನೀತಿಯನು ಅಂದಗೆಡಿಸಿ... ತದೀಯ ವಂಶಚ್ಛೇದ ಮಾರ್ಗವನು ಒಂದುಗೂಡಿ... ಲೋಕವ ಕೊಂದನೈ ಜನಮೇಜಯ ಕ್ಷಿತಿಪಾಲ ಕೇಳೆಂದ.)

ದುರ್ಯೋಧನ : ಎಮ್ಮ ಬಹುಮಾನ ಅವಮಾನವು ನಿಮ್ಮದು... ಅಲ್ಲದೆ ನಮ್ಮಯ ಸೊಮ್ಮು ಸಂಬಂಧದಲಿ ಬೇರೆ ಹಿತವರ ನಾನು ಕಾಣೆ... ಇನ್ನು ಸಮ್ಮತದಿ ಪಾಂಡವರಿಗೆ ಅಗ್ನಿಯಲಿ ಒಮ್ಮೆ ಹರಿವನು ನೆನೆವೆನು... ಒದವಿದಡೆ ಎಮ್ಮ ಸುಕೃತೋದಯದ ಫಲ.

(ಎನೆ... ಕಳಿಂಗಾದಿಗಳು ತಂತಮ್ಮ ಅನುಮತವ ಹೇಳಿದರು... ಕೌರವ ಜನಪನು ಪಾಂಡವರಿಗೆ ಮನದೊಳಗೆ ಕೇಡ ನಿಶ್ಚೈಸಿದನು.)

❍

19. ದುರ್ಯೋಧನನ ಒಳಸಂಚು

(ಆದಿಪರ್ವ : ಎಂಟನೆಯ ಸಂಧಿ : ಪದ್ಯ 56 ರಿಂದ 65)

ಪಾತ್ರಗಳು

ಧೃತರಾಷ್ಟ್ರ : ಹಸ್ತಿನಾವತಿಯ ರಾಜ. ದುರ್ಯೋಧನನ ತಂದೆ.

ದುರ್ಯೋಧನ : ಧೃತರಾಷ್ಟ್ರ ಮತ್ತು ಗಾಂಧಾರಿಯ ಹಿರಿಯ ಮಗ.

ದುರ್ಯೋಧನನ ಒಳಸಂಚು

ಕಳಿಂಗಾದಿಗಳು ತಂತಮ್ಮ ಅನುಮತವ ಹೇಳಿದರು..ಕೌರವ ಜನಪನು ಪಾಂಡವರಿಗೆ ಮನದೊಳಗೆ ಕೇಡ ನಿಶ್ಚೈಸಿದನು... ಜನಕನಲ್ಲಿಗೆ ನಡುವಿರುಳು ಬಂದು..ಅನುನಯದೊಳು ಈ ಮಾತ ತೆಗೆದು... ವೃಕೋದರನ ಊಳಿಗವನು ಅರ್ಜುನನ ಸಾಹಸವ ಎಂದನು.

ದುರ್ಯೋಧನ : ಅರಿಗಳ ಉದ್ಭವವು ಇನ್ನು ಗಂಟಲನು ಅರಿವುದು.. ಅರಸ, ಎಮ್ಮನು ನೂರು ಮಕ್ಕಳನು ಬರಿದೇ ಹಡೆದು ತಾಯ ಜವ್ವನವ ಕೆಡಿಸಿದೆ... ಭೀಮಾರ್ಜುನರು ಹಸ್ತಿನಪುರದೊಳು ಇರಲಿ... ಎಮ್ಮಿನಿಬರನು ದೇಶಾಂತರಕೆ ನೇಮಿಸು..ಜೀಯ, ಭೀಮನೊಡನೆ ನೂಕದು.

ಧೃತರಾಷ್ಟ್ರ : ಅಕಟ..ಮಗನೇ, ಧರ್ಮಸುತ ಬಾಧಕನೆ..ಭೀಮಾರ್ಜುನರ ಮತಿ ಕಂಟಕದೊಳು ಎರಗದು..ಧರ್ಮನಂದನನ ಮೀರಿ ನಡೆಯರು.. ಪಾಂಡುವೇ ಸಕಲ ರಾಜ್ಯಕೆ ಪಾಲಕನು... ತನ್ನೊಳು ತಪ್ಪಿದನೆ... ವಿಕಳ ಮತಿಗಳ ಮಾತನು ಬಿಡು.

(ಎಂದನು ಮಗಗೆ ಧೃತರಾಷ್ಟ್ರ.)

ದುರ್ಯೋಧನ : ಬೊಪ್ಪ ಬಿನ್ನಹವು... ಅವರ ಜನಕನು ನಿಮಗೆ ತಪ್ಪಿ ನಡೆಯನು... ನೀವು ಇನ್ನು ಆ ಪಾಂಡುಸುತರಿಗೆ ರಾಜ್ಯ ವೈಭವವ ಒಪ್ಪಿಸುವುದು... ಧರ್ಮಜನ ತರುವಾಯ ಇಳೆ

ಅಪ್ಪುದು... ಆ ವಿಧಿಯಲ್ಲಿ ಸಂತತಿ ಅಪ್ಪುದು ತಪ್ಪದು... ಅವರಿಗೆ ನೆಲವಿದು ಸಲಲಿ... ಹೊಲ್ಲೆಹ ಏನು... ಜನಪ, ನಿಮ್ಮ ತಮ್ಮನ ತನುಜರೊಡನೆಯೆ ಸುಖದಲಿ ರಾಜ್ಯ ಮಾಡುವುದು ಅನುನಯವಲಾ... ನಮ್ಮ ನೂರ್ವರನು ಬೀಳುಕೊಡುವುದು... ಓಲೈಸಿ ಕೊಂಬರೆ ಜನಪರುಂಟು... ತನಗಿರದೆ ಖಂಡೆಯದ ಸಿರಿ... ಇನ್ನೇನು... ಕರೆ ಜನನಿಯನು ಬೀಳ್ಕೊಂಬೆವು.

(ಎಂದು ನಿಂದಿರ್ದ...)

ಧೃತರಾಷ್ಟ್ರ : ಎಲೆ ಮಗನೆ, ಎನ್ನಾಣೆ ಬಾ ಕುರುಕುಲತಿಲಕ... ನೀ ಹೋಗಲು ಎನ್ನೊಡಲು ಉಳಿವುದೇ... ಮರಿಯಾನೆ ಬಾರೈ.

(ಕಂದ ಬಾ ಎಂದು ಸೆಳೆದು ಬಿಗಿಯಪ್ಪಿದನು.)

ಕಂಬನಿ ತುಳುಕಿದನು... ಹೇಳು... ಇನ್ನು ಮೇಲಣ ಬಳಕೆಯನು... ರಿಪುರಾಜ ಕಾರ್ಯಕೆ ಬುದ್ಧಿಯೇನು.

ದುರ್ಯೋಧನ : ನೀರ... ವಿಷ... ಇಕ್ಕಿದೆವು... ಕಿಚ್ಚಿನ ಭಾರವಣೆ ಏನಹುದೊ... ಪುಣ್ಯವ ಹೋರಿಸುವ... ಒದಗಿದರೆ ನಮ್ಮ ಹಗೆ ಹೋಗಲಿ... ವೈರಿಗಳ ವಿಸ್ತಾರ ಹರಿದು ಓರಣಿಸಿತೈ... ಜೀಯ, ಇದು ಜೂಜಿನ ಬಾರುಗುತ್ತು ಮೆರೆಯಲಿ..ನಿಮ್ಮ ಚಿತ್ತಕೆ ಬಹಡೆ ಮಾಡುವೆವು.

ಧೃತರಾಷ್ಟ್ರ : ವೈರಿ ಘಟಕುಲಕೆ ಆವಿಗೆಯನು ಆವ ತೆರದಲಿ ಇಡಿಸುವಿರಿ... ನಿಮ್ಮೊಳಗೆ ಆವು ಹೊರಗೇ... ಮಗನೆ, ನಿಮ್ಮ ವೈಭವಕೆ ಸೊಗಸು ಎನೆ ಮಿಗೆ ಸಂಭಾವಿಸುವುದು... ಆವ ಅಂದದಲಿ ಸಾವರು... ಆ ತೆರನ ನೀ ಹೇಳು... ಆವು ಸೊಗಸುವೆವು.

(ಎಂದು ನುಡಿದನು ಮಗಗೆ ಧೃತರಾಷ್ಟ್ರ.)

ದುರ್ಯೋಧನ : ನೀ ಪಾಂಡು ಕುಮಾರಕರ ಕರೆಸಿ ಧರೆಯ ಹಸುಗೆಯ ಮಾಡಿಕೊಡು... ಸಹ ದಾಯಾದ ವಿಷಯದಲಿ ಅವರಿಗೆ ವಾರಣಾವತಿ ಪುರದೊಳಗೆ ಇರವನು ಪರುಠವಿಸಿ... ಕರಿ

ತುರುಗ ಭಂಡಾರವನು ಕೊಡು... ಬಳಿಕ ತಾನು ಲಾಕ್ಷಾಭವನ ರಚನೆಯಲಿ ಉರುಹಿ ಸುಡುವೆನು.

ಧೃತರಾಷ್ಟ್ರ : ಅಹುದು ಮಗನೇ, ಮಂತ್ರವಿದು ನಮಗೆ ಮತವಹುದು... ಈ ಭೀಷ್ಮ ವಿದುರರು ಕುಹಕಿಗಳು... ಕೃತಭಿನ್ನವಾದರೆ ಮೇಲೆ ಭಾರವದು... ಗಹನ ಗತಿಯಲಿ... ಗೂಢತರ ಸನ್ನಿಹಿತ ಕರ್ಮಕಲಾಪದಲಿ... ರಿಪು ದಹನ ಸಿದ್ಧಿಯ ನೆನೆವುದು.

(ಎಂದನು ಮಗಗೆ ಧೃತರಾಷ್ಟ್ರ.)

❍

20. ಅರಗಿನ ಮನೆಯನ್ನು ಕಟ್ಟುವುದು

(ಆದಿಪರ್ವ : ಎಂಟನೆಯ ಸಂಧಿ : ಪದ್ಯ 66 ರಿಂದ 70)

ಪಾತ್ರಗಳು

ದುರ್ಯೋಧನ : ಹಸ್ತಿನಾವತಿಯ ಯುವರಾಜ. ಧೃತರಾಷ್ಟ್ರ ಮತ್ತು ಗಾಂಧಾರಿಯ ಹಿರಿಯ ಮಗ.

ಪುರೋಚನ : ದುರ್ಯೋಧನನ ಆಪ್ತ ಸಚಿವ. ವಾರಣಾಸಿಯಲ್ಲಿ ಅರಗಿನ ಮನೆಯನ್ನು ಕಟ್ಟಿದವನು.

ಅರಗಿನ ಮನೆಯನ್ನು ಕಟ್ಟುವುದು

ಜನಕನನು ಬೀಳ್ಕೊಂಡು... ಕೌರವ ಜನಪ ತನ್ನ ಅರಮನೆಯ ಸಚಿವರೊಳು ಅನುಪಮಿತ ವಿಶ್ವಾಸ ಸೂಚಕನನು ಪುರೋಚನನ ನೆನೆದ... ರೌರವ ರಾಜಕಾರ್ಯದ ಘನವನು ಅರುಹಿ... ಸಮಗ್ರ ಧನ ಸಾಧನವ ಜೋಡಿಸಿಕೊಟ್ಟು... ಅವನ ಗುಪ್ತದಲಿ ಕಳುಹಿದನು.

ಆ ಪುರೋಚನನು ಎಂಬುವನು ಕುರುಪತಿಗೆ ಬಲು ಪಾಪಕರ್ಮನು... ಬಳಿಕ ಆ ಪುರಾಂತರದಿಂದ ವಾರಣಾವತಿಗೆ ಬಂದನು... ಆ ಪುರದ ಜನವು ಅರಿಯದಂತಿರೆ... ಕಾಪುರುಷನು ನಸುದೀಪ ತಾಗಿದೊಡೆ ಏಕರೂಪಹ ರಾಜಭವನವನು ಅಳವಡಿಸಿದನು.

ಕೇಡಿಗನು ಹಗಲು ತೀರಲು... ತಳಿತ ಕೈ ದೀವಿಗೆಯ ಹಂತಿಯ ಬೆಡಗಿನಲಿ... ರಾಶಿಗ್ರಹ ಬಲದ ಆಯವ್ಯಯದ ತಾರಾದಿಗಳ ವಿಪರೀತ ಯೋಗದಲಿ... ನಿಗಮ ಸಂಸ್ಥಿತ ವಾಸ್ತುರಚನಾದಿಗಳನು ಕೃತ್ರಿಮ ರಚನೆಯಲಿ... ಅರಮನೆಯ ಮಾಡಿಸಿದನು... ಭಿತ್ತಿಗಳ ಅರಗಿನಲಿ... ನೆಲೆಯುಪ್ಪರಿಗೆಗಳನು ನವ ಸಜ್ಜರಸ ಗುಡ ಮಿಶ್ರದಲಿ... ಅವರಲಿ ಕವಾಟ ಸ್ತಂಭ ವೇದಿಗಳ ವಿರಚಿಸಿದ. ನವ ಸೌಧ ಭದ್ರಾಸ್ತರಣ ನಂದ್ಯಾವರ್ತದಲಿ ಪರಿಪರಿಯ ಬಿನ್ನಾಣದೊಳು ಅರಗಿನ ಮನೆಯ ಮಾಡಿಸಿದ.

ಹಿರಿಯ ಭವನದ ಸುತ್ತುವಳಯದ ಮುರುಹಿನಲಿ... ಮನೆಮನೆಗಳ ಆ ಮಂದಿರ ನಿಕಾಯಕೆ ಒಂದು ಬಾಗಿಲು... ಆ ದ್ವಾರದೇಶದಲಿ ತನ್ನದು ಇರವು... ಬಾಗಿಲಿಕ್ಕಿದು ಹೊರಗೆ ಮುದ್ರಿಸಿ... ಕಿಚ್ಚ ಚುಚ್ಚುವ ಪರುಠವಣೆಯಲಿ ಖಳ ಪುರೋಚನನು ಅಂದು ನಿರ್ಮಿಸಿದ.

❍

21. ಧೃತರಾಷ್ಟ್ರನ ನಯವಂಚನೆ

(ಆದಿಪರ್ವ : ಎಂಟನೆಯ ಸಂಧಿ : ಪದ್ಯ 71 ರಿಂದ 81)

ಪಾತ್ರಗಳು

ಧೃತರಾಷ್ಟ್ರ : ಹಸ್ತಿನಾವತಿಯ ರಾಜ.

ಧರ್ಮರಾಯ : ಪಾಂಡುರಾಜ ಮತ್ತು ಕುಂತಿಯ ಮಗ.

ಭೀಷ್ಮ : ಶಂತನು ಮತ್ತು ಗಂಗಾದೇವಿಯ ಮಗ.

ಪುರಜನರು : ಹಸ್ತಿನಾವತಿಯ ಪ್ರಜೆಗಳು

ಧೃತರಾಷ್ಟ್ರನ ನಯವಂಚನೆ

ಧರಣಿಪತಿ ಕೇಳು, ಇತ್ತ ಹಸ್ತಿನಪುರದೊಳಗೆ ಧೃತರಾಷ್ಟ್ರ ಭೂಪಾಲ ಕುಂತೀ ಕುಮಾರರ ಕರೆಸಿ... ಕಟ್ಟೇಕಾಂತದಲಿ ಬೆರಗು ಬಿನ್ನಾಣದಲಿ ಮಕ್ಕಳ ಮರುಳು ಮಾಡಿದನು... ಏನ ಹೇಳುವೆನು... ಉರಿವನೆಯ ಬೀಡಾರದಲಿ ಬಿಡಿಸಲ್ಕೆ ಮನದಂದ.

ಧೃತರಾಷ್ಟ್ರ : ಈ ಕೌರವರು ದುರುಳರು... ನೀವು ಅತಿ ಗರುವರು... ಅವದಿರು ಪಾಪಕರ್ಮರು... ನೀವು ಪರಮಪುಣ್ಯರು... ತನ್ನವದಿರು ಕುಮಂತ್ರಿಗಳು... ಅರಸ, ನಿನ್ನೊಡನೆ ಎನ್ನ ಕುನ್ನಿಗಳು... ಎರಳೆ ತೋಳನ... ಸಾದು ಸುಣ್ಣದ ನೆರವಿಗೆ... ಅದುವು ಆ ಬಗೆಯ ಸೇರುವೆ.

(ಎನುತ ಬಿಸುಸುಯ್ದು.)

ಮಗನೆ ಕೇಳು, ತಂದೆಯಿಲ್ಲದ ನಿಮಗೆ ಹಿತರು ಆರೆಂದು ಮರುಗುವೆನು... ಎನ್ನ ಮಕ್ಕಳು ಕೊಂದು ಹಿಂಡೆಯ ಕೂಳನು ಉಂಬರೆ ಹೇಸುವವರಲ್ಲ... ಇಂದು ನಿಮಗೆ ಅವರಿಂದಲು ಉಪಹತಿ ಬಂದುದಾದರೆ... ತನ್ನ ತಲೆಯಲಿ ಅಕೀರ್ತಿ ಕಿಲ್ಬಿಷ ನಿಂದು ಹೊರುವುದು... ತಾತ, ನೀವು ಕೆಡುವಿರಿ... ತನಗೆ ಅಖ್ಯಾತಿ... ಕೌರವರು ಎಂಬುವರು ದುರ್ನೀತಿಕಾರರರು... ಭೀಷ್ಮ ವಿದುರರು ಅವದಿರಿಗೆ

ಭೀತರು... ನೀತಿ ಸಮ್ಮತವಾಗಿ ಚಿತ್ತದೊಳಾತ ಮತವನು ನಮ್ಮೊಳು ಹೇಳಿ... ಭೀತಿ ಬೇಡ.

(ಎಂದು ಅರಸ... ಧರ್ಮಜನ ಕರವ ಹಿಡಿದನು.)

ಧರ್ಮರಾಯ : ಬೇರೆ ಮತವು ಎಮಗೇನು... ನಿಮ್ಮದು ಬೊಪ್ಪನ ಚಾರಿ... ನೀವು ಬೊಪ್ಪನ ನೂರುಮಡಿ ಒಳ್ಳಿದರು... ಎಮಗೆ ಬೇರಿನ್ನು ಹಿತರುಂಟೆ... ಬೇರೆ ಇರಿಸಿ... ಕೂಡಿ ಇರಿಸಿ... ನಿಮಗೆಯು ತೋರಿದುದೆ ಮತ... ನಿಮ್ಮ ನೇಮವ ಮೀರಬಲ್ಲನೆ.

(ಎಂದು ಧರ್ಮಜ ಅರಸಂಗೆ ನುಡಿದನು. ಎರೆಯ ವಂಕಿಯೊ... ಕಳಿತ ಮೆಕ್ಕೆಯೊ... ಹುರಿಯ ಬಲೆಯೋ... ರಾಗ ಸನ್ನೆಯೊ... ಸರಿಯ ಗೊರೆಯೋ... ತಕ್ಕಿನ ಉಂಡೆಯೊ... ಸವಿಯ ಚಿತ್ರಕವೊ... ಅರಸನ ಅಂಕೆಯ ಮನದ ಬಯಕೆಯ ಹೊರೆಯ ಬಳಕೆಯನು... ಈ ಸಮಂಜಸ ತರದ ಸಾತ್ವಿಕರು ಎತ್ತಬಲ್ಲರು ಭೂಪ ಕೇಳೆಂದ.)

ಧೃತರಾಷ್ಟ್ರ : ಕಂದ, ಮನ ಮುನಿಸಿಲ್ಲಲೇ... ನಾವು ಎಂದ ನುಡಿಗೆ ಒಡಂಬಡುವಿರಾದೊಡೆ... ಮುಂದೆ ವಾರಣಾವತ ಪುರವಿದೆ... ಇಲ್ಲಿಗೆ ಅರುವತ್ತು ಸಂದ ನಾಡು... ಸಮಸ್ತ ವಸ್ತುಗಳಿಂದ ಪೂರಿತ ಹಸ್ತಿನಾಪುರದಿಂದ ಮಿಗಿಲು... ಅದು ನಿಮಗೆ ರಾಜಧಾನಿ ಸ್ಥಾನ.

ಧರ್ಮರಾಯ : ಹೈ... ಹಸಾದ... ಭವತ್ ಕೃಪಾ ಸನ್ನಾಹವೇ ಸಾಮ್ರಾಜ್ಯ... ಆವುದನು ಊಹಿಸಿದೊಡೆ... ಆ ಸ್ಥಿತಿಯೊಳಗೆ ವಿನಯದಲಿ ಅಡಗಿಹೆವು.

(ಎಂದು ಗಾಹುಗತಕವನು ಅರಿಯದೆ ಇವರು ಉತ್ಸಾಹದಲಿ ಕೈಕೊಂಡು... ಭೀಷ್ಮಗೆ ಬೇಹ ವಿದುರ ದ್ರೋಣ ಮುಖ್ಯರಿಗೆ ಹದನ ಅರುಹಿದರು... ಧಾರುಣೀಪತಿ ರತ್ನಮಯ ಭಂಡಾರ ಸಹಿತ ಗಜ ಅಶ್ವ ರಥ ಪರಿವಾರವನು ಹಸಿಗೆಯನು ಮಾಡಿದನು... ಎರಡು ಭಾಗವನು ಬಹು ವಿಸ್ತಾರದಲಿ ಓರಣದಲಿ ಅಳವಡಿಸಿ...)

ಧೃತರಾಷ್ಟ್ರ : ಕೌರವರಿಗೆ ಒಂದು... ಇವರಿಗೆ ಒಂದು.

ಭೀಷ್ಮಾದ್ಯರು : ಅಹುದು.

(ಎನಲು... ಇವರ ಮನ್ನಿಸಿದ. ಇವರು ಶುಭದಿನ ಶುಭ ಮುಹೂರ್ತ ಪ್ರವರದಲಿ ಹೊರವಂಟರು... ಆ ಜನ ನಿಹವ ಮರುಗಿತು.)

ಪುರಜನ : ಅರಸ, ನಮಗೆ ಅರಣ್ಯವೇ ಗತಿ.

(ಎಂದು ಅವರ ಕಳುಹುತ ಬಂದರು... ಆ ಕೌರವರು ನಿಂದರು... ಭೀಷ್ಮ ಕಲಶೋದ್ಭವರು ಸುತರಿಗೆ ಬುದ್ಧಿ ಹೇಳಿದು ಪುರಕೆ ಮರಳಿದರು... ವಿದುರನು ಒಡನೆ ಐತರುತ ಸಂಕೇತದಲಿ ಸೂಚಿಸಿ ಮರಳಿದನು... ನೃಪ ಸುದತಿ ವರ ಗಾಂಧಾರಿ ಮೊದಲಾದ ಅಖಿಳ ರಾಣಿಯರು ಮುದದ ಮುರುವಿನಲಿ ಇವರ ತೆಗೆದಪ್ಪಿದರು... ಭೂಪತಿ ಸಹಿತ ಕಡು ಶೋಕದಲಿ ಕಳುಹಿಸಿಕೊಂಡು ಹಸ್ತಿನಾಪುರಕೆ ಬಂದರು.)

❍

22. ಅರಗಿನ ಮನೆಯ ಪ್ರಸಂಗ

(ಆದಿಪರ್ವ : ಎಂಟನೆಯ ಸಂಧಿ : ಪದ್ಯ 83 ರಿಂದ 92)

ಪಾತ್ರಗಳು

ಧರ್ಮರಾಯ : ಪಾಂಡುರಾಜ ಮತ್ತು ಕುಂತಿಯ ಮಗ.

ಪುರಜನರು : ವಾರಣಾಸಿಯ ಪ್ರಜೆಗಳು.

ಅರಗಿನ ಮನೆಯ ಪ್ರಸಂಗ

ಕುಂತಿ ಸಹಿತ ಐವರು ಆನಂದದಲಿ ವರ ವಾರಣಾವತಕೆ ಬಂದರು... ಅಂದು ಪುರಜನ ತಾವು ಇದಿರಾಗಿ ಕೂಡಿ ಬಂದು... ಕನ್ನಡಿ ಕಳಶ ವಿಭವದಲಿ ಕುಂತೀನಂದನರ ಹೊಗಿಸಿದರು... ಅಂದು ಪಟ್ಟಣ ಕೂಡೆ ಗುಡಿ ತೋರಣ ರಚನೆಯಲಿ ಮೆರೆದುದು... ಬೀಡು ಕಾಣಿಕೆಯಿತ್ತು ಕಂಡುದು... ಪುರೋಚನ ನಾಡೆ ಕಾಣಿಸಿದನು... ಅವರ ಕೂಡೆ ಹಾಸುಹೊಕ್ಕಾಗಿ ಮನವರಿದು ಸಂದನು... ಯಮನಂದನನು ಮನೆ ಮಾಡಿದ ಅಂದವನು ನೋಡಿದನು.

ಧರ್ಮರಾಯ : ಬೊಪ್ಪನವರು ಅರಗಿನ ಅರಮನೆಗೆ ಊಡುರಿವ ಬೇಳುವೆಯ ನೆನೆದರೆ... ನಾವ್ ನಾಲ್ವರು ಸಮಿಧೆಗಳು... ಅಯ್ಯನ ರಮಣಿಯು ಆಹುತಿ... ಭೀಮನೇ ಪಶು... ಕುಮತಿ ಕಟ್ಟಿಸಿದ ಅರಮನೆಯಿದು ಅಗ್ನಿ ಕುಂಡ... ಎಮಗೆ ಸಂಶಯವಿಲ್ಲ... ದೀಕ್ಷಾಕ್ರಮವ ಧರಿಸಿದವನು ರಾಜೋತ್ತಮನೊ... ದುರ್ಯೋಧನನೊ... ಆವನು.

(ಎಂದನು ನಗುತ ಯಮಸೂನು... ಜನಪ ಕೇಳೈ, ವಿದುರನು ಅಟ್ಟಿದ ಖನಕ ಬಂದನು... ಇವರ ಸಜ್ಜೆಯ ಮನೆಯಲಿ ಅತಿ ಗುಪ್ತದಲಿ ನೆಲದೊಳು ಪಥವ ಸವೆಸಿದನು... ಖಳ ಪುರೋಚನನು ಒಡೆಯನ ಆಜ್ಞೆಯಲಿ... ಕಿಚ್ಚಿನಲಿ ಚುಚ್ಚುವ ಸಂದುಗಟ್ಟನು ಆ ಬಾಹಿರನು ಅನುದಿನದೊಳು ನೆನೆವುತಿರ್ದನು... ಒಂದು ದಿನ ಹಬ್ಬದಲಿ ಭೂಸುರ ವೃಂದ ಉಂಡುದು... ಅಲ್ಲಿ ಪಂಚ ಪುತ್ರಿಕೆಯೆಂದು ಬೇಡತಿ

ಸುತರು ಸಹಿತ ಒಬ್ಬಳಿದ್ದಳು... ಕೇಳು ಜನಮೇಜಯ ಮಹೀಪಾಲ, ಅಂದಿನ ಇರುಳು ಪುರೋಚನನು ತಾನೊಂದ ನೆನೆದರೆ ದೈವಗತಿ ಬೇರೊಂದ ನೆನೆದುದು... ಅವನು ನಿದ್ರೆಯೊಳು ಅರಿಯದಿರಲು... ಇವರು ಆ ಭವನ ಮುಖದಲಿ ಕಿಚ್ಚನು ಒಟ್ಟಿಸಿ... ಪವನಸುತ ಸಹಿತ ಬಿಲದ ಮಾರ್ಗದಲಿ ಹಾಯ್ದರು... ಮುನ್ನ ಅವರು ಬೆಂದರು... ಬಳಿಕ ಆ ಭವನ ಪಂಕ್ತಿಗಳು ಅವನಿಯಲಿ ಉರಿದು ಕರಗಿದವು... ಪುರಜನ ಐದೆ ಬೆರಗಾಗೆ... ಅವನಿಯಲಿ ಹೊನಲಾಯ್ತು.)

ಪುರಜನ–1 : ಅಕಟ, ಪಾಂಡವರು ಅಳಿದರೇ... ಕೌಳಿಕದಿ ಕೌರವರು ಇರಿದರೇ... ಮತಿ ವಿಕಳರು ಅವದಿರು ಧರ್ಮದಲಿ ನಡೆದು ಬೆಂದು ಹೋದರು... ಪ್ರಕಟ ಪಾಪರಿಗೆ ಸಾಮ್ರಾಜ್ಯಕವು ಅಹುದು... ಧರ್ಮಾತ್ಮರಿಗೆ ಈ ಪರಿ ವಿಕಟತೆಯ ಅಸುರ ರಾಜ್ಯ.

(ಎಂದುದು ಪೌರಜನ ಮರುಗಿ...)

ಪುರಜನ–2 : ಪುರೋಚನ ಕುನ್ನಿಯದು ಮುನ್ನ ಬೆಂದನಲಾ... ಆ ಹದನ ಲೇಸಾಯ್ತು... ಅಕಟ, ಅವ್ವೆಯರು ಸಹಿತ ಪಾಂಡವರು ಆಪನ್ನರಾದರೆ... ಇನ್ನು ಧರ್ಮ ಸಂಪ್ರತಿಪನ್ನ ಗುಣದ ಆಚಾರಗಳ ಸಂಪನ್ನತೆಯನು ಸುಡು ಸುಡು.

(ಎಂದು ನಿಖಿಲ ಪರಿವಾರ ಒರಲಿ ಮರುಗಿತು... ಹಸ್ತಿನ ನಗರಿಯಲಿ ಈ ಬೇಳಂಬ ಒಗೆದುದು... ತತ್ಪೌರಜನ ಮನವುಗಿದು ಶೋಕಮಯ ಸಾಗರದ ಮಧ್ಯದಲಿ ಬಿದ್ದುದು... ವಿದುರ ಭೀಷ್ಮಾದಿಗಳಿಗೆ ಆನನ ಹೊಗೆದುದು... ಆ ಧೃತರಾಷ್ಟ್ರ ಸುತರಿಗೆ ಮುಖಾಂಬುಜವ ದುಗುಡ ದಡ್ಡಿಯ ಹರುಷ ಸಿರಿ ಹೊಕ್ಕಳು... ಕೌರವವೃಂದ ಪರಿಜನವೈದೆ ಶೋಕಿಸಿ ಆ ಸುರನದಿಗೆ ಬಂದುದು... ಗಂಗಾತೀರದಲಿ ಮಿಂದು, ಬಳಿಕ ಸಂದ ವಿಧಿಯಲಿ ಊರ್ಧ್ವದೇಹಿಕವ ಮಾಡಿ... ಪರಮಾನಂದ ಮಿಗಲು ಅವರು ಇರ್ದರು... ಇತ್ತಲು ಇಂದು ಕುಲಸಂಭವರ ವಿಧಿಯನು ಮತ್ತೆ ಕೇಳೆಂದ.) ❍

23. ಹಿಡಿಂಬೆಯ ಪ್ರಸಂಗ

(ಆದಿಪರ್ವ : ಎಂಟನೆಯ ಸಂಧಿಯ 92, 93, 94 ನೆಯ ಪದ್ಯಗಳು
ಮತ್ತು ಒಂಬತ್ತನೆಯ ಸಂಧಿಯ 1 ರಿಂದ 25 ಪದ್ಯಗಳು)

ಪಾತ್ರಗಳು

ಪಾಂಡವರು : ಧರ್ಮರಾಯ–ಭೀಮ–ಅರ್ಜುನ–ನಕುಲ–ಸಹದೇವ

ಕುಂತಿ : ಪಾಂಡವರ ತಾಯಿ.

ಹಿಡಿಂಬ : ಕಾಡಿನಲ್ಲಿದ್ದ ರಾಕ್ಷಸ ಬುಡಕಟ್ಟಿನ ವ್ಯಕ್ತಿ.

ಹಿಡಿಂಬಿ : ಹಿಡಿಂಬನ ತಂಗಿ.

ವ್ಯಾಸ : ಪರಾಶರ ಮುನಿ ಮತ್ತು ಮತ್ಸ್ಯಗಂಧಿಯ ಮಗ.

ಹಿಡಿಂಬೆಯ ಪ್ರಸಂಗ

ಇತ್ತಲು ಇಂದುಕುಲಸಂಭವರ ವಿಧಿಯನು ಮತ್ತೆ ಕೇಳೆಂದ... ಬಿಲಮುಖದೊಳು ಉತ್ತರಿಸಿ... ಬಲುಗತ್ತಲೆಯೊಳು... ಅಡವಿಯ ಮಾರ್ಗದಲಿ... ಕಲು ಮುಳುಗಳೊಳು... ಕಾಪಥಕೆ ಕೋಮಲ ಚರಣಗಳ ಕೊಡುತ ತೊಳಲಿದರು... ಬೆಳಗಾಗೆ ಹಳ್ಳಿಯ ಬಳಿಯ ಹೊದ್ದದೆ... ಹಳುವವನು ಹಾಯ್ದು ಹೊಕ್ಕರು... ಬೆಳಗು ಅಡಗೆ... ಹಲವು ಯೋಜನವ ನಡೆದರು... ಗಂಗೆಯನು ದಾಟಿದರು.

ಪಾಂಡವರು : ರಾಯನ ಮಾಟದಲಿ ಹಲು ಮುರಿದುದೇ... ನಮ್ಮಾಟಕೆ ಇದು ಹಿರಿದಲ್ಲಲಾ.

(ಎನುತ ಐವರು ಅಡಿಗಡಿಗೆ ಕೋಟಲೆಯ ಕೊಲ್ಲಣಿಗೆಯಲಿ ಮೈನೋಟಕೆ ಅಲಸದೆ... ಬಿಸಿಲಲಿ ಇವರು ಮಹಾಟವಿಯ ಮಧ್ಯವನು ಹೊಕ್ಕರು... ಕೇಳು ಜನಮೇಜಯ ಧರಿತ್ರೀಪಾಲ, ಯಮನಂದನನ... ಪಾರ್ಥನ ಕಾಲೊಡೆದು ಬಸಿವ ಅರುಣಜಲದಲಿ ಬಟ್ಟೆ ಕೆಸರಾಯ್ತು... ಮೇಲೆ ಯಮಳರ ಕುಂತಿಯರನು ಏವೇಳುವೆನು.)

ನಕುಲ/ಸಹದೇವ/ಕುಂತಿ : ಬೇಗದಲಿ ಕುರು ಭೂಪಾಲ ಹಿಡಿಯಲಿ... ಕೊಲಲಿ.

(ಎನುತ ಅಡವಿಯಲಿ ಕುಳ್ಳಿರ್ದರು .)

ಕುಂತಿ : ಉರಿಯ ಮನೆಯಲಿ ಸಾಯಲೀಯದೆ... ಸೆರಗ ಹಿಡಿದು ಎಳತಂದು ಕೊರಳನು ಕೊಯ್ದನು... ಅಕಟಾ, ಭೀಮನೇ ಹಗೆ.

(ಎಂದಳಾ ಕುಂತಿ.)

ನಕುಲ/ಸಹದೇವ : ಅರಸ ಹಿಡಿಯಲಿ... ದಾನವರು ನಿಂದಿರಿಕೆಯಲಿ ನುಂಗಲಿ... ಧರೆಯೊಳು ಆವು ಕೃತಾರ್ಥರು.

(ಎಂದು ಮಾದ್ರೀಕುಮಾರಕರು ಒದರಿದರು.)

ಭೀಮ : ಹೋ... ಹೋ... ಸಾಕು ಸಾಕು... ಆನಿರಲು ಹೆಕ್ಕಳವೇಕೆ.

(ಎನುತ ಭೀಮನು ಒಡೆಹಾಯ್ದು ಒದೆದು... ಕಲು ಮರನ ನೂಕಿ... ಹೆಗಲೆರಡರಲಿ ಕುಂತಿಯ ಧರ್ಮನಂದನನ ಹೊತ್ತನು... ಎಡದಲಿ ಆ ಕಿರೀಟಿಯನು... ಬಲದ ಬದಿಯೊಳಗೆ ಆ ಮಾದ್ರೀ ಕುಮಾರರ ಔಕಿ ನಡೆದನು... ಈ ಪರಿ ಹೇರಡವಿಯಲಿ ಹಲವು ಯೋಜನದಿಂದ ಬಂದನು... ಬಳಲಿದೆನು ಎಂದನೇ... ನೀರಡಿಸಿದನೆ... ಮೇಣ್... ನಿದ್ರೆಗೆ ಎಳಸಿದನೆ... ತಂದು ಕಾನನ ಮಧ್ಯದಲಿ ತರುವೃಂದದ ಅಡಿಯೊಳಗೆ ಇಳುಹಿ... ಬಳಿಕ ಅರವಿಂದದ ಎಲೆಯಲಿ ನೀರ ತಂದು... ಮಹೀಶರಿಗೆ ಎರೆದನು... ತಳಿರ ತರಿದು ಒಟ್ಟಿದನು... ತನು ಬಳಲಿಕೆಯ ಭಾರಣೆಯ ಕಡು ಜೋಡಿಸಿದ ಝೋಂಪಿನಲಿ... ತರುವಿನ ನೆಳಲೊಳಗೆ ವಿಶ್ರಮಿಸಿದರು... ಝಳಕೆ ಕಂದಿದ ಮೈಯ... ಬಾಡಿದ ಲಲಿತ ವದನದ... ಮಾಸಿ ಕೆದರಿದ ತಲೆಯೊಳಿರೆ... ತನ್ನೈವರನು ಕಂಡು ಭೀಮ ಅಳಲಿದನು.)

ಭೀಮ : ತಾಯೆ, ನೀ ದಿಟ ನಾಗ ನಗರಿಯ ರಾಯನ ಅರಸಿಯೆ... ನಿನ್ನ ಮಕ್ಕಳು ರಾಯರ ಎದೆದಲ್ಲಣರೆ... ಭಾರಿಯ ಬಾಹು ವಿಕ್ರಮರೆ... ಈ ಅವಸ್ಥೆಗೆ ಸೋಮವಂಶದ ರಾಯತನವು ಎಂತಹುದು... ಹೇಳೌ ತಾಯೆ ಹೇಳು... ಎನ್ನಾಣೆ ಹೇಳು.

(ಎಂದು ಭೀಮ ಅಳಲಿದನು... ಜನನಿಯ ಅಂಘ್ರಿಯನು

ಒತ್ತಿ... ಯಮನಂದನನ ಚರಣವ ಮುರಿದು... ಬಳಿಕ ಅರ್ಜುನನ ಯಮಳರ ಪದವನು ಎಚ್ಚರದಂತೆ ಹಿಡಿಕಿಸುತ... ಅನಿಬರ ಇರವನು ನೋಡಿ... ಪೂರ್ವವ ನೆನೆದು ಬಿರಿಬಿರಿದು ಅಳುತ... ಘನ ಕಾನನದ ಮಧ್ಯದಲಿ ಈತನಿದ್ದನು ಹಿರಿದು ಚಿಂತಿಸುತ... ಬಲು ನಿದ್ರೆ ಔಕುವುದು... ಕಣ್ಣೆವೆಗಳಲಿ ನಿದ್ರೆಯ ನೂಕುವನು... ನಸು ತೂಕಡಿಕೆ ತೋರಿದೊಡೆ ಕೈಯೊಡನೆ ಸೋಕುವುದು... ಮೈಗೆದರುವನು... ಮೈಮರವೆ ಮರವೆಯನು ಓಕರಿಸುವುದು... ಬಳಿಕ ಕಲಿಭೀಮ ಚಿತ್ತವೃತ್ತಿ ನಿರಾಕುಲ ಅಂತಃಕರಣನಾದನು.)

ಭೀಮ : ಎನ್ನ ಮರವೆಯಲಿ ವ್ಯಾಳ..ಗಜ..ಭೂದಾರ..ವೃಕ.. ಶಾರ್ದೂಲ... ಸಿಂಹಾದಿಗಳ ಭಯವು... ಆ ಕೀಳ ದೈತ್ಯ ಪ್ರಕರ ಭಯವಹುದು.

(ಧರಣಿಪತಿ ಕೇಳು, ವಿಶಾಲ ಮತಿಯು ನಿದ್ರಾವ್ಯಾಳ ವಿಷವನು ಮೊಗೆದು ಸೂಸಿ ಅವಧಾನದಲಿ ಐವರನು ಕಾದಿರ್ದನು... ಅದನು ಇನ್ನು ಹೇಳಲೇನು... ಇವರಿಗೆ ಒಂದು ಮಾರಿಯ ಮುರಿವನು... ತತ್ ವನಾಂತರದ ಅರಸು ದೈತ್ಯ ಹಿಡಿಂಬನೆಂಬವನು... ಅತುಲ ಭುಜಬಲನು.)

ಹಿಡಿಂಬ : (ತನ್ನಲ್ಲಿಯೇ)

ಮುರಿಮುರಿದು ಮೇಗಾಳಿಯಲಿ ಮೂಗರಳಿ ಮಾನವ ಗಂಧವಿದು ಗೋಚರಿಸಿತು... ಎತ್ತಣದೋ ಮಹಾದೇವ.

(ಎನುತ ಬೆರಗಾದ... ತನ್ನ ತಂಗಿ ಹಿಡಿಂಬೆಯನ್ನು ಕರೆದು...)

ತಾಯೆ, ಬಾರೌ ತಂಗಿ... ಗಂಧದ ವಾಯುವಿದೆ ಹೊಣೆಗಾರನಾಗಿ ಮನುಜ ಮಾಂಸದಲಿ ನವಾಯ ಭೋಜನವಿಂದು ದೊರಕಿತು... ಸಾಯಲು ಅವದಿರ ಬಡಿದು ತಾ... ತಮಗೆ ಆಯವಿದು ಕೃತಪುಣ್ಯಫಲವು.

(ಎನೆ...)

ಹಿಡಂಬಿ : ಹಸಾದ

(ಎನುತ ಮಾಯಗಾತಿ ಹಿಡಿಂಬಿ ಗಮಿಸಿದಳು... ಅವಳು ಅತಿ ರೌದ್ರರೂಪಿನೊಳು ಬಂದಳು... ದೂರದಲಿ ಹರಿ ನಂದನನ ಸುಳಿದಲೆಯ ಕೆಮ್ಮೀಸೆಗಳ... ಕರ್ಕಶದ ಕೆಂದಳದ ಕೇಸರಿಯ ಕಂಗಳ... ಕುಂದ ರದನ ಛವಿಯಲಿರೆ ಕಂಡಳು... ಅಂದು ಆ ಖಳನ ಅನುಜೆ ಸೋತಳು... ಭೀಮಸೇನಂಗೆ ಮನಸಂದಳು.)

ಹಿಡಿಂಬಿ : (ತನ್ನಲ್ಲಿಯೇ)

ಇವನ ರಮಣನ ಮಾಡಿಕೊಂಡು ವಿಪಿನಾಂತರಕೆ ಓಡುವೆನು... ಅವನು ಮುನಿದು... ಮರದಡಿಯಲ್ಲಿ ಮಲಗಿದರ... ಇವದಿರು ಐವರ ತಿನಲಿ... ಇವನು ತನ್ನಯ ರೌದ್ರಮಯ ರೂಪವನು ಕಂಡರೆ ಹೆದರುವನಲಾ... ಯುವತಿ ಅಹೆನು.

(ಎಂದು ಅಸುರೆ ದಿವ್ಯರೂಪಿನಲಿ ಸುಳಿದಳು... ಹೊಳೆವ ಕಂಗಳ ಕಾಂತಿ ಮರಗತ್ತಲೆಯ ಮೊತ್ತವ ಬಿಗಿಯೆ... ಕುಚದ ಭಾರಕೆ ನಡು ಬಳುಕೆ ... ಬಿಡದೆ ಒಲೆದು ಮೇಲುದು ತಳಿಯೆ... ಸುಳಿಗುರುಳು ಒಲೆಯಲು... ಮೈ ಪರಿಮಳಕೆ ತೂಳುವ ತುಂಬಿಗಳ ತನುಲತೆಯ ಚೆಲುವಿಕೆಯ ಆ ಲಲನೆ ಕಲಿಭೀಮನ ಇದಿರಿನಲಿ ಸುಳಿದಳು... ಭೀಮ ನೋಡನು... ನುಡಿಸನು... ತಾಮರಸಮುಖಿ ಒಯ್ಯನೆ ಹೊದ್ದಿದಳು.)

ಹಿಡಿಂಬಿ : ನಿಸ್ಸೀಮನ್ನೈ... ನೀನಾರು... ಮಲಗಿದ ಮರ್ತ್ಯರು ಇವರಾರು... ಈ ಮಹಾರಣ್ಯದಲಿ ಕೋಮಲರಿಗೆ ಬರವಿದು ಕಾಮಿತವೆ.

(ಎನೆ... ನಿಷ್ಕಾಮ ಮನದಲಿ ಸತಿಯ ನುಡಿಸಿದನು.)

ಭೀಮ : ಆರು ನೀನು?

ಹಿಡಿಂಬಿ : ಈ ವನ ಹಿಡಿಂಬನದು... ತಾನು ಆ ಹಿಡಿಂಬಕನ ಅನುಜೆ ಹಿಡಿಂಬಿ... ಈ ಕಾನನವಿದು ಎಮ್ಮಾಶ್ರಮವು... ದಿವಿಜ

ಮನುಜರಿಗೆ ಅಗಮ್ಯವು... ನಿನಗೆ ಕಾಮಿಸಿ ಬಂದೆನು... ಅಣ್ಣನು ಮುನಿದೊಡೆ ಅವದಿರ ತಿನಲಿ... ನೀನು ಏಳು... ಎನಗೆ ವಲ್ಲಭನಾಗು ಹಿಮಾಚಲಕೆ ಕೊಂಡೊಯ್ವೆನು.

ಭೀಮ : ನಿನ್ನನು ಒಲ್ಲೆನು... ಮುನಿದೆಯಾದಡೆ ನಿನ್ನ ದೈತ್ಯನ ಕೊಂಡು ಬಾ ಹೋಗು... ನೀನು ಎನ್ನ ಬಲುಹನು ನೋಡು.

(ಎನಲು... ಅಸುರೆ ವಿನಯದಲಿ...)

ಹಿಡಿಂಬಿ : ಮುನ್ನಲೇ ಮನುಮಥನ ಶರದಲಿ ಖಿನ್ನೆಯಾಗಿಹೆ... ಮರೆಯ ಹೊಕ್ಕೆನು... ತನ್ನನು ಈ ಪರಿ ಮುರಿದು ನುಡಿವರೆ.

(ಎಂದಳು ಇಂದುಮುಖಿ... ಅನುಜೆ ತಳುವಿದಳು ಎಂದು ರೋಷಸ್ತನಿತ ಗದ್ಗದ ಕಂಠನು ಮಹೀಮಂಡಲವನು ಒದೆದು ಎದ್ದನು... ಉಗ್ರ ಅಂಬಕನ ಡೊಂಬಿನಲಿ ಅನಿಲಸುತನು ಇದಿರೆದ್ದನು.)

ಭೀಮ : ದನುಜೆ ಈತನೆ ನಿನ್ನವನು... ಆಯ್ತು ತಪ್ಪೇನು.
(ಎನುತೆ ಹಳಚಿದೊಡೆ... ಆ ಹಿಡಿಂಬಕ ಜಡಿದು ಬೊಬ್ಬಿರಿದ.)

ಭೀಮ : ಒರಲಬೇಡವೊ ಕುನ್ನಿ... ಎಲವೊ, ಮೆಲ್ಲನೆ ತರುಬಿ ಕಾದುವುದು... ಮೈಮರೆದು ಒರಗಿದವರು ಏಳ್ವರು ಕಣಾ... ಸತ್ತಂತೆ ಸಾರು.

(ಎನುತ ಆ ಭೀಮ ತರುಬಿ ಹಿಡಿದು ಬೆನ್ನಿನೊಳು ಎರಗಿದನು... ಹೆಮ್ಮರಕೆ ಹಾಯಿದು ಮುರಿದು ಹೊಯ್ದು ಹಿಡಿಂಬ ಅನಿಲ ನಂದನನ ಕೊಡಹಿದನು... ಎದ್ದು ತಿವಿದನು... ಈತನ ಮುಷ್ಟಿ ಖಳನ ಬದಿಯೊಳಗೆ ಅದ್ದುದು... ಒಡನೆ ಎದ್ದು ನಿಮಿಷಕೆ ಸಂತವಿಸಿ... ಮುರಿದು ಹೆಮ್ಮರನ ಕೊಂಬಿನಲಿ... **"ಗೆದ್ದೆ... ಇದ ಕೊಳ್"** ಎನುತ ಖಳನು ಉಬ್ಬೆದ್ದು ಹೊಯ್ದರೆ... ಕಲಿ ಹಿಡಿಂಬಕನ ಮರ ಸಹಿತ ಹಿಡಿದು ಉದ್ದಿ ನೆಲದೊಳಗೆ ಒರಸಿ ಕೊಂದನು... ಕಳಕಳದೊಳು ಇವರು ಎದ್ದು...)

ಧರ್ಮರಾಯ : ಇವನು ಅತಿಬಳ... ಮಹಾದೇವ... ಎಮ್ಮನು ಎಬ್ಬಿಸಿ ಬಳಿಕ ಕಾದದೆ... ತಮ್ಮ ಕೆಡಿಸಲು ಕಾಕ ಬಳಸಿದೆಲ... ಬಳಲಿದ ಎಮ್ಮನು ಹೊತ್ತು ತೊಳಲಿದ ಬಳಲಿಕೆಯಲಿ ಈ ಕೇಡು ಲೇಸಾಯ್ತು... ಉಳಿದೆ ಪುಣ್ಯವಿದು.

(ಎಂದರಾ ಯಮನಂದನಾದಿಗಳು... ಖಳ ಮಡಿಯಲು... ಅವನ ಅನುಜೆ ಭೀಮನನು ಒಲಿಸಲು ಅರಿಯದೆ... ಕುಂತಿಗೆ ತನ್ನ ಪೂರ್ವಾಪರದ ಸಂಗತಿಯ ಎಲ್ಲವ ತಿಳುಹಿ ನುಡಿದಳು... ಅವಳು ಹಲವು ಪರಿಯಲಿ ಇವರನು ಅಂಡಲೆದು ಭೀಮಗೆ ಹೇಳಿಸಿದಳು... ಆ ಫಲುಗುಣನ ಕೈಯಿಂದ... ಧರ್ಮಜನಿಂದ ನುಡಿಸಿದಳು... ಆರು ನುಡಿಯಲು...)

ಭೀಮ : ಸರ್ವಥಾ ಖಳನಾರಿಯನು ಕೈಕೊಳ್ಳೆನು.

(ಎಂದೇ ವೀರ ಬಲಿದನು... ಬಳಿಕ ವೇದವ್ಯಾಸ ಮುನಿ ಬಂದು ಸಾರನಯದಲಿ ತೋರಿ ತಿಳುಹಿ...)

ವ್ಯಾಸ : ಕುಮಾರ ಸಂಭವದ ಅವಧಿ.

(ಎಂದು ಮುನಿ... ಆ ನಾರಿಯನು ಭೀಮಸೇನಂಗೆ ಗಂಟಿಕ್ಕಿದನು... ಎಲ್ಲಿ ಉಪವನ... ವರ ಸರೋವರ... ಎಲ್ಲಿ ಕೇಳೀ ಶೈಲ ಹಿಮಗೃಹ... ಎಲ್ಲಿ ರಮ್ಯೋದ್ಯಾನ... ಎಲ್ಲಿ ವಿಹಾರ ವನಭೂಮಿ... ಅಲ್ಲಿಗಲ್ಲಿಗೆ ಹರಿದು ಮಾರುತಿ ವಲ್ಲಭೆಯ ರಮಿಸಿದನು... ಚೌಪಟ ಮಲ್ಲ ಕಲಿ ಘಟೋತ್ಕಚನು ಆ ಹಿಡಿಂಬಿಯಲಿ ಜನಿಸಿದ... ನುಡಿದ ಸಮಯಕೆ ತನ್ನ ರಮಣಿಯನು ಒಡಬಡಿಸಿ... ಹೈಡಿಂಬ ರಾಜ್ಯದ ಒಡೆತನವ ನೆರೆ ಮಾಡಿ ಆ ಘಟೋತ್ಕಚನ ನಿಲಿಸಿದನು... ನಡೆದು ಬಂದರು... ಶಾಲಿಹೋತ್ರನ ನಡುವೆ ಕಂಡು ಉಪಚರಿಸಿಕೊಂಡರು... ಅನಿಬರು ವಿಪ್ರವೇಷದಲಿ ಪಡುವಲ ಅಭಿಮುಖರಾದರು.)

❍

24. ಬಕಾಸುರನ ಕೊಲೆ

(ಆದಿಪರ್ವ : ಹತ್ತನೆಯ ಸಂಧಿ : ಪದ್ಯ 1 ರಿಂದ 40)

ಪಾತ್ರಗಳು

ಕುಂತಿ : ಪಾಂಡವರ ತಾಯಿ.

ಬ್ರಾಹ್ಮಣ : ಏಕಚಕ್ರನಗರದ ನಿವಾಸಿ.

ಭೀಮ : ಪಾಂಡುರಾಜ ಮತ್ತು ಕುಂತಿಯ ಮಗ

ಬಕಾಸುರ : ಏಕಚಕ್ರನಗರದ ಬಳಿಯ ಕಾಡಿನಲ್ಲಿದ್ದ ರಾಕ್ಷಸ ಬುಡಕಟ್ಟಿನ ವ್ಯಕ್ತಿ.

ಪುರಜನ : ಏಕಚಕ್ರನಗರದ ನಿವಾಸಿಗಳು.

ಬಕಾಸುರನ ಕೊಲೆ

ಕೇಳು ಜನಮೇಜಯ ಮಹೀಪತಿ, ಶಾಲಿಹೋತ್ರ ಆಶ್ರಮವನು ಅನಿಬರು ಬೀಳುಕೊಂಡರು... ಮತ್ತೆ ಬಾದರಾಯಣನ ಕಂಡರು... ನಿಮಗೆ ಏಕಚಕ್ರ ವಿಶಾಲಪುರದೊಳಗೆ ಆರು ತಿಂಗಳು ಕಾಲ ಸವೆಯಲಿ... ಬಳಿಕ ಬಳಸುವಿರಿ ಉತ್ತರೋತ್ತರವ ಎಂದು ಮುನಿ ತಿರುಗಿದನು. ಕುಂತೀನಂದನರು ಸುಕ್ಷಾತ್ರ ತೇಜೋವೃಂದವನು ವಿಮಲ ಬ್ರಹ್ಮ ರಶ್ಮಿಯಲಿ ಅಂದವೇರಿದ ಗಡ್ಡ ದರ್ಭೆಗಳಿಂದ ನೆರಿಯುಡಿಗೆಗಳ ನಾಟಕದಿಂದ ಮುಸುಕಿದರು... ಅವನಿಪತಿ ಕೇಳು, ಮಟ್ಟಿಯ ಧಟ್ಟು ನೊಸಲಲಿ ದೇಶಿ ಪರಿ ಮೆರೆಯೆ... ಏಕಚಕ್ರವನು ಇವರು ಹೊಕ್ಕರು... ವಿಪ್ರನೊಬ್ಬನ ಭವನದಲಿ ಬೀಡಾರವನು ಮಾಡಿದರು... ಇವರು ವಿನಯದಲಿ ಯಾಚಕ ವಿಷಯದ ಆತಿಥ್ಯವನು ಕೈಕೊಂಡು... ಅಲ್ಲಿ ಕತಿಪಯ ದಿವಸವನು ನೂಕಿದರು.

ಭಿಕ್ಷಾ ವಿಹಿತ ವೃತ್ತಿಯಲಿ ತಂದ ಭಿಕ್ಷಾ ಅಶನವನು ಐವರು ನಂದನರು ತಾಯಿಗೆ ನಿವೇದಿಸಲು... ಇಂದುಮುಖಿ ಸಾನಂದದಲಿ ಭಾಗದ್ವಯವ ಮಾಡಿ... ಒಂದು ಭಾಗ ವೃಕೋದರರಂಗೆ... ಉಳಿದೊಂದು ಭಾಗವ ತಾನು ನಾಲ್ವರು ನಂದನರು ವಿನಿಯೋಗಿಸುವರು ಅವನೀಶ ಕೇಳೆಂದ...

ಸಿರಿಯ ಹೇಳ್ವರೆ ಹಸ್ತಿನಾಪುರದ ಅರಸುಗಳ ಸಂತಾನ... ಶೌರ್‍ಯದ ಪರಿಯ ನೋಳ್ವರೆ ಶಕ್ರ ಸೂರ್ಯರ ತೇಜಕೆ ಉರೆ ಮಿಗಿಲು... ತಿರಿದ ಕೂಳನು ತಾಯಿ ಹಸುಗೆಯಲಿ ಎರಡು ಭಾಗವ ಮಾಡಿ ಮಕ್ಕಳ ಹೊರೆದಳು... ಇನ್ನುಳಿದವರ ಪಾಡೇನು ಅರಸ ಕೇಳೆಂದ. ಉದಯವಾಗದ ಮುನ್ನ ಸುಬ್ರಾಹ್ಮ್ಯದ

ಮುಹೂರ್ತದಲಿ ಎದ್ದು... ಜನನಿಯ ಪದಯುಗಕ್ಕೆ ಅಭಿನಮಿಸಿ... ಸಂಧ್ಯಾ ಮತಕೆ ನಡೆತಂದು... ವಿದಿತ ಸಂಧ್ಯೋಪಾಸ್ಥೆ... ಜಪ ನಿಯಮದ... ಪುರಾಣ ಶ್ರವಣ ಮಧ್ಯಾಹ್ನದಲಿ ಭಿಕ್ಷಾಟನಗಳು ಇವರಿಗೆ ನಿತ್ಯ ವಿಧಿಯೆಂದ... ಭೋಜನೋತ್ತರ ವೇಳೆಯಲಿ ನೃಪರಾಜ ವಾರ್ತಾಕಥನದಿಂದ ಮಹಾಜನಂಗಳೊಳು ನಿಜ ವಿನೋದದಲಿ ಆಡುತಿರ್ದರು... ಆ ರಾಜತನವನು ಮರೆದರು... ದ್ವಿಜರಾಜ ತೇಜದಿ ಮೆರೆದರು... ಆ ನರರಾಜ ರಾಜರ ನೀತಿಯಿದು ಭೂಪಾಲ ಕೇಳೆಂದ.

ಇರಲಿರಲು ಮಾಸಾಂತರದಲಿ ಸಾಯಂಕಾಲ ಸಮಯದಲಿ ಆ ನೆರೆಮನೆಯ ಶೋಕಾರ್ತರವದ ಅಬ್ಬರವ ಕೇಳಿದು ಕುಂತಿ ಭರದಿನೈತಂದು...

ಕುಂತಿ : ಅಕಟ... ಭೂಸುರ ವರ, ನಿರೋಧವು ಇದೇನು... ಆಕಸ್ಮಿಕವದು ದುಃಖೋತ್ಕರುಷವು.

(ಎಂದಳು ಕುಂತಿ ವಿನಯದಲಿ...)

ಬ್ರಾಹ್ಮಣ : ನಾಳೆ ವೈವಾಹೋತ್ಸವದ ದೆಖ್ಖಾಳ... ಇದು ಮೊದಲು... ಈ ವಸಂತದ ಬಾಲಿಕೆಯರ ಓಕುಳಿಯ ಮಳೆಯಲಿ ಸಿಡಿಲು ಸುಳಿದುದು.

ಕುಂತಿ : ಹೇಳಿರೇ... ನಿಮಗಾದ ಅವಸ್ಥೆಯ ಕೇಳಲಾಗದೆ... .

ಬ್ರಾಹ್ಮಣ : ಇದ ಕೇಳಿ ಫಲವೇನವ್ವ

(ಎಂದನು ಸುಯ್ದು ದುಗುಡದಲಿ...)

ಕುಂತಿ : ತನ್ನ ಅನಿಷ್ಟವನು ಆಳಿಗೊಳ್ಳದ ಸುಜನ ನಿಕರಕೆ ಹೇಳ ಬೇಹುದು... ದೀನರಹ ವಿಪ್ರೇಂದ್ರರ ಉಪಹತಿಯ ಕೇಳಬೇಹುದು... ಹೇಳು ನೀನು ಎಲೆ ವಿಪ್ರ... ತಾನು ಇದ ಕೇಳಿ ದುಃಖಿತೆಯಾಗಲಾಗದೆ ಹೇಳ್... **'ನ ದುಃಖಂ ಪಂಚಭಿಸ್ಸಹ...'** ಎನ್ನದೇ ವಚನ.

ಬ್ರಾಹ್ಮಣ : ತಾಯೆ ಕೇಳು, ಈ ವಿಪ್ರಪುರದೊಳಗೆ ಎನಗೆ ಆಯವುಂಟು ಎಂದು ರಕ್ಕಸ ನಾಯಿ ಊರ ಹೊರಗಣ ಶೈಲಶಿಖರದಲಿ ನೆಲಸಿಹನು... ಮನೆ ಮನೆಗೆ ಒಬ್ಬನ ಆಯಿದು... ಮೇಲಾಯಿ ಮಹಿಷದ್ವಯ ಸಹಿತ ನಿರ್ದಾಯದಲಿ ಹನ್ನೆರಡು ಕಂಡುಗದ

ಅಕ್ಕಿಯೋಗರವ ಇನಿತುವನು... ಮನೆಮನೆಗೆ ಬಾರಿಯ ದಿನಕೆ ತೆತ್ತಡೆ ತುಪ್ಪನು... ಇಲ್ಲದ ದಿನಕೆ ಊರನು ನುಂಗುವನು... ತಾಯೆ, ಈ ಪರಿ ಹಲವು ಕಾಲದಲಿ... ಎನಗೆ ನಾಳಿನ ದಿನದ ಬಾರಿ ಎನಗೆ ಬಂದುದು... ಇದಕ್ಕೆ ತನ್ನಯ ತನುಜ ತಾನು ಉಳಿದಂತೆ ತನಗೆ ಮಾನಿಸರಿಲ್ಲ... ಮಗನನು ಈವೆನೆ ಪಾರಲೌಕಿಕವು ಅಗಡಹುದು... ಐಹಿಕದಲ್ಲಿ ಅಪಖ್ಯಾತಿ ತನ್ನನು ತಗೆಹುದು... ಬಳಿಕ ಈ ಸಂತತಿಚ್ಛೇದ... ಬಗೆಯದೆ ಎನ್ನೊಡಲ ಅಸುರ ಘಾತಿಗೆ ಮಿಗೆ ವಿಭಾಡಿಸಿ ಕೊಡುವೆನು.

(ಎಂದೆನೆ... ಕುಂತೀದೇವಿ ನಗುತ ನುಡಿದಳು ವಿಪ್ರ ಕೇಳೆಂದು)

ಕುಂತಿ : ಐಸಲೇ... ನಿಮಗಾದ ಗಸಣಿಯಿದು ಏಸರ ಆಪತ್ತು... ಅಂಜಬೇಡ, ಮಹಾಸುರನ ಬಾಣಸದ ಬೀಯಕೆ ಎಮಗೆ ರಪಣವುಂಟು... ಏಸು ಕಂಡುಗದ ಅಕ್ಕಿಯೋಗರವೈಸ ನೀನು ಅಳವಡಿಸು... ಮೇಲುಂಟು ಏಸು ಸಾಧನವು ಅನಿತುವನು ತೆಗೆಸು...

ನಿಮ್ಮೂರೊಳಗೆ ತಿರುಗಿ ಕೂಳನು ತಿರಿದು ಸಲಹುವೆನು... ಎನ್ನ ಮಕ್ಕಳು ಧರೆಯನು ಆಳುವ ಸತ್ತ್ವ ಸಹಸಿಗಳಿದ್ದು ಫಲವೇನು... ಹೊರೆಯಲು ಅರಿಯೆನು... ಹಿರಿಯನು ಎರಡೆಂಟರಿಯನು... ಅದರೊಳಗೆ ಒಬ್ಬನ ಉದರಕೆ ಕೂಳನು ನೆರಹಲಾರೆನು.

(ಎಂದಳು ಕುಂತಿ ನಸುನಗುತ.)

ಮಗನನು ಸಾಕಲಾರೆನು... ಆತನ ನಿಮ್ಮ ಅಸುರನ ಊಟಕೆ ನೂಕುವೆನು... ತನಗೆ ಉಳಿದವರು ಸಾಕು.

(ಎನಲು... ದ್ವಿಜನು ಅದಕೆ ಬೆರಗಾಗಿ)

ಬ್ರಾಹ್ಮಣ : ಮಗನನು ಸಾಕಲಾರದೆ ಉರಿಯಲಿ ನೂಕಿದವರುಂಟೇ... ಮಹಾಸತಿಯ ಆಕೆವಾಳತನಕ್ಕೆ ನಮಿಸಿದೆನು.

(ಎನುತ ಕೈಮುಗಿದ.)

ಕುಂತಿ : ಮರುಳಲಾ ಬ್ರಾಹ್ಮಣ... ತನ್ನ ನುಡಿ ವೃಥಾ ವಿಸ್ತರಣ ವಾಕ್ಯವೆ...

ಬಂಡಿಯಲಿ ಸಂವರಿಸು... ಭಕ್ಷ್ಯವ ಅಡಸು... ಸೂಪ ದಂಶಕವ ತರಿಸು... ತುಪ್ಪದ ಕೊಡನನು ಹರವಿಗಳ ಪಾಲ್ಮೊಸರನು ಒದವಿಸು.

ಬ್ರಾಹ್ಮಣ : ತಾಯೆ ಬೇಡ...

(ಎನುತ ಕುಂತಿಗೆ ಕೈಯ್ಯ ಮುಗಿದನು.)

ಭಾವಿಸಲು ವಸ್ತೂತ್ತಕರದೊಳಗೆ ಎರವು ಮುಯಿ ಮುಟ್ಟುಂಟು... ಮಾರಿಯ ನಾಲಿಗೆಯ ಸವಿಗೆ ಮಕ್ಕಳ ನೆರವ ಕೊಟ್ಟವರುಂಟೆ... ನೆರವಿ ನಗದೇ... ಕೇಳು, ನಮ್ಮನು ಇಹಪರ ಎರಡರಲಿ ಕಷ್ಟವು ಅಹುದು... ತಾಯಿ ನೀ ಗರುವೆ ಅಹುದೌ... ದಿಟ ಮನುಜೆಯಲ್ಲ.

ಕುಂತಿ : ಲೋಗರ ಹಾನಿಯನು ದಧೀಚಿ... ಏನನು ಇತ್ತು ಕಾಯಿದನು... ಶಿಬಿ ತಾನು ಏನನು ಇತ್ತನು.. ಜೀಮೂತ ವಾಹನನು... ಏನ ಮಾಡಿದನೆಂದು ನೀನು ಕೇಳಿದ್ಯೆ... ಇದನು ಏನುವನು ಕೇಳ್ದರಿಯಲಾ... ಮತ್ತೂನುವನು ನಿನ್ನ ಅವಸರಕೆ ಕೊಳ್ಳು... ಭೂಸುರ ಕೇಳು, ಆವನ ಅರ್ಥ ಪರಾರ್ಥದಲಿ ಸಂಜೀವನಿಯನು ಐದಿತು... ಆವನ ಅಸು ಪರಾರ್ಥದೊಳು ನಿರ್ವಾಣಮಾದುದು... ಇವರಿಬ್ಬರೇ ಲೋಕ ಮೂರರಲಿ... ಆ ವಿರಿಂಚಿ ಪುರಂದರಾದಿಯ ದೇವತತಿಗೆ ಸಂಭಾವನೀಯರು.

(ಎಂದಳು ಆ ಕುಂತಿ... ಭೂಸುರನ ಚಿತ್ತವ ಬಲುಹಿನಲಿ ತಿಳುಹಿ ಮನೆಗೆ ಬಂದಳು... ಭೀಮನ ಕೆಲಕೆ ಕರೆದಳು... ಹೇರಾಳದ ಔತಣವ ಹೇಳಿದಳು... ಭೀಮ ಮುದದಲಿ ಉಲಿದು ಬಾಹು ಅಪ್ಪಳಿಸಿದನು... ಯಮನಂದನಾದಿಗಳು ದೈತ್ಯಜಯ ಸಂಶಯದ ಭೇದದಲಿ ಅಳಲಿ ನುಡಿದರು.)

ಭೀಮ : ನೀವು ಮರುಳುಗಳು.

(ಎಂದು ಕಲಿಭೀಮನು ಅವರ ಚಪ್ಪರಿಸಿದನು... ಆ ನಡುವಿರುಳು ವಿಪ್ರ ಭವನದ ಪಾಕಮಯ ರಭಸ ತೊಡಗಿತು.)

ಭೀಮ : ತಾಯಿ ಎನ್ನನು ಹೊರೆದಳು... ಪಾರಣೆಯ ಹೊತ್ತಿನೊಳು

ಕುಂತಿಯ ಹರಸುವೆನು. ನಾಳಿನೊಳು ಆನು ಅರಸು.

(ಎನುತ ಕಲಿಭೀಮ ಹಿಗ್ಗಿದನು... ಪರಿಪರಿಯ ಬಹು ಭಕ್ಷ್ಯ ಪಾಕದ ಪರಿಮಳದ ಶಾಕಾದಿಗಳ ವೊಗ್ಗರಣೆಗಳ ಸೌರಭಕೆ ಪವನಜನ ನಿದ್ರೆ ತಿಳಿದುದು... ಪೂರ್ವ ಶೈಲದ ಶಿರದ ಬಳಿಯಲಿ ತರಣಿ ಸುಳಿದನು... ಭೀಮ ಕುಂತಿಯ ಕರೆದು ಆ ಮಹೀಸುರ ಗೃಹಕೆ ವಹಿಲದಲಿ ಕಳುಹಿದನು.)

ಬ್ರಾಹ್ಮಣ : ಏನು ಬಂದಿರಿ ತಾಯೆ... ಚಾಪಳವು ಏನು?

ಕುಂತಿ : ಭಾನು ಉದಿಸಿದನು... ಏನು ಜಂಜಡ ಬೇಡ... ತೆಗೆ ಬಂಡಿಯನು ಹೂಡು... ಭಕ್ಷ್ಯವ ಕುನಿಕಿಲಲಿ ಹಿಡಿಸು.

(ಎನಲು... ಸೂನು ಸಹಿತ ಘನ ಸುಮ್ಮಾನದಲಿ ಸಾಧನ ಸಮಗ್ರವ ಭಾರಿಯ ಬಂಡಿ ಜವ ಜಡಿಯೆ ಅಡಕಿದನು... ನಳನಳಿಪ ಬಹುವಿಧದ ಭಕ್ಷ್ಯಾವಳಿಯ ಹೆಡೆಗೆಗಳ ಓರಣಿಸಿ ಮಂಡಳಿಸಿ ಕೂಡಿದ ಹಾಲು ತುಪ್ಪದ ಹಲವು ಹರವಿಗಳ ಬಳಸಿ ಮುಚ್ಚಿದ ವಿವಿಧ ಶಾಕಾವಳಿಯ ಬೋನದ ಬಿಗಿದ ಕುನಿಕಿಲ ಕಳವೆಯಕ್ಕಿಯ ಕೂಳ ರಾಶಿಯ ಬಂಡಿ ಜೋಡಿಸಿತು... ಮರಳಿ ಬಂದಳು ಕುಂತಿ... ಭೀಮನ ಕರೆದಳು.)

ಕುಂತಿ : ಏಳೈ ಪಾರಣೆಗೆ ಕಾತರಿಸದಿರು... ಖಳನೊಡನೆ ಸತ್ವದ ಅನುವರಿದು ಸದೆವುದು... ಬರವ ಬರಿದೇ ಬೀಯ ಮಾಡದಿರು... ಉರುವಣೆಯನು ಅರಿದು ಆನುವುದು... ದೈತ್ಯನನು ಸಂಹರಿಸು.

(ಎಂದು ತಾಯ್ ನಂದನನ ಹರಸಿದಳು... ಬೆರಳ ದರ್ಭೆಯ ಹರಿದು ಧೌತಾಂಬರವನು ಬಿಗಿದು ಉಟ್ಟನು... ಕುಂತಿಯ ಚರಣ ರಜವನು ಕೊಂಡು... ಧರ್ಮಜನ ಅಂಘ್ರಿಗೆ ಅಭಿನಮಿಸಿ... ಹರುಷ ಮಿಗೆ ಹರಿತಂದು ಬಂಡಿಯ ಶಿರದ ಹಲಗೆಯನು ಅಡರಿದನು... ಬಲು ಹುರಿಯ ಹಗ್ಗವ ಹಿಡಿದು ಹೂಡಿದ ಎತ್ತುಗಳ ಜಡಿದನು.)

ಪುರಜನ : ಪುರದೊಳಗೆ ಭಿಕ್ಷಾನ್ನದಿಂದ ಐವರು ಮಹಾಪಂಡಿತರು

ನಿರ್ಧನ ಪುರುಷರು... ಅವರೊಳಗೆ ಒಬ್ಬನನು ನಮ್ಮೂರ ದಾನವನ ಪರಿವಿಡಿಯ ಭೋಜನಕೆ ತತ್ ಭೂಸುರನ ತಾಯಿ ಕೊಟ್ಟಳು ಗಡ... ಏನಚ್ಚರಿ.

(ಎನುತ ನೋಟಕರ ನೆರವಿ ಪವನಜನ ಮುತ್ತಿತು... ಪೌರಜನವು ಐತರಲು... ಬಂಡಿಯನು ಊರ ಹೊರವಂಡಿಸಿದನು.)

ಭೀಮ : ಎಲ್ಲರು ದೂರದಲ್ಲಿರಿ... ದೈತ್ಯನಲಿ ಸಾವವನೆ ತಾ ಸಾಕು... ಸಾರಿ ನೀವು

(ಎಂದೆನುತ ರಣಧೀರ ಮಾರುತಿ ಹೂಡಿದ ಹೋರಿಗಳ ಹೊಯ್ದು ಅಬ್ಬರಿಸಿ ಅಸುರನ ಇದ್ದ ಎಡೆಗೆ ಮಿಕ್ಕು ಹರಿಸಿದನು... ಎಡೆಯಲೇ ಭಕ್ಷ್ಯಾದಿಗಳ ಬರಿ ಹೆಡೆಗೆ ಉಳಿದವು... ಕೂಳೊಳು ಅರ್ಧವ ಹೊಡೆದು... ಹಾಲು ತುಪ್ಪದ ಹರವಿಯ ಓಜೆಯಲಿ ಕುಡಿದು, ಪಕ್ಕಲೆ ನೀರನು ಒಯ್ಯನೆ ಸುರಿದನು... ನಡೆಸಿ ತಂದನು... ದನುಜನ ಕಂಡು...)

ಭೀಮ : ಎಲವೋ ಕುನ್ನಿ... ಕೂಳಿದೆ ತಿನ್ನು ಬಾರ...

(ಎನುತ ನುಡಿದನು... ಇವನ ಉದ್ದಂಡತನವ ಕಂಡು ಖಳ ಬೆರಗಾದನು.)

ಬಕಾಸುರ : ಅಚ್ಚರಿಯಲಾ... ತನ್ನೊಡನೆ ತೊಡಕುವರೆ ಹರಿ ಖಂಡ ಪರಶುಗಳು ಅಳುಕುವರು... ಬಂಡಿ ತುಂಬಿದ ಕೂಳನು ಇವನು ಇಂದು ಉಂಡು ಬದುಕಲಿ... ಇವ ಸಹಿತ ಊರ ಪಾರ್ವರ ಹಿಂಡುವೆನು.

(ಎನುತ ಅಮರಾರಿ ಹಲು ಮೊರೆದನು... ಮತ್ತೆ ಮಾರುತಿ ಶೇಷಾನ್ನದಲಿ ತುತ್ತುಗಳ ತೋರುತ ತೂಗುತ್ತ... ಅವನನು ಬೆರಳಲಿ ಏಡಿಸುತ... ಬಾಯೊಳು ಮೆತ್ತಿಕೊಂಡನು.)

ಬಕಾಸುರ : ಇತ್ತಲು ಎನ್ನಯ ಹಸಿವು ಹೆಚ್ಚಿದೆ... ತುತ್ತು ಒಳಗೆ ಹೋಗದು. ಇವನ ತೊಡಗಲದು ಎತ್ತಲು... ಅಕಟಾ ವಿಧಿ.

(ಎನುತ ಮುರಿದು ಅಮರಾರಿ ಎದ್ದನು... ಎರಡು ಕೈಯನು ಬಲಿದು ಮುಷ್ಟಿಯೊಳು ಖಳ ಬೆನ್ನನು ಎರಗಿದನು... ಇತ್ತಲು

ಭೀಮ ಬಲು ತುತ್ತುಗಳ ತೋಟಿಯಲಿ ಏನೆಂದು ಅರಿಯನು...
ಮರನ ಮುರಿದು ಎರಗಿದರೆ ಪುನರಪಿ ಮುರಿದು ನೋಡಿದು...)

ಭೀಮ : ಅರೆಗೆಲಸ ಪೂರೈಸಲು ಬಹೆನು ನಿಲ್ಲು.

(ಎಂದನು ನಗುತ ಕಲಿಭೀಮ... ಅರಸ ಕೇಳ್ಕೆ, ನಿಮ್ಮ ಭೀಮನ ಪರಿಯನು... ಈ ಪರಿ ಬಂಡಿ ತುಂಬಿದ ಸರಕನೆಲ್ಲವ ತನ್ನ ಜಠರದಲಿ ಸಂತವಿಟ್ಟನು... ವರ ಸಮಾಧಾನದಲಿ ಕೈದೊಳೆದು... ಉರವಣಿಪ ತೇಗಿನ ತರಂಗದ ಪರಬಲಾಂತಕನು ಎದ್ದು ನಿಂದನು ಸಿಂಹನಾದದಲಿ...)

ಭೀಮ : ಸಮಚಿತ್ತದಲಿ ಉಂಡೆವೈ... ಎಡೆಯಲಿ ನೀವ್ ಘಾಯಗಳನು ಕೊಂಡಿರೈ... ನಾವು ಸಹಿತ ಈ ಊರ ಹಾರುವರ ಹಿಂಡುವಿರಲೈ... ಹಲ ಕಾಲಕೆ ಉಂಡೆವೈ... ಖಂಡಪರಶುವಿನ ಆಣೆ... ಇಂದಿನಲಿ ಉಂಡದು ಊಟ ಕಣಾ... ನಿಧಾನವು...

(ಎನುತ ಭೀಮ ಮದವೇರಿದನು... ಖಾತಿಗೊಳ್ಳದೆ ಮುನ್ನ ಪವನಜನು ತನ್ನ ಹೊಯ್ಗುಳನು ಓತು ಕೊಟ್ಟನು... ಈತನು ಮುಳಿದು... ಬಳಿಕ ಆತನು ಇವನ ಏನ ಮಾಡುವನೊ... ಈತನು ಗಜರಿ ಎದ್ದನು... ಆತನು ಇದಿರಾದನು... ಬಳಿಕಿನೊಳು ಸುರಾರಿಯ ವಾತಜನ ಹೋರಟೆಗೆ ವಾಸುಕಿಯ ಕೊರಳು ಅಳುಕಿದುದು... ಒಬ್ಬರನು ಒಬ್ಬರು ಹಿಡಿದರು... ಉರದಲಿ ಹೊಡೆದು ಹಿಂಗಿದರು... ಉಲಿದು ಹೆಮ್ಮರನು ಉಡಿಯೆ ಹೊಯ್ದಾಡಿದರು... ತೋಳು ಬಲುಹಿನಲಿ ತಿವಿದರು... ಅವನು ಕಲಿ ಭೀಮನ ಕೊಡಹಿದನು... ಉಗ್ಗಡದ ಸತ್ವದಿ ಉಂಡ ಕೂಳಿನ ಕಡುಹ ತೋರ ಎಂದು ಒರಲಿ... ಅನಿಲ ನಂದನನ ತುಡುಕಿದನು... ಕಲಿಭೀಮನು ಸಿಕ್ಕಿದನು ಎನೆ ಕೈಯಿಕ್ಕಿ ಮೈಯನು ಕೊಟ್ಟನು... ಅಸುರನ ಹೊಕ್ಕು ತಿರುಗಿ ತಿವಿದನು... ಬದಿಯೆಲು ನುಗ್ಗು ನುಸಿಯಾಗೆ... ಬಿಕ್ಕುಳಿಯ ತಾಳಿಗೆಯ ಮೂಗಿನೊಳು ಒಕ್ಕು ರುಧಿರದ ಧಾರೆ ಬಿಗಿದು ಉರೆ ಡೊಕ್ಕರಿಸಲು... ಅಸುರನ ತನುವ ನಿಮಿಷದಲಿ ಅಸು ನೀಗಿತು... ಧನುಜನ ಕೊಂದು ಹೆಣನ ಬಂಡಿಯ ಹಿಂದೆ

ಬಂಧಿಸಿ ಪುರದ ಬಾಹೆಗೆ ತಂದು ಬಿಟ್ಟನು... ತನತನಗೆ ಜನಜಾಲ ಜೋಡಿಯಲಿ ಬಂದು ಹೆಣನ ಕಂಡುದು ನೆರದ ಪೌರಜನ.)

ಪುರಜನ : ಭೂಸುರರು ಇಂದು ಧನ್ಯರು... ವಿಪ್ರ ಜಾತಿಗೆ ಸಂದುದು ಇನ್ನು ಅಗ್ಗಳಿಕೆ... ಈ ಅಮಾನುಷ ಶಕ್ತಿಯು ಅಮರರ ರಾಯಗೆ ಅಳವಲ್ಲ... ವಿಪ್ರ ನಿಕಾಯಕೆ ಇದು ಸಾಮಾನ್ಯವೇ... ನಮ್ಮ ಅಗ್ರಹಾರದಲಿ ಇವರು ಕಾಯಿದವರು... ಪದ್ಮಜ ಸೋಮಧರ ನಾರಾಯಣರು ವಿಪುಲ ಶ್ರೇಯ ಕೊಡಲಿ.

(ಎಂದು ಭೂಸುರ ವ್ರಾತ ಹರಸಿತು.)

❍

25. ಛತ್ರವತಿ ನಗರದತ್ತ ಪಾಂಡವರು

(ಆದಿಪರ್ವ : ಹನ್ನೊಂದನೆಯ ಸಂಧಿ : ಪದ್ಯ 1 ರಿಂದ 22)

ಪಾತ್ರಗಳು

ಧರ್ಮರಾಯ : ಪಾಂಡುರಾಜ ಮತ್ತು ಕುಂತಿಯ ಮಗ.

ಬ್ರಾಹ್ಮಣ : ಪಾಂಡವರು ಏಕಚಕ್ರನಗರದಲ್ಲಿದ್ದಾಗ, ಅವರ ಮನೆಗೆ ಅತಿಥಿಯಾಗಿ ಬಂದವನು.

ಪಾಂಡವರು : ಧರ್ಮರಾಯ–ಭೀಮ–ಅರ್ಜುನ–ನಕುಲ–ಸಹದೇವ

ಛತ್ರವತಿ ನಗರದತ್ತ ಪಾಂಡವರು

ಅರಸ ಕೇಳೈ, ಕಲಿ ಬಕಾಸುರ ಮರಣ ಸಮನಂತರದೊಳು ಆ ಪುರವರದೊಳು ವಿಮಲ ವಿಪ್ರಸ್ತೋಮದ ಒಡಗೂಡಿ ಇರ್ದರು.

ಧರ್ಮರಾಯ : ನಮ್ಮ ಹಸ್ತಿನಪುರವ ಹೊರವಂಟಂದಿನಲಿ ವರುಷ ತುಂಬಿತು.

(ಎಂದು ಅರಸ ಧರ್ಮಸುತ ನಗುತ ಕುಂತೀದೇವಿಗೆ ಎಂದನು... ಆ ಸಮಯದಲಿ ಒಬ್ಬನು ಭೂಸುರನು ಬಂದನು... ಸಕುತೂಹಲನು ಬಹು ದೇಶ ಪರಿಯಟಣ ಪ್ರವಾಸ ಅಭ್ಯಾಸ ಶಿಕ್ಷೆಯಲಿ ಗ್ರಾಸ ಯಾಚಕನಾಗಿ... ತಮ್ಮ ನಿವಾಸದಲಿ ಸಲೆ ತುಷ್ಟನಾದ ಪರಾಶಿತ ಅಧ್ವಶ್ರಮನ ಅರಸ ವಿನಯದಲಿ ನುಡಿಸಿದನು.)

ಧರ್ಮರಾಯ : ಎತ್ತಣಿಂದಲಿ ಬರವು... ಬಳಿಕ ಇನ್ನೆತ್ತ ಗಮನವು... ಇಂದಿನ ದಿವಸವಿದೆಲಾ ಪೂರ್ವ ಸುಕೃತವ ಹೊತ್ತುದು... ಎಮಗೆ ಇಲ್ಲಿಂದಿತ್ತಲು ಸುಜನ ಸಂಸರ್ಗ ಉತ್ತರೋತ್ತರ ಸಿದ್ಧಿ.

ಬ್ರಾಹ್ಮಣ : ಹಸ್ತಿನಾಪುರದತ್ತಣಿಂದವೆ ಬಂದೆವು... ನಿಮಗೆ ಆವುದು ದೇಶ.

ಧರ್ಮರಾಯ : ನಾವು ನಿರ್ಮ್ಮೋಪಾದಿಯಲಿ ತೀರ್ಥಾವಲೋಕನ ಪರರು... ಭಿಕ್ಷಾಜೀವಿಗಳು... ನೀವು ಗಜಪುರವ ಹೊರವಂಟು ಏಸು

ದಿನ... ಆವನು ಅಲ್ಲಿಗೆ ಪತಿ... ಯುಧಿಷ್ಠಿರ ದೇವನೋ... ದುರ್ಯೋಧನನೊ... ಕೌರವ ಪಾಂಡುತನಯರಲಿ ಬಳಿಕ ವಿಶೇಷ ಆವುದುಂಟು.

ಬ್ರಾಹ್ಮಣ : ಮರುಳುಗಳೊ ನೀವ್... ಮೇಣು... ನಮ್ಮನು ಮರುಳು ಮಾಡುವ ಪರಿಯೊ... ಪಾಂಡವರು ಅರಗು ಮನೆಯಲಿ ಬೆಂದರು... ಇದು ಲೋಕಪ್ರಸಿದ್ಧವಲೆ... ಅರಸು ಕೌರವ ರಾಯನು... ಆತನ ಸಿರಿಯನು... ಆತನ ಬಲುಹನು... ಆತನ ಪರಿಯನು ಅಭಿವರ್ಣಿಸುವಡೆ ಅರಿಯೆನು... ವಿಪ್ರ ಕೇಳು.

ಧರ್ಮರಾಯ : ಅಕಟ, ಪಾಂಡವರು ಅಳಿದರೇ... ಪರರಿಗೆ ಬಾಧಕರೆ... ಲೇಸಿನಲಿ ಕಂಟಕವು... ದುಗ್ಧ ವಿಷಂಗಳಲಿ ಹಾಲಿಂಗೆ ಹಾನಿಯಲೆ... ವಿಕಳ ಪುಣ್ಯರು ನಿಲಲಿ... ಕುರು ರಾಜಕದೊಳಗೆ ಭೀಷ್ಮಾದಿ ವೃದ್ಧ ಪ್ರಕರ... ಗುರುಸುತ... ಗುರು ಕೃಪಾದ್ಯರು ಕುಶಲರೇ.

ಬ್ರಾಹ್ಮಣ : ಗುರುಸುತಾದಿ ಸಮಸ್ತ ಪರಿಜನ ಪುರಜನಕೆ ಸುಕ್ಷೇಮ... ದ್ರುಪದನ ವರ ಕುಮಾರಿಯ ಮದುವೆ ಗಡ... ಪಾಂಚಾಲ ನಗರದಲಿ ನಾನಾ ದಿಗಂತದ ಧರಣಿಪತಿಗಳು ಭೂರಿಯಲಿ ನೆರವುತಿದೆ... ನಮಗೆ ಮಿಗೆ ಭರಿತ ದಕ್ಷಿಣೆ ಮೃಷ್ಟ ಭೋಜನವುಂಟು.

ಧರ್ಮರಾಯ : ಸಾರವಿದು... ನೃಪ ಕನ್ನಿಕೆಗೆ ವರನಾರು... ಲಗ್ನವದು ಎಂದು... ಬಳಿಕ ಭೂಪತಿಗಳು ಆರಾರು ಬಂದರು... ಅದನೆಂದು ಕೇಳಿದಿರಿ... ಭೂರಿಯಲಿ ನಮಗುಂಟೆ ಮೃಷ್ಟಾಹಾರ ದಕ್ಷಿಣೆ... ನಮ್ಮ ಅಭೀಷ್ಟ ವಿಹಾರ ವಾರ್ತೆಯಿದು.

(ಎಂದು ಧರ್ಮಜ ನುಡಿದನಾ ದ್ವಿಜಗೆ... ಇವರು ಕಪಟೋಪಾಧ್ಯರು ಎಂಬುದನು ಅವನು ಬಲ್ಲನೆ... ಧರ್ಮನಂದನನ ಭೂಮಿದೇವ ಪ್ರವರನೈಸಲೆ ಎಂದು ಬಗೆದನು.)

ಬ್ರಾಹ್ಮಣ : ಅವನಿಯಲಿ... ಪಾತಾಳದಲಿ... ಸುರಭವನದಲಿ ಪಾಂಚಾಲ ತನುಜೆಗೆ ಯುವತಿಯರು ಸರಿಯಲ್ಲ ಎಂಬುದ ಆವು ಕೇಳ್ದೆವು... ಈಕೆಗೆ ಎಣೆಯಹ ವರನನು ಈ ನರಲೋಕದಲಿ ತಾ ಕಾಣೆನು... ಅರ್ಜುನನು ಈ ಕುಮಾರಿಯ ರಮಣನೆಂದೇ ಮನದ ಸಂಕಲ್ಪ... ಈಕೆಯ ಅಪದೆಸೆ ಉದಯದಲಿ ಕುಂತೀಕುಮಾರಕರು ಅನಲ ಮುಖದಲಿ ನಾಕದಲಿ ನೆಲೆಗೊಂಡರೆಂದು ದ್ರುಪದ ಉಮ್ಮಳಿಸುವನು... **"ಜ್ವಲನ ನೆರೆ ನುಂಗಿದನೊ... ಮೇಣ್... ಎಂಜಲಿಸಿ ಬಿಟ್ಟನೊ... ಆವನು ಬಲ್ಲನು... ಕಮಲಭವನು ಕಲು ಹೃದಯನೈ... ಈ ಪಾಂಡುನಂದನರ ಸುಳಿವ ಸೈರಿಸನು...**

ಅಕಟ, ಹೂಹೆಗಳು ಅಳಿವ ಹರೆಯವೆ ಶಿವಶಿವಾ" ಎಂದು ದ್ರುಪದಪತಿ ಅಳಲು ತೊರೆಯಲಿ ಮುಳುಗಿ ಮೂಡುವ... ಸಕಲ ದೈವಜ್ಞರಲಿ... ಉಪಶ್ರುತಿಗಳಲಿ... ಋಷಿಗಳ ಪರಮ ಸಿದ್ಧಾಂತದಲಿ... ಮಂತ್ರಾವೇಶ ವಚನದಲಿ ಅರಸ ಕೇಳ್ವನು... ಪುರೋಹಿತನು ನೃಪನ ಉಪಚರಿಸಿ ನುಡಿದು ... **"ಧರೆಯೊಳು ಈಗಳು ಪಾಂಡುಸುತ ಸಂಚರಣೆಯುಂಟು... ಅದು ಸತ್ಯವೆಂದು ಸಂತವಿಸುವನು. ಸರಸಿಜಾನನೆ ನೃಪರಲಿ ನೋಡಿ ವಲ್ಲಭನನು ವರಿಸುವಳು ಎಂದು ಸವಿವಾತುಗಳ ಸಾರಾಯ ಸೋನೆಯಲಿ ಉಪಚರಿಸುವನು... ಬಹುದೇಶ ಭೂಮೀಶ್ವರರನು ಬರಿಸುವುದು... ಅವರೊಳು ಪುಣ್ಯದಲಿ ಗರುವೆಯರ ದೇವಿಗೆ ಪಾಂಡುಸುತರು ಗೋಚರಿಸರೇ"** ಎಂದ.

"ಆದೊಡೆ ಈ ಮಗುವಿನ ಮಹಾಪುಣ್ಯೋದಯದ ಫಲವೈಸಲೇ... ಮೇದಿನೀಶ್ವರರೆಲ್ಲರಿಗೆ ಲೇಖಾರ್ಥ ಸಂಗತಿಯ ಬರೆ... ಸೋದರರು ಸಹಿತಾ ಸುಯೋಧನ ನಾದಿಯಾದ ಸಮಸ್ತ ನೃಪರು ವಿವಾದವಿಲ್ಲದೆ ಬರಲಿ... ಪಾವುಡವನು ಕಟ್ಟಿಸು." ಎಂದ... ಅಖಿಳ ಭೂಮೀಶ್ವರರಿಗೆ ಬರೆದ ವೋಲೆಗಳ ಉಡುಗೊರೆ ಸಹಿತ ದೂತರು ಉತ್ತರ

ಪೂರ್ವ ದಕ್ಷಿಣ ಪಶ್ಚಿಮಂಗಳಿಗೆ ಹರಿದರು... **"ಧರೆಯ ಕನ್ಯಾಜನ ಶಿರೋಮಣಿ ವರ ದ್ರುಪದ ತನುಜಾ ಸ್ವಯಂವರಕೆ ಅರಸುಗಳು ಬಹುದು"** ಎಂದು ಅಖಿಳ ಲೇಖಾರ್ಥ ವಾಚಿಸಿತು...

"ಶತ ಯಾಗವನು ಮಾಡಿದರೆ ಶಚಿ ಕೈಗೂಡುವಳು... ಮಖ ಸಹಸ್ರವ ಮಾಡಿ ಮೇಣ್ ಜನಿಸಿದೊಡೆ ಬಹಳೇ ದ್ರೌಪದಾ ದೇವಿ... ನೋಡುವೆವು ನಡೆ... ಜನ್ಮ ಶತದಲಿ ಕೂಡಿ ಕೊಬ್ಬಿದ ಪುಣ್ಯಫಲ ಕೈಗೂಡುವುದೊ... ತಪ್ಪೇನು" ಎನುತ ನೃಪಸ್ತೋಮ ನೆರೆದುದು...

ಆ ಪುರೋಹಿತ ವಚನದಲಿ ನಿರ್ವ್ಯಾಪಿತ ಅಂತರ್ವ್ಯಥೆ ಯಲಿ ಅವನಿಪನು ಆ ಪುರ ಪ್ರಾಂತ್ಯದಲಿ ಸುತ್ತಲು ಮೂರು ಯೋಜನದ ತೋಪಿನಲಿ ಅಗ್ಗದ ಭೂಪರಿಗೆ ಭವನವನು ಕಟ್ಟಿಸಿದನು... ಕೇಳೈ, ದ್ರೌಪದಿಯ ವೈವಾಹ ರಚನಾ ರಾಮಾಣೀಯಕವ ಕನ್ಯಾರ್ಥಿಗಳು ನಾನಾ ದಿಗಂತದ ಧರಣಿಪರು ನೆರವುತಿದೆ... ದಕ್ಷಿಣಾರ್ಥದಲಿ ಭೂಸುರ ಸಮೂಹದ ಸಾಲು ನೆರೆದುದು... ಎರಡರೊಳು ನಿಮಗೇನು ಕನ್ಯಾವರಣವೋ ಮೇಣ್ ದಕ್ಷಿಣಾರ್ಥವೊ... ಬರವು ನಿಮಗುಂಟೇ.

(ಎನುತ ದ್ವಿಜನು ಇವರ ಬೆಸಗೊಂಡ.)

ಧರ್ಮರಾಯ : ಈಸು ಪರಿಯಲಿ ನಮ್ಮ ನೀವು ಅಪಹಾಸ ಮಾಡುವಿರಾ... ಆವು ಭಿಕ್ಷುಕರೈಸಲೇ... ಕನ್ಯಾರ್ಥದಲಿ ನಾವೆತ್ತ ನೃಪರೆತ್ತ... ಐಸೆ ನಿಮ್ಮೊಡೆ ನಾವು ಬಹೆವು... ಈ ಭೂಸುರರ ನೆರವುಂಟಲಾ... ಶುಭ ವಾಸರವ ಬೆಸಗೊಂಬೆನು.

(ಎಂದನು ಧರ್ಮಸುತ ನಗುತ... ಇವನು ಬಳಿಕ ನಿಜ ಪ್ರಯೋಜನ ಭವನಕೆ ಐದಿದನು... ಅಖಿಳ ವಾರ್ತಾ ವಿವರಣ ವ್ಯಾಖ್ಯಾನ ಸಮನಂತರದ ಸಮಯದಲಿ ಇವರು ತಮ್ಮೊಳಗೆ ಎಂದರು.)

ಪಾಂಡವರು : ಅವನೀ ದಿವಿಜಪುರದಲಿ ದೈನ್ಯವೃತ್ತಿಯ ನಿವಹ ನಿಲಲಿ... ಆ ದ್ರುಪದ ಪಟ್ಟಣವ ನಿರೀಕ್ಷಿಸುವೆವು... ಆ ಲತಾಂಗಿಯ ಮದುವೆಗೆ ಅವನೀಪಾಲ ವರ್ಗದ ಬರವು ಗಡ... ಹರನ ಊಳಿಗದ ಹೆಚ್ಚಾಳು ಮಕರಧ್ವಜನ ಮೌಳಿ ಗಡ... ಮೇಳವಹ ಕಿವಿಗಳಿಗೆ ಹಂಗು ಅಹವು... ಆಲಿಗಳು... ಪರಿವಿಡಿಯ ವೇಧೆಗೆ ಸೋಲುವವು.

(ಎಂದು ಐವರು ಒಳಗೊಳಗೆ ಆಳೋಚಿಸಿದರು... ಅರಸ ಚಿತ್ತೈಸು, ಅಮಳ ಲಗ್ನಾಂತರದಲಿ ಇವರು ಉದಯದಲಿ ಹೊರವಂಟರು.)

❍

26. ದ್ರೌಪದಿಯ ಸ್ವಯಂವರ–ಮೊದಲನೆಯ ಹಂತ

(ಆದಿಪರ್ವ : ಹದಿಮೂರನೆಯ ಸಂಧಿ : ಪದ್ಯ 49 ರಿಂದ 68)

ಪಾತ್ರಗಳು

ಧೃಷ್ಟದ್ಯುಮ್ನ : ದ್ರುಪದ ರಾಜನ ಮಗ.

ದ್ರೌಪದಿ : ದ್ರುಪದ ರಾಜನ ಮಗಳು.

ದ್ರುಪದ : ಛತ್ರವತಿ ನಗರದ ರಾಜ. ಧೃಷ್ಟದ್ಯುಮ್ನ ಮತ್ತು ದ್ರೌಪದಿಯ ತಂದೆ.

ದ್ರೌಪದಿಯ ಸ್ವಯಂವರ--ಮೊದಲನೆಯ ಹಂತ

ಆ ಪಾಂಚಾಲೆಯನು ಹೊನ್ನಂದಣದಲಿ ಆಸ್ಥಾನ ಸೀಮೆಗೆ ತಂದರು... ಮುಂದೆ ಸಿಂಹಾಸನದ ಸಾಲ ಮಹಾಮಹೀಶ್ವರರ ಸಂದಣಿಯಲಿ... **"ಅವರವರನು... ಇವರಿವರು"** ಎಂದು ವಿವರಿಸಬೇಕು ಎನುತ ನೃಪ ನಂದನನು ಕಮಲಾನನೆಯ ದಂಡಿಗೆಯ ಹೊದ್ದಿದನು.

ಧೃಷ್ಟದ್ಯುಮ್ನ : ತಂಗಿ ನೋಡೌ ತಾಯೆ, ನಿನ್ನಯ ಕಂಗಳು ಒಲಿವರೆ... ಚಿತ್ತವಾರ್ಥಿತ ರಂಗದಲಿ ತೂಗುವರೆ... ಅವನಿಪಾಲಕರ ತೋರುವೆನು... ಬಹಿರಂಗದಲಿ ಅವರ ಅಂಗವಟ್ಟದ ಬಳಕೆಯನು... ಇಂಗಿತದಲಿ ಅಂತರಂಗವನು ನೀನು ಅರಿ.

(ಎನುತ... ನಿಜ ಅನುಜೆಗೆ ನುಡಿದನು.)

ಅಬಲೆ, ಆ ಧೃತರಾಷ್ಟ್ರ ನಂದನರ ನಿರೀಕ್ಷಿಸು... ಈತ ದುರ್ಯೋಧನ ಮಹೀಶ್ವರನು... ಈತ ದುಶ್ಶಾಸನನು... ಈತ ದುರ್ಜಯನು... ಈತ ದುಶ್ಶಳನು... ಈತ ದುಸ್ಸಹನು... ಈತ ಚಿತ್ರರಥ... ಈತ ದುರ್ಮದನು... ಈತ ಚಿತ್ರಕನು... ಈತಗಳು ಕುರುವಂಶದಲಿ ವಿಖ್ಯಾತರು...

ಧೃಷ್ಟದ್ಯುಮ್ನ : (ತನ್ನ ಮನದಲ್ಲಿ)

ಅವರನು ನೋಡಳು... ಈತನ ಕೂಡೆ ನುಡಿಸಳು... ಇವರ ಭಾವದೊಳು ಕೊಡಹಿ ಈಡಾಡಿದಳಲಾ.

(ಎನುತ ಧೃಷ್ಟದ್ಯುಮ್ನ ನಸುನಗುತ...)

ನೋಡು ತಂಗಿ, ಉತ್ತರ ಕೂಡಿ ವಿರಾಟನು...ಕೀಚಕರನು... ಶ್ರುತಾಯುಧ... ಮೂಡಣ ಅರಸುಗಳನು... ರವಿಧ್ವಜ... ರೋಚ ಮಾನಕರ... ನೀಲ... ಚಿತ್ರಾಯುಧನ... ದಕ್ಷಿಣ ಚೋಳ... ಕೇರಳ ಪಾಂಡ್ಯ... ಧರಣೀಪಾಲಕರೊಳು ಈ ಚಂದ್ರಸೇನ... ಸಮುದ್ರಸೇನಕರು...

ಲೋಲನಯನೆ, ಈತನು ಕಳಿಂಗ ಧರಣೀಪಾಲನು... ಈತನು ಚೇಕಿತಾನ ನೃಪಾಲನು... ಭಾನುದತ್ತ ಮಹೀಶ ನೋಡು... ಇತ್ತಲು ಈಕ್ಷಿಸು... ಪೌಂಡ್ರಕನ... ಭಗದತ್ತನನು... ಕಾಂಭೋಜನನು... ಹರದತ್ತನನು... ವರ ಹಂಸ... ಡಿಬಿಕರ... ಮಾದ್ರಭೂಪತಿಯ... ಇತ್ತಲು ಜರಾಸಂಧ... ಮಣಿಮಾನ... ಇತ್ತ ಸಹದೇವನು... ಇತ್ತಲು ಬೃಹದ್ರಥ... ಈತನು ದಂಡಧಾರಕ ನೃಪನು...

ನೋಡು... ಭೂರಿ... ಭೂರಿಶ್ರವನು... ದಕ್ಷಿಣ ವೀರಬಾಹ್ಲಿಕ... ವಿಂಧ್ಯ... ಚಿತ್ರ... ಭಗೀರಥನು... ನೃಪವರ ಜಯದ್ರಥ... ಶಿಬಿ... ಶ್ರುತಾಯುಧರು... ವೀರ ವೃದ್ಧಕ್ಷತ್ರ... ಸೃಂಜಯ... ಚಾರು ಭುಜಬಲ ಸೋಮದತ್ತ ಮಹೀರಮಣರು ಇವರು ಇತ್ತಲಿದೆ...

ತರಳಾಕ್ಷಿ ನೋಡು... ಈತ ರುಕ್ಮಾಂಗದ...ಈತ ಜಯದ್ಬಲನು... ಈತಗಳು ಶ್ರುತಸೇನ... ಅಚ್ಯುತಾ ಯುಧರು... ನಿಯತಾಯು... ದೀರ್ಘೋದರ ಮಹೋದರರು... ಈತ ದಮಘೋಷ ಆತ್ಮಜನು... ವಿಖ್ಯಾತ ಶಿಶುಪಾಲನು... ಈತನು ಮಹಾಬಲ ಅಶ್ವತ್ಥಾಮ... ಈತ ಸೌಬಲನು ನೋಡು...

ಭೂತಳದ ರವಿಯಂತೆ ಹೊಳೆ ಹೊಳೆವಾತ ಕರ್ಣನು... ಈತನು ಅಹನೆ ನೋಡು... ಈತಂಗೆ ತನುಜರು... ಈತಗಳು ವೃಷಸೇನನು ಅಗ್ಗದ ಚಿತ್ರಸೇನಕರು.

(ಎನಲು... ಭಾವಾತಿಶಯ ಸಂಬಂಧಭಾವದೊಳು ಈತನನು ನೋಡಿದಳು... ಅಬಲೆ ಲೋಚನವ ತಿರುಹಿದಳು... ಉಕ್ಕಿದಾ ಕಿವಿವೇಟ... ಕಣ್ ಬೇಟಕ್ಕೆ ಕಂಗಳು ತಂದುದು... ಈಕೆಯ ಮುಕ್ಕುಳಿಸಿ ಮೈ ಸೋಂಕಿನಲಿ ಲಟಕಟಸಿದುದು ಹೃದಯ... ಅಳಲಿಗೆ ಸೋತು ಸಿಕ್ಕಿತು... ಸೊಕ್ಕಿನ ಚುಕ್ಕಿಯೋ... ಚಾಪಳವೊ... ಸಿದ್ಧಿಯೊ... ಅಕ್ಕಜವೊ... ತಾನು ಎನುತ ಆ ನೃಪವ್ರಾತ ಚಿಂತಿಸಿತು.)

ಧೃಷ್ಟದ್ಯುಮ್ನ : ಇತ್ತ ನೋಡೌ ತಂಗಿ, ಯದು ಭೂಪೋತ್ತಮನನು... ಅಮರಾರಿ ಕದಳೀ ಮತ್ತದಂತಿಯ... ನಿಖಿಳ ನಿಗಮಾವಳಿ ಶಿರೋಮಣಿಯ... ಉತ್ತರೋತ್ತರ ರಮ್ಯಮೂರ್ತಿಯನು... ಉತ್ತಮ ಅಮಲ ಕೀರ್ತಿಯನು... ಮನ ಹತ್ತುವಡೆ ಹಳಿವಿಲ್ಲ... ಕೃಷ್ಣನ ವರಿಸು ನೀನು...ಮದನನ ಅಯ್ಯನು... ಮೂಜಗವ ಮಾಡಿದನ ತಾತನು... ಇದರೊಳಗೆ ನೀ ರೂಪ ವಿಭವವನು ನೋಡಿಕೋ... ಯಾದವ ಶಿರೋಮಣಿಯ ಸುದತಿಯರ ಸೇರುವೆಗಳನು ನೋಡಿದರೆ... ಧಾರುಣಿ ಲಕ್ಷ್ಮಿ ಕೃಷ್ಣನ ಪದಯುಗವನು ಓಲೈಸುತಿಹರು... ಅಬುಜಾಕ್ಷಿ ಕೇಳು.

(ಎನಲು ಭಕುತಿಯ ಭಾವರಸದಲಿ ನೆನೆದು ಹೊಂಪುಳಿ ವೋಗಿ... ರೋಮಾಂಚನದ ಮೈಯುಬ್ಬಿನಲಿ... ತನು ಪುಳಕಾಂಬು ಪೂರದಲಿ ಮನದೊಳಗೆ ವಂದಿಸಿದಳು.)

ದ್ರೌಪದಿ : ಏನೆಂದು ಅರಿಯೆನು... ಎನಗೆ ಈತನಲಿ ಗುರುಭಾವನೆಯ ಮತಿ ಸಂಜನಿಸಿತು.

(ಎಂದಳು ಕಮಲಮುಖಿ ನಗುತ.)

ಧೃಷ್ಟದ್ಯುಮ್ನ : ಆದೊಡೆ... ನೀಲಾಂಬರನು ಈ ಕೃಷ್ಣಂಗೆ ಹಿರಿಯನು... ನೋಡು... ಮುರಾರಿಯ ಹಿರಿಯ ಮಗನನು...ಲೋಕ ಮೂರರ ಬಂಧಿಕಾರನನು... ಹರನ ಕಣ್ಣಿಗೆ ಬಗೆಯನು ಎಂಬ ಈ ಬಿರುದು ಮನ್ಮಥನು ಈತನು...ಈತನ ವರ ತನುಜನು ಅನಿರುದ್ಧನು... ಇದು ಯದುರಾಜಕುಲ...

ಸಾರಣನು... ಕಲಿ ಸಾಂಬನು...ಈತನು ಚಾರು ದೀಪಕನು... ಈತನು ಅಮಲ ಅಕ್ರೂರ... ಸತ್ಯಕನು...ಈತ ಸಾತ್ಯಕಿ... ಈತ ಕೃತವರ್ಮ... ಈತನು ಸಾರಮೌಂಜಸನು...ಈತ ವಿದೂರಣಾದಿ ಸಮಸ್ತ ಯಾದವ ವೀರರು... ಇದು ಅಸಂಖ್ಯಾತ... ಕೃಷ್ಣ ಕುಮಾರರು ಇವರು.

(ಅಂಬುಜಾನನೆ ಜಗವನು... ಇಂದ್ರಿಯ ಕರಣ ವಿಷಯಾದಿ ಗಳನೆಲ್ಲವನು ಎತ್ತಿ ಮುಖದಲಿ ತೆಗೆದು... ಶ್ರುತಿಶಿರದ ಅಮಲ ತತ್ವವನು ಅರಸುವ ಅಂದದಲಿ... ಬಗೆಯ ಬಯಕೆಯ ಸೊಗಸುಗಳ ದಾಯಿಗನನು ಅರಸುತ... ಅಖಿಳ ನೃಪಜನವ ಕುಡಿತೆಗಣ್ಣಲಿ ಮೊಗೆದು ಸೂಸಿದಳು...

ಕೆಲರು ಮಧುರ ಅಪಾಂಗದಲಿ... ಕಂಗಳ ಮರೀಚಿಯ ಬೆಳಗಿನಲಿ... ಕೆಲರು ಎಳೆನಗೆಯ ಮಿಂಚಿನಲಿ... ಸಖಿಯರ ಮೇಳವಾತಿನಲಿ ಲಲನೆ ನೋಡಿದಳು ಎಂದು... ಸೊಗಸಿನಲಿ ಒಲಿವ ಸಖಿಯರಿಗೆ ಎಂದಳು ಎಂದು... ಬಯಲ ಮಧುವಿನ ಬಾಯ ಸವಿಗಳಲಿ ಒಳಗೊಳಗೆ ಬೆರೆತರು...

ಗರುವೆಯ ಇಂಗಿತವ ಅರಿದು... ದಂಡಿಗೆ ಮುರಿದು ನೆರವಿ ಒಡನೆಯ್ಯೆ ತಂದುದು... ಮುರವೈರಿ ಗಂಗಾಸೂನು ಹೊರತಾಗಿ... ಧರಣಿಪರು ಈಕೆಯ ಕಳುಹುತ ಕಂಗಳಲಿ... ಕರಣೇಂದ್ರಿಯಂಗಳಲಿ... ಬರಿಯ ಡಿಂಬದ ಡೊಂಬಿನಲಿ ಕೇಸರಿಯ ಪೀಠವನು ಇಳಿಯದಿರ್ದರು...

ಮಡಿಸಿದ ಎಲೆ ಬೆರಳೊಳಗೆ... ಬಾಯೊಳಗೆ ಅಡಸಿದ ಎಲೆ ಬಾಯೊಳಗೆ... ಸಚಿವರ ನುಡಿಯ ಕೇಳರು... ಲೋಚನಾಗ್ರದಲಿ ಸುಳಿಯೆ ಕಾಣರು... ಕಡುಮುಳಿದ ಕಂದರ್ಪ ಶರವ ಅವಘಡಿಸಿ... ನೃಪರು ಕೈಗಳನು ಒಡ್ಡಿ... ಬೆರಳ ಮೂಗಿನ ಹೊತ್ತ ದುಗುಡದಲಿ ಎಲೆ ಮಿಡುಕದಿರ್ದರು.)

ದ್ರುಪದ : ಮಹಾ ಸ್ವಯಂವರದಲಿ ಸಕಲ ಧರಣೀ ರಾಯರನು ಆಯತಾಕ್ಷಿ ಮನ್ನಿಸದೆ ಮರಳಿದಳು... ಮಹಾದೇವ... ಗದುಗಿನ ವೀರ ನಾರಯಣ ಪಾಂಡವ ರಾಯರನು ತೋರಿಸನೆ... ಜೋಯಿಸರ ಹೋರೆಗರ ಹೇಳಿಕೆ ಹೊಳ್ಳಾಗಿ ಹೋಯಿತೇ. (ಎಂದನು.)

❍

27. ದ್ರೌಪದಿಯ ಸ್ವಯಂವರ–ಎರಡನೆಯ ಹಂತ

(ಆದಿಪರ್ವ : ಹದಿನಾಲ್ಕನೆಯ ಸಂಧಿ : ಪದ್ಯ 1 ರಿಂದ 34)

ಪಾತ್ರಗಳು

ರಾಜ ಭಟ : ರಾಜನ ಆದೇಶವನ್ನು ಒಡ್ಡೋಲಗದಲ್ಲಿ ಸಾರುವವನು.

ಜರಾಸಂಧ : ಮಗಧ ದೇಶದ ರಾಜ.

ಶಿಶುಪಾಲ : ಚೇದಿ ದೇಶದ ರಾಜ.

ಶಲ್ಯ : ಮದ್ರ ದೇಶದ ರಾಜ.

ಕರ್ಣ : ಅಂಗ ರಾಜ್ಯದ ಒಡೆಯ.

ಬಲರಾಮ : ದ್ವಾರಾವತಿ ಪಟ್ಟಣದ ರಾಜ. ಕೃಷ್ಣನ ಅಣ್ಣ.

ಕೃಷ್ಣ : ಬಲರಾಮನ ತಮ್ಮ. ಪಾಂಡವರ ಹಿತಚಿಂತಕ.

ದ್ರುಪದ : ಛತ್ರಾವತಿ ನಗರದ ರಾಜ.

ರಾಜ ಪರಿವಾರ : ರಾಜನ ಒಡ್ಡೋಲಗದಲ್ಲಿರುವ ವ್ಯಕ್ತಿಗಳು

ಸಖಿಯರು : ದ್ರೌಪದಿಯ ಸೇವಕಿಯರು.

ದ್ರೌಪದಿಯ ಸ್ವಯಂವರ–ಎರಡನೆಯ ಹಂತ

ಕೇಳು ಜನಮೇಜಯ ನೃಪತಿ, ಪಾಂಚಾಲೆ ಭದ್ರಮಂಟಪ ಶಾಲೆಯನು ಪೊಕ್ಕಳು... ಮನ್ಮಥನ ಒಡ್ಡು ಸತಿಯೊಡನೆ ಮರಳಿದುದು... ಡಂಗುರವ ಹೊಯ್ದು...

ರಾಜ ಭಟ : ಬಾಲೆಯನು ನಿಜರೂಪ ದರ್ಪದೊಳು ಆಳಲು ಅರಿದಿರೆ... ಬಾಹುಬಲದಲಿ ಸೋಲಿಸುವಡೆ ಅನುವಾಗಿ... ಇದೆ ಮಹಾಧನು... ಇದೆ ಬಾಣ ಪಂಚಕ... ನಭೋಗ್ರದ ಯಂತ್ರ ಹೊಳವುತ್ತಿದೆ... ಇದುವೆ ಕಬ್ಬಿನ ಬಿಲು... ಇದು ಕುಸುಮಮಯ ಶರಾವಳಿ... ಆವನು ಯಂತ್ರವ ವಿಭಾಡಿಸಿ ಬಾಹು ವಿಕ್ರಮವ ಮೆರೆವನು... ಆತನೆ ಅಬಲೆಯ ಹೃದಯ ರಮಣನು... ಆತನೆ ಕುಸುಮ ಶರನು.

(ಎಂದು ಸಾರಿದು... ಭಾರಿ ಧನುವನು ತಂದು ಧರೆಗೆ ಇಳುಹಿದರು... ಗಗನದಲಿ ಗವಸಣಿಗೆಗಳನು ಉಗಿದು ಯಂತ್ರವನು ಅಂದವಿಟ್ಟರು... ಮುಂದೆ ಕೂರಂಬುಗಳ ಥರಥರದಿಂದ ನಿಲಿಸಿ... ವೈದಿಕ ವಿಧಾನದಲಿ ಸುಗಂಧದ ಅಕ್ಷತೆಯಿಂದ ಪೂಜೆಯ ರಚಿಸಿದರು... ಬಹು ವಾದ್ಯ ರವ ಮಸಗಿದುದು... ಆವರ್ಜಿಸುವ ವೋಲ್ ನಿಪ್ಪಸರದಲಿ ನಿಸ್ಸಾಳತತಿ ಗರ್ಜಿಸಿದವು... ಇತ್ತಲು ಘನಯಂತ್ರ ಭೇದಿಗಳ ಒಸಗೆಯಾಟವೊ... ಬಿಲ್ಲ ಹೊಯ್ಲಿನ ಹಸುಗೆಯಾಟವೊ...

ಚಾಪ ಗರುವರಿಗೆ ಗಂಗಸೆಯ ಮಾಡಿತು ಭೂಪ ಕೇಳೆಂದ... ನೆರವಿಯಲಿ ನಾನಾ ದಿಗಂತದ ಧರಣಿಪತಿಗಳು ಹಮ್ಮಿಕೆಯಲಿ ಉಬ್ಬರಿಸಿ ಹೊಕ್ಕರು... ಬೇರೆ ಬೇರೆ ಒಬ್ಬೊಬ್ಬರು ಉರವಣಿಸಿ ಹರಗಿರಿಗೆ ಹುಲು ರಕ್ಕಸರು ಮತ್ಸರಿಸುವಂತಾಯ್ತು... ಏನನೆಂಬೆನು ಧರೆಯ ಬಿಡದ ಈ ಧನು ಅವನಿಪರ ವಿಭಾಡಿಸಿ ಕೆಡಹಿತು... ಹಾರ ಹರಿದುದು... ಕರ್ಣಪೂರದ ಚಾರುಮಣಿಗಳು ಸಡಲಿದುವು... ಪದ ವೀರ ನೇವುರ ನೆಗ್ಗಿದವು... ನೆನಹುಗಳು ಕುಗ್ಗಿದವು... ನಾರಿಯರ ಕೈಹೊಯ್ಲ ನಗೆಯ ನಿಹಾರ ಜಡಿದುದು... ಮುಸುಕುದಲೆಯ ಮಹೀರಮಣರು ಓಸರಿಸಿ ಸಿಂಹಾಸನವ ಸಾರಿದರು...)

ರಾಜರು–1 : ಈ ಧನು ಮಿಡುಕದು... ನಮ್ಮ ಝಾಡಿಸಿ ಕೆಡಹಿತು... ಅದನು ಇನ್ನಾರು ಕೊರಳಲಿ ಯಂತ್ರದಲಿ ಶರವ ತೊಡಿಸಿ ತಿರುವನು ಸೆಳೆದು ಬಿಡುವರೊ... ಕಡುಹಿನ ಅಣ್ಣನ ಕಾಂಬೆವೈಸಲೆ... ನುಡಿದು ಮಾಡುವುದೇನು...

(ಎನುತ ಸಿರಿಮುಡಿಯ ಮುಸುಕಿನ ರಾಯರು ಬಯಲ ಬಿಂಕದಲಿ ಇದ್ದರು.)

ಜರಾಸಂಧ : ಎಮಗೆ ಸೌಭಾಗ್ಯ ಐಸಲೇ... ದ್ರುಪದಸುತೆ ಶರಾಸನ ಆಕರುಷಣದೊಳು ಅತಿ ಡೊಳ್ಳಾಸದಲಿ ಡಾವರಿಸಿ ನೃಪರ ಗೆಲಿದಳು... ಲೇಸು ಇದಕೆ ತಪ್ಪೇನು.

(ಎನುತ ಭದ್ರಾಸನವನು ಇಳಿದು... ಉಲಿವ ತೊಡರಿನ ಘೋಷಣೆಯ ಘಳಿಲುಗಳ ಮಗಧ ನೃಪಾಲನೈತಂದ... ಚೌಪಟಮಲ್ಲ ಬಿಲ್ಲ ಹೊರೆಗೈದಿದನು... ನೋಡಿದನೈಸಲೇ... ತಪ್ಪಲ್ಲ ಎನುತ ಮುಂಗೈಯ ಸರಪಣಿಯ ಮೇಲ್ದಿರುಹಿದನು.)

ಸಖಿಯರು : ಬಿಲ್ಲನು ಎತ್ತಿದರೆ... ಇವನನು ಅಂಗನೆಯು ಒಲ್ಲಳೋ ಮೇಣ್ ಒಲಿವಳೋ... ಮಿಗೆ ಬಲ್ಲಿದನು ತಾನೀತನು...

(ಎನುತ ಸಖೀ ನಿವಹ ಇರ್ದುದು... ಈತ ಕುಸಿದು ಎತ್ತಿದಡೆ ಧನು ಮಾರಾತುದು... ಇವನು ಔಕಿದಡೆ ಕಾರ್ಮುಕ ಈತನು ಆರೆಂದು ಅರಿಯದು... ಇವನು ಔಡೊತ್ತಿ ಮೈಬಲಿದು ಘಾತಿಯಲಿ ಘಲ್ಲಿಸಿದಡೆ ಆ ಧನು ಸೋತುದೆ... ಎವೆಯಂತರಕೆ ತೊಲಗದು... ಧಾತುಗುಂದಿದನು... ಮಾಗಧನ ಅಳ್ಳೆಗಳು ಅಳ್ಳಿರಿದವು... ಬೆಮರನು ಆರಿಸಿಕೊಂಡು ವಿಗತಶ್ರಮನು ದಂಡೆಯೊಳು ಮೊಳಕಾಲಿಕ್ಕಿ ಅಮರಿ ದೇಹವ ಬಲಿದು ವಕ್ಷದೊಳು ಔಂಕಿ ಗಾಢದಲಿ ಕುಮತಿಯು ಅಲ್ಲಾಡಿದರೆ... ಅಮಮ... ಜವೆ ಮಾತ್ರಕ್ಕೆ ಬಿಟ್ಟುದು... ಘನ ವಿಕ್ರಮವನು ಒಡೆದುದು... ಆತನ ಗರ್ವವಿಭ್ರಮವ ಸದೆದುದು... ಕಾಂತಾ ಕದಂಬದ ಘೋಳುಘೊಳು ಘೋಳೆಂಬ ನಗೆಗಳ ಕೇಳಿದನು.)

ಜರಾಸಂಧ : (ತನ್ನಲ್ಲಿಯೇ)

ಕಾಳು ಮಾಡಿದೆನೇಕೆ... ಧನು ತಾನೇಕೆ ಸುಡು.

(ಎನುತ ಬೇಳುವೆಯಲಿ ಉಡಿದ ಅಂಕದ ವೊಲು ಉಬ್ಬಾಳುತನ ಪೈಸರಿಸೆ... ಕಿರುದೊಡೆಗೆ ಕಡೆಯವ ತಿರುಗಿ... ಮುಸುಕಿನ ಮೌಳಿ ಹಿಮ್ಮೆಟ್ಟಿದನು... ದಮಘೋಷನಂದನನು ಕೆರಳಿದನು.)

ಶಿಶುಪಾಲ : ಅರರೆ... ದಿಟ್ಟನ... ವಿಗಡ ಚಕ್ರಾಯುಧನ... ಮಾಗಧನ ಧನು ವಿಭಾಡಿಸಿ ತೆರಳಿಚಿತಲಾ... ಆ ಹರಿಬ ಎನ್ನದು... ದುರುಳ ಧನುವನು ಹೊಳ್ಳುಗಳೆವೆನು... ನಗುವ ಕೈನೆಯ ತುರುಬ ಕೊಯ್ಯುವೆನು.

(ಎನುತ ಕಲಿ ಶಿಶುಪಾಲನೈತಂದ.)

ಸಭಿಕರು : ಮುನ್ನಿನ ಭವದೊಳಗೆ ಇವನಲೇ ರಾವಣನು ತಪ್ಪಿಲ್ಲ... ಕೋಮಲಾಂಗಿಯ ಪುಣ್ಯವೆಂತು.

(ಎನುತ ಜನ ನಿವಹ ನಡುಗಿತು... ಅವನಿಪತಿ ಕೇಳು, ಇವ ಚಾಪವನು ಅಣೆದನು... ಬಲುಹೋ ಶಿವ ಎನುತ ಧನುವ

ಬೋಳೈಸಿದನು... ಸೀವರಿಸಿದನು... ಡಾವರಿಸಿದನು... ಏನನು ಎಂಬೆನು... ಧನು ಸಘಾಡದ ಮಾನಭಂಗದ ಮೊದಲ ಮನೆಯೆನೆ... ಮಾನಿನಿಯರ ಅಪಹಾಸ್ಯ... ಈ ಜನರ ಈ ನೃಪಾಲಕರ ಹೀನ ನುಡಿಗಳ ಕಂಡು... ದೈತ್ಯ ಸಮಾನ ಮನದಲಿ ನೊಂದು ತಿರುಗಿದನು... ಏನನು ಎಂಬೆನು... ಆತನ ಗರ್ವವಿಭ್ರಮವ ಸದೆದುದು... ಕಂಡು ಮಾಗಧ ಕರೆದನು.)

ಜರಾಸಂಧ : ಈ ಧನು ಚಂಡಿಯಿದು... ನಮಗಲ್ಲ... ನಾವ್ ಮುಂಕೊಂಡು ತಪ್ಪಿತು... ನೊಪ್ಪಿತಾದುದು... ಈ ಭೂಮಿಪರು ಭಾರಿ ಅಗ್ಗಳಿಕೆ ಭಂಡರು... ದ್ರುಪದನ ಗಂಡು ತೊತ್ತಿರು ನಗೆಯನು ಇವರ ಮಂಡೆಗಳಲಿ ಆನಲಿ.

(ಎನುತ ತಮ್ಮ ಪಟ್ಟಣಕೆ ಹಾಯ್ದರು... ಚೈದ್ಯ ಮಾಗಧರು ಗರುವರಲ್ಲಾ... ಇರದೆ ತಮ್ಮಯ ಪುರಕೆ ಗಮಿಸಿದರು... ಅರಸುಗಳ ಮಿಕ್ಕವರ ವಿಧಿಯನು ಕೇಳು ನರನಾಥ).

ರಾಜ ಪರಿವಾರ : ಧರಧುರದೊಳು ಅಭಿಮಾನಹಾನಿಯ ಹುರುಳಹುದು... ಬಿಲು ಹೋರಟೆಗೆ ನಿಲಲು ಅರಿದು.

(ಎನುತ್ತ ನೆರೆದ ನೃಪನಿಕರ ಅಂಗವಣೆಗುಂದಿತು.)

ಶಲ್ಯ : ದುರುಳ ಪಾಂಚಾಲನ ಕುಮಾರಿಯ ವರ ಕಟಾಕ್ಷದ ಬೀಸು ಬಲೆಯಲಿ... ಶರ ಮಹಾಧನುವೆಂಬ ಬಲುದಡಿ ಬಲೆಯನು ಅಳವಡಿಸಿ... ಧರಣಿಪಾಲ ಮೃಗಂಗಳನು ಸಲೆ ಬರಿಸಿ ಸದೆದನು... ಹೊಲ್ಲೆಹ ಏನು... ಅಂತಿರಲಿ... ನೋಡುವೆನು.

(ಎನುತ ಶಲ್ಯ ನೃಪಾಲನು ಐತಂದ.)

ಸಖಿಯರು : ಆ ಮಗಧ ಅಗ್ಗಳೆಯನು... ಶಿಶುಪಾಲ ಮಾತಿನಲಿ ಅಗ್ಗಿಗನು... ಸೋಲದ ಸುಗ್ಗಿಯು ಇಬ್ಬರಿಗಾಯ್ತು... ರಣಧೂಳಿ ಹಲಬರಿಗಾಯ್ತು... ಧನು ತಗ್ಗುವುದೊ... ಧನು ವಿಘಾತಿಗೆ ಮುಗ್ಗುವನೊ... ಇವರೊಳಗೆ ಮಾದ್ರೇಶನು ಅಗ್ಗಳೆಯನಹನು.

(ಎಂದು ನಾರಿಯರು ಅಂದು ನೋಡಿದರು... ಈತನು ಬಂದನು... ಧನುವ ಸಾರಿದು ನಿಂದು ಸಂವರಿಸಿದನು... ಕಾಂತಾವೃಂದವನು ನೋಡಿದನು... ಮನದಲಿ ಧಿಕ್ಕು ಧಿಗಿಲ್ ಎನುತ ಸಂದಣಿಯ ನಭಕೆ ಒತ್ತಿ... ಫಣಿಯಲಿ ಮಂದರವ ಬಿಗಿವಂತೆ ಭುಜದಲಿ ಮುಂದುವರಿದು ದಂಡೆಯನಿಕ್ಕಿ ಕೋಪದಲಿ ಅವುಚಿದನು... ಈ ಧನು ಕೊಳ್ಳದು... ಈತನು ಉಬ್ಬಿನೊಳು ಅಳ್ಳೆಗೊಬ್ಬಿನೊಳು ಔಕಿ... ತೊಡರಿನ ಘಲ್ಲಣೆಯ ಘನಕೆ ಉಲಿಯೆ... ನಿಮಿಷ ಮಾತ್ರದಲಿ ಬಿಲ್ಲು ಬಿಡದೆ ಡೊಳ್ಳು ಮೇಲಾಗಿ ಪಂಟಿಸಿ ಅವನಿಯಲಿ ಬಿದ್ದನು... ಇತ್ತ ಸತಿಯರು ಘೊಳ್ಳೆನಲು..)

ಶಲ್ಯ : ಸುಡು... ಘೋರ ಧನುವನು...

(ಎನುತ್ತ ಹೊರದೆಗೆದ.)

ಕರ್ಣ : ಮಾದ್ರೇಶನು ಹಿಂಗಿದನು... ಈ ಧನು ಮಾನ್ಯರನು ಭಂಗಿಸಿತು... ಜಡವಿದು ಜಂಗಮತ್ವದಲಿ ಏನಹುದೊ... ಜಗವ ಝೋಂಪಿಸಿತಲ್ಲೈ... ರಾಯಂಗೆ ಅಂಗನಾ ಪಾಣಿ ಗ್ರಹಣ... ತಾನು ಈ ದುಷ್ಟ ಧನುವನು ಭಂಗಬಡಿಸದೆ ಬಿಡೆನು.

(ಎನುತ ಕಲಿ ಕರ್ಣನು ಐತಂದ.)

ಸಖಿಯರು : ಈತನ ಅರ್ಜುನನಲ್ಲಲೇ... ರೂಪಾತಿಶಯವುಳ್ಳಾತ... ಈತ ಯಂತ್ರವನು ಗೆಲಿದರೆ ಪುಣ್ಯವೈಸಲೆ... ಈತ ತಂಗಿಗೆ ಅನುಸಾರಿ ವರನಹುದು.

(ಎನುತ ಲಲನಾಜಾತವು ಆತನನು ಈಕ್ಷಿಸುತ ಸಂಪ್ರೀತಿಯಲಿ ಕೊಂಡಾಡುತಿರ್ದುದು ರಾಯ ಕೇಳೆಂದ... ಚಾಪವನು ತುಡುಕಿದನು... ಮಹಿಯಿಮ್ ಮಿಡುಕದಿರೆ... ದಂಡೆಯನಿಕ್ಕಿ ಮಂಡಳಿಸಿ ಝಾಡಿಸಿ ಜಡಿದು... ಕೋಪದಲಿ ಜರೆದು ಔಂಕಿದನು... ಸತ್ವಾತಿಶಯವು ಹೊಡಕರಿಸಿ ಇಮ್ಮಡಿಸೆ... ಸರ್ಷಪ ಮಾತ್ರ ತಿರುವನು ತೊಡಿಸಲು ಅರಿಯದೆ ಹಿಂಗಿ... ಆ ಕರ್ಣ ಮೌನದೊಳು ಇರ್ದನು.)

ರಾಜರ ಪರಿವಾರ :ಬಹುಭುವನಪತಿಗಳು ಇವರು ನಾಲ್ವರಿಗೆ ಒಂದೆ ಪಥ... ಹಲರು ಅವಗಡಿಸಿ ಮುನ್ನ ಅಳುಕಿದರು... ಬಾವನ್ನವನು ವೇಷ್ಟಿಸಿ ಭುಜಗವಿದೆ... ಭಾಮಿನಿಯ ಮುಂದೆ ಭಾರಿ ಧನುವಿದೆ... ಎವಗೆ ತವಗಿದು ವಶವೆ.

(ಎಂದು ಅವನಿಪರು ಭಯಮುಖದ ದುಗುಡದಲಿ ಹೊರಗುಂದಿದರು... ಕ್ಷಿತಿಪ ಕೇಳ್ಳೈ, ವಿಗಡ ಚಾಪ ವ್ಯತಿಕರಕೆ ದುರ್ಯೋಧನಾದಿ ಕ್ಷಿತಿಪತಿಗಳು ಅಂಜಿದುದ ಬಲರಾಮ ಕಂಡನು ನಗುತ...)

ಬಲರಾಮ : ಉದ್ಧತನಲಾ ಪಾಂಚಾಲನು... ಕೃತಕ ಧನುವನು ಮುರಿದು... ದ್ರುಪದನ ಸುತೆಯ ಮುಂದಲೆವಿಡಿದು ತಹೆನು.

(ಎನುತ ವರಾಸನವ ಇಳಿದನು... ಹಲಧರನ ಮಸಕವನು ನಳಿನನಾಭನು ಕಂಡನು.)

ಕೃಷ್ಣ : ಇದೇನು ಪೀಠವನು ಇಳಿದಿರಿ... ಎಲ್ಲಿಗೆ ಗಮನವು... ಆವುದು ನಿಮಗೆ ಕಾರ್ಯಗತಿ ತಿಳುಹಿ.

ಬಲರಾಮ : ಬೇರೇನು... ಯಂತ್ರವ ಕಳಚಿ ಬಿಸುಟು... ಲತಾಂಗಿಯನು ಹಿಡಿದೆಳೆದು ತಹೆನು.

ಕೃಷ್ಣ : ಐಸಲೇ ಕೇಳು... ಇಂದು ನಿಮಗೆ ಕುಂತೀ ಮಾನಿನಿಯರು ಏನಹರು... ಅತ್ತೆಯರಲೇ... ತತ್ ಸೂನುಗಳು ಮೈದುನರು... ತತ್ ಪತ್ನಿಯರು ತಂಗಿಯರು... ಮನಕೆ ಸಾನುರಾಗವೆ... ಇದಕೆ ಸಂಶಯವೇನು... ತಪ್ಪಿಲ್ಲ... ಕುಂತೀ ಸೂನುಗಳು ದ್ರೌಪತಿಗೆ ರಮಣರು ನೀವು ನೋಡಿ

(ಎಂದ... ಬಲರಾಮನು ಮೂಗಿನಲಿ ಬೆರಳಿಟ್ಟು ಮಕುಟವ ತೂಗಿದನು.)

ಬಲರಾಮ : ಅವನಿಯ ನೀಗಿ ಹೋದರ ಮಾತು... ಪಾಂಡವರು ಎತ್ತಲು ಇವಳೆತ್ತ... ಲೋಕವರಿಯೆ ಉರಿಯ ಅರಮನೆಯೊಳು ಬೇಗುದಿಯೊಳು ಒಂದಾಗಿ ಬೆಂದರು... ಶತಾಗಮಿಕ, ನಿನಗೆ ತಾನು ಅಂಜುವೆನು.

(ಎನುತ ಕೈಮುಗಿದ.)

ಕೃಷ್ಣ : ಕ್ಷಿತಿಯೊಳು ಅವರು ಇಲ್ಲೆಂದು... ದ್ರುಪದನ ಸುತೆಗೆ ಪತಿ ಪರರು ಎಂದು... ಯಂತ್ರಚ್ಯುತಿಗೆ ನೀವು ಉಂಟೆಂದು... ನಿಮ್ಮ ಚಿತ್ತದಲಿ ತೋರಿತೆ... ಕ್ಷಿತಿಗೆ ಪಾಂಡವರಲ್ಲದೆ... ಇಲ್ಲಿ ಈ ಸತಿಗೆ ಪತಿ ಪೆರರಿಲ್ಲ... ವಸುದೇವನಾಣೆ, ಕುಂತೀ ಸುತರನು ಈಗಳೆ ತೋರುವೆನು.

ಬಲರಾಮ : ಇದು ವಿಚಿತ್ರವಲಾ... ಗತ ಅಸುಗಳು ಉದಿಸಿದರೆ ಲೇಸೈಸಲೇ... ದ್ರೌಪದಿಯನು ಅವರು ಅನುರಾಗಿಸಲಿ... ಭೂತಳವ ಭೋಗಿಸಲಿ... ಇದುವೆ ನಿಶ್ಚಯವಾದರೆ... ಅವರ ಅಭ್ಯುದಯವು ಎಮ್ಮ ಅಭ್ಯುದಯವು

(ಎಂದು ಆ ಪದುಮನಾಭನ ಹೊಗಳಿ ಸರಾಗದಲಿ ಕುಳ್ಳಿರ್ದನು.)

ದ್ರುಪದ : ಈಕೆಯನು ರಾಜಾನೀಕ ಸೌಂದರ್ಯದಲಿ ಮೆಚ್ಚಿಸದು... ಚಾಪ ವ್ಯಾಕರಣ ಪಾಂಡಿತ್ಯ ಎಂಬಡೆ ನಾನೀಗ ಕಾಣೆ... ಈಕೆಗೆ ಇನ್ನಾರು ಒಡೆಯರೋ... ಕುಂತೀ ಕುಮಾರಕ ರಿಲ್ಲಲೇ... ಇವರನು ಏಕೆ ನೆರಹಿದೆನು... ಸುಡಲಿ.

(ಎನುತ ಆ ದ್ರುಪದ ಚಿಂತಿಸಿದ.)

ಸಖಿಯರು : ಹರ... ಹರಾ... ತಂಗಿಗೆ ವರನು ಇನ್ನಾರೊ... ವಾರಿಧಿ ವಲಯದ ಅವನೀಶ್ವರರು ರೂಪು ವಿಕ್ರಮ ಎರಡು ಹೊರತಾಗಿ ನೆರೆದಿದೆ... ನರಪತಿಗಳು ಇವರೈಸಲೇ... ಇನ್ನು ಅರಸಿಗೆ ಆವುದು ಹದನು.

(ಎನುತ ಕಾಂತಾ ಕದಂಬದಲಿ ವಿಸ್ತರದ ಗುಜುಗುಜು ಮಸಗಿದುದು.)

❍

28. ದ್ರೌಪದಿಯ ಸ್ವಯಂವರ–ಮೂರನೆಯ ಹಂತ

(ಆದಿಪರ್ವ : ಹದಿನಾಲ್ಕನೆಯ ಸಂಧಿ : ಪದ್ಯ 34 ಮತ್ತು
ಹದಿನೈದನೆಯ ಸಂಧಿ : ಪದ್ಯ 1 ರಿಂದ 37)

ಪಾತ್ರಗಳು

ಧೃಷ್ಟದ್ಯುಮ್ನ : ದ್ರುಪದ ರಾಜನ ಮಗ.

ಅರ್ಜುನ : ಪಾಂಡುರಾಜ ಮತ್ತು ಕುಂತಿಯ ಮಗ.

ಕೃಷ್ಣ : ದ್ವಾರಾವತಿ ಪಟ್ಟಣದ ಒಡೆಯ. ಪಾಂಡವರ ಹಿತಚಿಂತಕ.

ಬಲರಾಮ : ದ್ವಾರಾವತಿ ಪಟ್ಟಣದ ಒಡೆಯ. ಕೃಷ್ಣನ ಅಣ್ಣ.

ಕಂಚುಕಿಗಳು : ರಾಣಿವಾಸದ ಅಧಿಕಾರಿಗಳು.

ಡಂಗುರದವರು : ರಾಜ ಆದೇಶವನ್ನು ಡಂಗುರ ಹೊಡೆದು ಸಾರುವವರು.

ಬ್ರಾಹ್ಮಣರ ಗುಂಪು: ಮದುವೆಯ ಮಂಟಪದಲ್ಲಿದ್ದ ಬ್ರಾಹ್ಮಣರ ಗುಂಪು.

ರಾಜ ಪರಿವಾರ : ಮದುವೆಯ ಮಂಟಪದಲ್ಲಿದ್ದ ರಾಜರ ಗುಂಪು.

ಸಖಿಯರು : ದ್ರೌಪದಿಯ ಸೇವಕಿಯರು.

ದ್ರೌಪದಿಯ ಸ್ವಯಂವರ–ಮೂರನೆಯ ಹಂತ

ಧೃಷ್ಟದ್ಯುಮ್ನ : ಅವನಿಪತಿಗಳು ಹೊಳ್ಳುವಾರಿದರು... ಇವರೊಳಿಲ್ಲಲೆ... ದಕ್ಷಿಣೆಯ ಹಾರುವ ಮಹಾಜನವಿದೆ... ಸಮುದ್ರಕೆ ಪಡಿ ಸಮುದ್ರವು ಎನೆ... ಇವರೊಳಗೆ ಮುಂಗೈಯ ಬಲುಹುಳ್ಳವರು ಈ ಧನುವನು ನೆಗಹಲಿ... ಈ ಯಂತ್ರವನು ಜಯಿಸಲಿ.

(ಎಂದು ಸಾರಿಸಿದ. ಕೇಳು ಜನಮೇಜಯ ಧರಿತ್ರೀಪಾಲ, ಪಾಂಚಾಲಿಯ ಮನೋರಥ ಶಾಲೆಯಲಿ ಡಂಗುರವ ಹೊಯ್ದು ಮಹೀಸುರರ ಸಭೆಯಲಿ ಸಾರಿದರಲೈ...)

ಡಂಗುರದವರು : ವಿಪ್ರಾಳಿಯಲಿ ಭುಜಬಲವುಳ್ಳವರು ಏಳಿ... ಬಿಲುವಿಡಿದು ಯಂತ್ರದ ಕೋಲುಗಳ ಕೇವಣಿಪುದು... ಪಾರ್ಥಿವರು ಪಾರ್ಥಿವರೊಡನೆ ಬೆರಸುವರು... ತದಲಾಭ ಪಕ್ಷಾಂತರಕೆ ಪಾರ್ಥಿವ ಸುತೆಯನು ವಿಪ್ರಜಾತಿಯಲಿ ಈವುದು... ಪುರುಷರು ಅನುಲೋಮದಲಿ ವಿಲೋಮದಲಿ ಕನ್ಯಾವರಣ ವಹುದು... ಇದ ವಿಸ್ತರಿಸಲೇಕೆ ಶಾಸ್ತ್ರನಿರ್ಣಯವ ನೀವು ಬಲ್ಲಿರಿ.

(ಎಂದು ಸಾರಿದ ದನಿಯನು ಆ ದ್ವಿಜವೃಂದವು ಆಲಿಸಿ...)

ಬ್ರಾಹ್ಮಣರ ಗುಂಪು–1 : ನಮಗೆ ಇದೇಕೆ ಅರವಿಂದವದನೆಯ ತೊಡಕು... ತೆಗೆ

ನಾವಾರು ಧನುವು ಆರು... ಬಂದ ದಕ್ಷಿಣೆ ಮೃಷ್ಟಭೋಜನ ದಿಂದ ನಾವು ತುಷ್ಟರು... ನಮಗೆ ಇದರಿಂದ ಅಪಕೀರ್ತಿಯು ಬಹುದು.

(ಎಂದುದು ಭೂಸುರ ವ್ರಾತ.)

ಬ್ರಾಹ್ಮಣರ ಗುಂಪು–2 : ನಾವು ವಚನ ಶೂರರು... ಪಾರ್ಥಿವ ನಿಚಯವೇ ಭುಜ ಶೂರರು... ಅಚಲ ಧನು ಅನಿಬರನು ಭಂಗಿಸಿತು... ನಮಗೆ ಈ ವಿದ್ಯೆ ವೈದಿಕವೆ... ಇದು ಉಚಿತವಲ್ಲ... ನಮ್ಮ ಸಾಹಸ ರಚನೆಯನು ನೋಡುವರೆ... ಪಂಡಿತ ನಿಚಯವು ಇದಿರಲಿ ನಿಲಲಿ... ಅಲ್ಲಿ ವಿಸ್ಮಯವ ತೋರುವೆವು.

ಬ್ರಾಹ್ಮಣರ ಗುಂಪು–3 : ಈ ದ್ರೌಪದಿಯನು ಸಾಂಗ ವೇದ ಪದಕ್ರಮದ ಸರ್ವಾಂಗ ವಿಷಯದಲಿ... ಅಖಿಳ ಪೌರಾಣಂಗಳಲಿ... ಮೀಮಾಂಸೆಯೊಳ್... ಸ್ಮೃತಿ ತರ್ಕ ಶಾಸ್ತ್ರದಲಿ ಭಂಗಿಸುವೆವು... ವಾತ್ಸ್ಯಾಯನಾದಿ ಉಪಾಂಗ ವಿದ್ಯೆದಲಿ... ಆವಂಗದಲಿ ಎಮ್ಮ ನೋಡು.

(ಎಂದುದು ಬುಧಸ್ತೋಮ.)

ಬ್ರಾಹ್ಮಣರ ಗುಂಪು–1 : ಭರತದಲಿ... ವೈದ್ಯದಲಿ... ಕಾವ್ಯ ಸುವಿರಚಿತ ಅಲಂಕಾರದಲಿ... ಗಜ ತುರಗ ಲಕ್ಷಣದಲಿ... ಸಮಾಹಿತ ಮಂತ್ರ ತಂತ್ರದಲಿ... ಸರಸ ಕವಿತಾ ರಚನೆಯಲಿ... ವಿಸ್ತರದ ಉಪನ್ಯಾಸದಲಿ ಭೂಪತಿ ನಮ್ಮನು ಕರೆಸಿ ನೋಡಲಿ.

(ಎಂದರು ದ್ವಿಜರು ತಮತಮಗೆ...)

ಬ್ರಾಹ್ಮಣರ ಗುಂಪು–4 : ಅಲ್ಲದಿರ್ದರೆ... ಶೋಧಿಸಿದ ತನಿ ಬೆಲ್ಲವಿಕ್ಕಿದ ಹೂರಿಗೆಯ ಮೆದೆಯಲ್ಲಿ... ಪರಡಿಯ ಶಾವಿಗೆಯ ಪರಿಪರಿಯ ಪಾಯಸದ ಮಲ್ಲಿಗೆಯ ತತ್ ಸವಿಯ ಮಂಡಿಗೆಯಲ್ಲಿ... ನವ ಘೃತ ಸೂಪ

ದಂಶಕದಲ್ಲಿ ನಮ್ಮನು ನೋಡಲಿ.

(ಎಂದುದು ಧೂರ್ತ ವಟು ನಿಕರ... ರಸದ ಹೊರಲೇಪದಲಿ ಹುದುಗಿದ ಮಿಸುನಿಯಂತಿರೆ... ಜೀವಭಾವ ಪ್ರಸರದೊಳಗೆ ಅವಲಂಬಿಸಿದ ಪರಮಾತ್ಮನ ಅಂದದಲಿ ಎಸೆವ ವಿಪ್ರಾಕಾರದಲಿ ರಂಜಿಸುವ ಭೂಪತಿ... ತತ್ಸಭಾ ಸದ್ವಿಸರ ಮಧ್ಯ ದೊಳಿರ್ದು... ಈ ಮಹಾಧ್ವನಿಯ ಕೇಳಿದನು. ತಮ್ಮನನು ನೋಡಿದನು... ಸನ್ನೆಯ ಮಾಡಿದಡೆ... ಆ ಪಾರ್ಥ ಕೈಕೊಂಡನು... ಅವನಿಪಗೂಡಿ ಕುಂತಿಗೆ ಭೀಮಸೇನಂಗೆ ಮನದೊಳಗೆ ಎರಗಿ... ಕೂಡೆ ಕುಳ್ಳಿರ್ದ ಅಖಿಳ ವಿಪ್ರರ ನೋಡಿ... ಮೆಲ್ಲನೆ ಧೋತ್ರ ದರ್ಭೆಯ ಗೂಡ ಸಂವರಿಸುತ್ತ ಸಭೆಯಿಂದ ಎದ್ದನು.)

ಬ್ರಾಹ್ಮಣರ ಗುಂಪು–4 : ಏನು ಸಿದ್ಧಿಯ ಉಪಾಧ್ಯರೆ ಎದ್ದಿರಿ... ಇದೇನು ಧನುವಿಂಗಲ್ಲಲೇ... ಮನದ ಅಂಘವಣೆ ತಾನೇನು... ನಿತಂಬಿನಿಯ ಬಯಸಿದಿರೇ... ವೈನತೇಯನ ವಿಗಡಿಸಿದ ವಿಷವೇನು ಹಾವಡಿಗರಿಗೆ ಸದರವೊ... ಇದೇನು ನಿಮ್ಮ ಉತ್ಸಾಹ.

(ಎಂದುದು ಧೂರ್ತ ವಟುನಿಕರ.)

ಬ್ರಾಹ್ಮಣರ ಗುಂಪು–2 : ಮದುವೆ ಬೇಕೇ... ಶ್ರೋತ್ರಿಯ ಸ್ತೋಮದಲಿ ನಾವು ಕನ್ಯಾರ್ಥಿಗಳು ಎಂಬುದು... ನಿಜಾನ್ವಯ ವಿದ್ಯೆಯಲಿ ಪರೀಕ್ಷೆಗಳ ಕೊಡುವುದು... ಮದುವೆ ಅಹುದು... ಇದು ಭೂದೇವರಿಗೆ ಸೌಖ್ಯ ಪುಣ್ಯಪ್ರದವು... ನೀ ನೆನೆದುದು ಭಗೀರಥ ಯತ್ನ.

(ಎಂದುದು ಭೂಸುರ ವ್ರಾತ.)

ಅರ್ಜುನ : ನೀವು ಸೈರಿಸಿ... ನಿಮ್ಮ ಸದ್ಭಾವದಲಿ ಕಾರುಣ್ಯ ಅವಲೋಕನವುಂಟಲೇ... ನೀವ್ ರಚಿಸಿದ ಆಶೀರ್ವಾದ

ಶಕ್ತಿಯಲಿ ನಾವು ವಿಜಯರು... ಚಾಪಯಂತ್ರವಿದು ಆವ ಘನ.

(ಎಂದ ಅರ್ಜುನನ ಸಂಭಾವನೋಕ್ತಿಗೆ ನಿಲ್ಲದೆ... ಅವರು ತಮತಮಗೆ ಒದರಿದರು.)

ಬ್ರಾಹ್ಮಣರ ಗುಂಪು–2 : ಕ್ರಮಿತರು ಶುದ್ಧ ಭ್ರಮಿತ ಮೂಲನ ಅವಧರಿಸಿದಿರೆ... ಹಿರಿಯ ವಿಷ್ಣು ಕ್ರಮಿತರೇ... ದೀಕ್ಷಿತರೆ, ತಾನು ಧನುವಿಗೆ ಯತ್ನ ಮಾಡಿದಿರೆ... ಕ್ರಮವೆ ಇದು... ಕ್ಷತ್ರಿಯರನು ಆಕ್ರಮಿಸುವುದು ಸದ್ಧರ್ಮವೇ... ಉದ್ಭ್ರಮಿತನು ಇವ... ಈ ಶ್ರೋತ್ರಿಯರ ಸಭೆಗೆ ನೆರೆ ಹಳಿವ ತಹನು.

ಬ್ರಾಹ್ಮಣರ ಗುಂಪು–1 : ಹೋಗದಿರು.

(ಕೆಲರು ಎಂದು ಜರೆದರು.)

ಬ್ರಾಹ್ಮಣರ ಗುಂಪು–5 : ತಾನೇ ಬಲ್ಲನು.

(ಎಂದರು.)

ಬ್ರಾಹ್ಮಣರ ಗುಂಪು–2 : ವಿಪ್ರಸಭೆಗೆ ಅಪಹಾಸ್ಯವಹುದು.

(ಎಂದು ನುಡಿದರು.)

ಬ್ರಾಹ್ಮಣರ ಗುಂಪು–6 : ತಪ್ಪೇನು.

(ಎಂದು ಕಳೆದರು.)

ಬ್ರಾಹ್ಮಣರ ಗುಂಪು–7 : ಭದ್ರಾಕಾರನು ಈತಂಗೆ ಧನು ಅಳುಕುವುದು ಭಾಗ್ಯಮುಖನು.

(ಎಂದುದು ಬುಧಸ್ತೋಮ. ತೊಟ್ಟ ಹೊಸ ಯಜ್ಞೋಪವೀತದ... ನೊಸಲಲಿ ಮಟ್ಟಿ... ಕುಶೆಯ ಕರಡಿಗೆ... ಕಟ್ಟಿಯಿರುಕಿದ ಕಕ್ಷೆ... ಬೆರಳಲಿ ಮುರಿದ ದರ್ಭೆಗಳ... ಉಟ್ಟ ಬಾಸರ ಬಳಲು ಗಚ್ಚೆಯಲಿ ನಟ್ಟವಿಗನು... ಅಟ್ಟಹಾಸದ ಜನದ ನಗೆಗಳ ಸಭೆಯಲಿ ಒಸರಿಸಿ ಮೆಲ್ಲನೈತಂದ...

ಸಕಲ ಪೃಥ್ವೀಶ್ವರರು ತಿರುಗಿ ಕಂಡರು... ಗಹಗಹಿಸಿದರು.)

ರಾಜ ಪರಿವಾರ–1 : ಇದೇನು ಅರೆಮರುಳೊ... ಜಡನೋ... ವಿಪ್ರವೇಷಚ್ಛನ್ನ ಸುರಪತಿಯೊ... ತಾವು ಮರುಳುಗಳು... ಅಕಟ, ಮದನನ ಸರಳ ಮರು ಮೊನೆಗೆ ಆವನ ಅಂತಃಕರಣ ನೆರೆ ಕಳವಳಿಸದೆ.

(ಎಂದರು ನೆರೆದ ಸಭೆಯೊಳಗೆ.)

ರಾಜ ಪರಿವಾರ–2 : ತನಗೆ ನೆಗಹಲ್ಕೆ... ಧನು ಕೃಷ್ಣಾಜಿನವೊ... ಸಾಲ ಗ್ರಾಮದೇವರೊ... ವಿನುತ ತುಳಸಿಯೊ... ಕುಶವೊ... ದರ್ಭೆಯೊ... ಸಮಿಧೆಗಳ ಹೊರೆಯೊ... ನೆನೆದ ತಿಲವೋ ಮೇಣ್ ಇದು ಔಪಾಸನದ ಕೊಳವಿಯೊ... ಬಣಗು ವಿಪ್ರನ ನೆನಹ ನೋಡಿರೆ... ದ್ರೌಪದಿಯ ಸೌಭಾಗ್ಯ ಘನವಲಾ.

ರಾಜ ಪರಿವಾರ–3 : ನಮಗೆ ಗಜ ತುರಗ ಶಸ್ತ್ರಾಸ್ತ್ರಂಗಳ ಅಂಗವಿದು ಅರಿತವು... ವಿಪ್ರಂಗೆ ಅಂಗ ವೇದಪುರಾಣ ತರ್ಕಸ್ಮೃತಿ ಸುವಿದ್ಯೆಗಳು... ಅಂಗವಂಗಿಗೆ ಅಸಾಧ್ಯ ವಾದುದನು ಅಂಗಿಗೆ ಒಡಬಡುವುದೆ... ದ್ವಿಜಾತಿಗೆ ಸಂಗತ ಅನುಷ್ಠಾನಪರ.

(ಎಂದುದು ನೃಪಸ್ತೋಮ... ಅತ್ತ ಕಾಂತಾ ಬಹಳ ಪಾರಾವಾರ ಹುಬ್ಬಿನ ವಿಹೃತಿಗಳ ಲಹರಿ ಮಸಗಿದುದು... ತೆರೆಮಾಲೆಗಳ ಬೆಳುನಗೆಯ ಬುದಬುದದ ಗಹಗಹಿಕೆ... ಮಿಗೆ ಅಟ್ಟಹಾಸದ ರಹಣಿಗಳ ರಭಸದ ವಿಡಂಬದ ವಿಹರಣದ ಅಚಲ ದೃಷ್ಟಿಗಳ ಮರಿಮೀನ ಹೊಳಹುಗಳ...)

ಸಖಿಯರು–1 : ಇತ್ತ ನೋಡೌ ತಾಯೆ, ಹಾರುವರತ್ತ... ಗಡ್ಡದ ಉಪಾಧ್ಯರನು... ತಾವು ಧನುವನು ಎತ್ತುವರು ಗಡ ... ತಿಮಿಂಗಿಲನ ಎಸುವರು ಗಡ... ಹೊತ್ತುಗಳೆವರೆ ಲೇಸು...

ಬಳಿಕ ವಿಪ್ರರು ಇನ್ನು ಉತ್ತಮರಲಾ.

(ಎನೆ... ತಲೆಗುತ್ತಿ ಮಹೀತಳವ ಉಂಗುಟದೊಳು ಔಕುತ ನಾಚಿದಳು.)

ಸಖಿಯರು–2 : ಎಲವೊ ಮಟ್ಟಿಯ ಮದನ... ದರ್ಭೆಯ ತಿಲದ ಮನ್ಮಥ... ವಿಮಲ ಧೋತ್ರದ ತಳಿರುಗಾಸೆಯ ಕಾಮ... ಕೃಷ್ಣಾಜಿನದ ಕಂದರ್ಪ... ನಳಿನಮುಖಿಯನು ವರಿಸು ಬಾ... ಎಲೆಯಕ್ಕ ಕೇಳೌ, ನಿನಗೆ ಅಳವಡುವನು... ಆವು ತಲೆವಿಡಿವೆವು ನೋಡು.

(ಎಂದರು ನಗುತ ಚಪಲೆಯರು)

ಕೃಷ್ಣ : ಹಲಾಯುಧ, ಅದೆ ನೋಡು... ವಿಪ್ರ ಓಘದಲಿ... ಮೇಘದ ಹೊದರುಗಳ ಹರಿದಶ್ವನಂತಿರೆ ವಿಪ್ರವೇಷದಲಿ ಪಾರ್ಥನ ಬರವು... ವಸುದೇವನ ಆಣೆ ಎಂದುದಕೆ ತಪ್ಪದಲ್ಲೆ ವಿದಿತವೇ... ಸಭಾ ಮಧ್ಯದಲಿ ಬರುತಿರ್ಪಾತನು ಅರ್ಜುನನು. ಜನಪನೋ... ಭೀಮಾದಿಗಳೊ... ತಜ್ಜನನಿಯೋ... ತಾವೆಲ್ಲ ಭೂಸುರ ಜನದ ಸಾಮೀಪ್ಯದಲಿ ಸಭೆಯೊಳಗೆ ಇರ್ದರು.

(ಎನೆ ಕೇಳ್ದು...)

ಬಲರಾಮ : ನಿನಗೆ ಇದು ಎಂತು ಅರಿತೆ... ಅವರು ಎಂತು ಅರಗಿನಮನೆಗೆ ತಪ್ಪಿದರು... ಶಿವ... ನೀನು ಎನಿತು ಮಾಯಾಸಿದ್ಧನು.

(ಎಂದನು ನಗುತ ಬಲರಾಮ... ಅವನಿಪತಿ ಕೇಳು, ಇತ್ತಲು ಈ ಪಾರ್ಥಿವರ ಪರಿಹಾಸವನು... ಕಾಂತಾ ನಿವಹದಲಿ ನಿಬ್ಬರದ ನುಡಿಗಳನು... ಆ ಮಹೀಸುರರ ವಿವಿಧ ಕಟು ಮಧುರೋಕ್ತಿ ವಿನ್ಯಾಸವನು ಕೇಳುತ... ಮುಗುಳು ನಗೆಯಲಿ ನವಮದದ್ವಿಪ ಗತಿಯ ಗರುವಾಯಿಯಲಿ ನಡೆತಂದ.)

ರಾಜ ಪರಿವಾರ–4: ಇವನ ಗತಿ.. ಮುಖಚೇಷ್ಟೆ.. ಭಾವೋತ್ಸವ ವಿಲಾಸ.. ಉಪೇಕ್ಷೆಭರ... ಅಂಘವಣೆ.. ಗರುವಿಕೆ.. ಗಮಕ ಭಾವ...

ಅಭೀತಿ... ಭುಲ್ಲವಣೆ..ಇವನ ವಿಮಲಕ್ಷತ್ರ ವಿಕ್ರಮ..ಇವನ ಕೊಂಡಯತನವು... ಇವೇ ಸಾಕು... ಇವನು ಅಘಾಟದ ವೀರನು.

(ಎಂದರು... ಬರುತ ಭೀಷ್ಮ... ದ್ರೋಣ... ಕೃಪರಿಂಗೆ ಮನದೊಳಗೆ ಎರಗಿದನು... ಯಾದವರ ಅರಸ ಹಂತಿಯ ಹರಿಯನು ಅಕ್ಷಿಯಲಿ ಅಭಿವಂದಿಸಿದನು... ಸುರಪತಿಗೆ.. ಗುಹ.. ಗಣಪ.. ದಿಕ್ಪಾಲರಿಗೆ.. ರುದ್ರಾದಿತ್ಯ..ವಸುಮುಖ್ಯರಿಗೆ ಮಣಿದನು... ಅಗ್ಗದ ಚಾಪವಿದ್ದ ಎಡೆಗೆ ಬಂದನು... ಮೊದಲಲಿ ಅಂಬುಜಭವನನ... ಆ ಮಧ್ಯದಲಿ ಮಧುಸೂದನನ... ಆ ಬಿಲು ತುದಿಯಲಿ ಅಗ್ಗದ ನೀಲಲೋಹಿತನ ಆಹ್ವಾನಿಸಿದನು.)

ಅರ್ಜುನ : ಇದು ಮಹಾಭೂಮಿಪರ ಬಿಂಕವನು ಒದೆದ ಧನುವೇ ಪೂತುರೆ.

(ಎನುತ.. ಎತ್ತಿದನು... ಬಾಗೊತ್ತಿದನು... ಕೊರಳಿಗೆ ತಿರುವ ತೊಡಿಸಿದನು... ಹೊಯ್ದು ತಿರುವನು ಕಿವಿವರೆಗೆ ಸೆಳೆದು ಒಯ್ದನು.)

ಅರ್ಜುನ : ಇದು ಹದ ಬಿಲ್ಲಲಾ... ಬಲು ಹೊಯ್ದುದು... ಅಕಟಾ, ಮಾಗಧಾದಿಗಳು ಬರಿದೆ ಹೆದರಿತು... ಎನಗೆ ಹೆಸರು ಐದಬೇಕೆಂದು ಇದರೊಳಗೆ ಕೈದೆಗೆದರೈಸಲೇ.

(ಎನುತ...ಐದು ಬಾಣವ ಕೊಂಡು ಯಂತ್ರದ ಹೊಳಹನು ಈಕ್ಷಿಸಿದ... ತೂಗಿ ಕಿವಿವರೆಗೆ ಉಗಿದು..ಅಂಬಿನಲಿ ಯಂತ್ರವ ತಾಗಿಸಿದನು... ಯಂತ್ರಭೇದದಲಿ ಪಾರ್ಥನ ಲಾಗು ವೇಗವನು ಆರು ಬಲ್ಲರು.)

ಸಭಿಕರು : ಜಾಗು... ಧಣು... ಧಣು... ಪೂತು... ಕಾರ್ಮುಕ ಯೋಗ ಸಿದ್ಧನೆ... ಮಝುರೆ.. ಕೋದಂಡ ಆಗಮ ತ್ರಿಪುರಾರಿ.

(ಎಂದುದು ವಂದಿ ಸಂದೋಹ... ವಿಪ್ರ ನಿಕಾಯ... ಆಯ್ ಎನುತ ಬೊಬ್ಬಿರಿದು...)

ಬ್ರಾಹ್ಮಣರೆಲ್ಲರು : ಕಮಲಮುಖಿ ನಿರ್ದಾಯದಲಿ ಹಾರುವಗೆ ಸೇರಿದಳು.

(ಎನುತ ಹರುಷದಲಿ ಕುಣಿದುದು... ಆ ಯುವತಿಜನ ಜಲಧಿ ಮಸಗಿತು... ರಾಯರು ಬಾಯ ಮೌನದ... ಬೆರಳ ಮೂಗಿನ... ಬಿಗಿದ ಬೆರಗಿನ... ಹೊತ್ತ ದುಗುಡದಲಿ ಇದ್ದರು... ಅಲ್ಲಿ ನಿಸ್ಸಾಳ ತತಿ ಹೆಕ್ಕಳದ ಪೆರ್ಚಿನೊಳು ಮೊಳಗಿದವು... ದಿವಿಜಾವಳಿಯ ದುಂದುಭಿ ರವದಲಿ... ಉಬ್ಬಿದ ಸಾಧುವಾದಗಳ ಕಳಕಳದ ಕೊಲ್ಲಣಿಗೆಯಲಿ... ಪೂವಳೆಯ ಪೂರದ ಹರಹಿನಲಿ ಜನ ಮುಳುಗಿತು... ಅದ್ಭುತ ರಭಸವು ಜಗತ್ರಯವ ಅಳ್ಳಿರಿದುದು... ಅರಸನ ಆಜ್ಞೆಯಲಿ ಅಂಗರಕ್ಷಣೆಗೆ ಕಿತ್ತ ಸುರಗಿಯ ವೀರ ಭಟರು ಅರುವತ್ತು ಸಾವಿರವೈದಿ ಪಾರ್ಥನ ಸುತ್ತು ಮುತ್ತಿದರು... ಇತ್ತ ಮಹಿಳಾಜನದ ಮೌಳಿಯ ಮುತ್ತು... ಕುಸುಮಾಯುಧನ ಥಟ್ಟಿನ ಮತ್ತ ಗಜ ದ್ರೌಪದಾದೇವಿ ಅಲ್ಲಿಗೆ ಐತಂದಳು... ಕಂಚುಕಿ ನಿಕರ ಮುಂದೆ ಸಂದಣಿಯ...)

ಕಂಚುಕಿಗಳು : ತೊಲತೊಲಗು... ಮನ್ಮಥನ ಹೊಗರಿಟ್ಟ ಅಲಗು ಬರುತಿದೆ ಸಾರು ಸಾರು...

(ಎಂದು ಉಲಿದು ಹೊಯ್ದುದು... ನಳಿನಮುಖಿ ದಂಡಿಗೆಯೊಳು ಐತಂದು... ಈತನ ಹೊರೆಯೊಳು ಇಳಿದಳು... ಆಗಳೆ ಕಳಕಳದಲಿ ಹರುಷ ಲಜ್ಜೆಯಲಿ ಒಳತೋಟಿ ಮಸಗಿತು... ಲಲಿತ ಮಧುರಾಪಾಂಗದಲಿ ಮುಕ್ಕುಳಿಸಿ ಕಂಗಳು ತಣಿಯವು... ಉಬ್ಬಿದ ಪುಳಕಜಲದಲಿ ನಿತಂಬಿನಿಯ ಮೈ ಮುಳುಗಿ ಮೂಡಿತು... ತಳಿತ ಲಜ್ಜಾಭರಕೆ ಕುಸಿದು ಅಂತಃಕರಣ ಅವ್ವಳಿಸಿತು... ಆಂಗಿಕ ಲುಳಿತ ಸಾತ್ವಿಕ ಭಾವವು ಮಾನಿನಿಯ ಅವಗಡಿಸಿತ್ತು... ಧರಣಿಪತಿ ಕೇಳ್, ಬಹಳ ಲಜ್ಜಾಭರದ ಭಯದಲಿ ಬೆಮರಿಡುತ... ಕುಚ ಭರದಿ ಮೇಲುದು ಜಾರೆ ಜೋಡಿಸಿ ನಿಮಿರಿ... ನಡನಡುಗಿ ತರುಣಿ ನಿಜತನು ಪರಿಮಳದಲಿ

ಉರೆ ಹೊರೆದ ಹೂವಿನ ದಂಡೆಯನು ನಿಜವರನ ಕೊರಳಲಿ ಹಾಯ್ಕಿದಳು... ಸುರಸ್ತೋಮ ಜಯವೆನೆ...)

(ಕೊರಳ ಹೂವಿನ ದಂಡೆಯಲಿ... ನಿಜಕರದ ಭಾರಿಯ ಧನುವಿನಲಿ... ತನು ಪರಿಮಳದ... ನಿಟ್ಟೆಸಳುಗಂಗಳ ಕೆಲದ ಯುವತಿಯಲಿ... ವರನ ಪರಿ ಹೊಸತಾಯ್ತು.)

ಸಖಿಯರು–3 : ಹರನ ಹಗೆ ಹಾರುವಿಕೆಯನು ಹೊತ್ತನು... ನಮ್ಮ ಅರಸಿ ನೆರೆ ಹಾರುವಿತಿ.

(ಎಂದರು ಚಪಲೆಯರು ನಗುತ... ಜನಪ ಕೇಳ್ಳೈ, ಯುವತಿ ಯೊಡನೆ ಅರ್ಜುನನ ರಾಜಮಂದಿರಕೆ ತಂದರು... ಅಭ್ರದೊಳು ಅಮರಪತಿ ಸಹಿತ ಅನಿಮಿಷಾವಳಿ ಹರಿದುದು.)

❍

29. ಹತಾಶೆಗೊಂಡವರ ಹೋರಾಟ

(ಆದಿಪರ್ವ : ಹದಿನೈದನೆಯ ಸಂಧಿ : ಪದ್ಯ 37 ರಿಂದ 52)

ಪಾತ್ರಗಳು

ದುರ್ಯೋಧನ : ಧೃತರಾಷ್ಟ್ರ ಮತ್ತು ಗಾಂಧಾರಿಯ ಮಗ. ಹಸ್ತಿನಾವತಿಯ ಯುವರಾಜ.

ರಾಜ ಪರಿವಾರ : ದುರ್ಯೋಧನನ ಸಂಗಡಿಗರು.

ದ್ರುಪದನ ಪರಿವಾರ : ದ್ರುಪದನ ಸಂಗಡಿಗರು.

ಅರ್ಜುನ : ಪಾಂಡುರಾಜ ಮತ್ತು ಕುಂತಿಯ ಮಗ.

ಕರ್ಣ : ಸೂರ್ಯದೇವ ಮತ್ತು ಕುಂತಿಯ ಮಗ.

ಭೀಮ : ಪಾಂಡುರಾಜ ಮತ್ತು ಕುಂತಿಯ ಮಗ.

ಹತಾಶೆಗೊಂಡವರ ಹೋರಾಟ

ಜನಪ ಕೇಳೈ, ಯುವತಿಯೊಡನೆ ಅರ್ಜುನನ ರಾಜಮಂದಿರಕೆ ತಂದರು... ಅಭ್ರದೊಳು ಅಮರಪತಿ ಸಹಿತ ಅನಿಮಿಷಾವಳಿ ಹರಿದುದು... ಅಸೂಯದ ಮನದ..ದುಗುಡದ ಮುಖದ..ವಿನತ ಮಕುಟದ.. ಕೈಯ ಗಲ್ಲದ..ಕನಲಿಕೆಯ ಕೊನರುಗಳ ಕೌರವರಾಯ ಖತಿಗೊಂಡ.

ದುರ್ಯೋಧನ : ಏನು ಹದ... ಪಾಂಚಾಲ ಮಾಡಿದ ಮಾನಭಂಗವ ಕಂಡಿರೇ... ಕಾನೀನ..ಶಕುನಿ.. ಜಯದ್ರಥ..ಅಶ್ವತ್ಥಾಮ ಮೊದಲಾದ ಮಾನನಿಧಿಗಳು ಕಂಡಿರೇ... ಮದದಾನೆಗಳು ನೀವ್ ಕಂಡಿರೇ... ಹದನು ಏನು.

(ಎನುತ ಕುರುರಾಯ ತನ್ನವರ ಮೂದಲಿಸಿದನು.)

ದುರ್ಯೋಧನ : ಹಳೆಯ ಹುಲು ಧನು... ಇದನು ಹಾರುವ ಸೆಳೆದ ಗಡ... ಕೌಳಿಕದ ಯಂತ್ರವ ಗೆಲಿದ ಗಡ... ಮಹೀಶ್ವರರ ಗರುವಾಯಿ ಕೆಡಿಸಿದ ಗಡ... ನಳಿನಮುಖಿ ತಿರುಕುಳಿಯ ಕೊರಳಲಿ ದಂಡೆಯನು ಹಾಯ್ಕಿದಳು ಗಡ... ನೀವು ಒಲಿದು ಮದುವೆಯ ಮಾಡಿ.

(ಎಂದನು ಬೈದು ಭೂಮಿಪರ.)

ದುರ್ಯೋಧನ : ನೆರೆದ ಧರಣೀ ಮಂಡಲೇಶ್ವರರು ನೀವ್ ಭಂಡರೋ... ಅಕಟ, ನಿಮ್ಮಯ ಹೆಂಡಿರನು ಹಾರುವನ ಹೆಂಡತಿಗೆ ಬಳುವಳಿಯ ಕೊಡಿ... ಗಂಡುಗಲಿಗಳ ನಿಮ್ಮನು

ಅನಿಬರ ಕಂಡು ಉಪೇಕ್ಷಿಸಿ ಯಾಚಕನ ಕೈಕೊಂಡಳು...
ಇದಕೆ ಏನುಂಟು ನಿಮಗೆ ಮನದಲಿ ವಾಸಿ.

ರಾಜ ಪರಿವಾರ–1 : ವಾಸಿಗಳನು ಅರಸುವಡೆ... ದ್ರುಪದನ ಮೀಸಲು ಅಡಗನು ಹದ್ದು ಕಾಗೆಗೆ ಸೂಸಿ... ವಿಪ್ರನ ಬಡಿದು ಬಿಡುವುದು... ಮತ್ತೆ ತಿರಿದು ಉಣಲಿ... ಆ ಸರೋಜಾನನೆಯ ನಮ್ಮ ವಿಲಾಸಿನಿಯ ವೀಧಿಯಲಿ ಕೂಡುವದೈಸಲೇ.

(ಎನುತ ನೃಪ ನಿಕರ ಒಡನೊಡನೆ ಗರ್ಜಿಸಿತು.)

ರಾಜ ಪರಿವಾರ–2 : ಏಳಿ... ಲಗ್ಗೆ ಹತ್ತಲಿ... ಹಿರಿಯ ಅಗಳಿನ ಅಗಲವ ಪದಹತ ಧೂಳಿಯಲಿ ಹೂಳಿ ಕಳೆಯಲಿ... ತೆನೆಯ ಸರಿಸದಲಿ ಹರಿದು ಹತ್ತಲಿ... ಕೋಲು ಗುಂಡಿನ ಹತಿಗೆ ಹುರಿಯೊಡೆದು ಆಳ ಹೊಯ್ ಹೊಯ್..

(ಎನುತ ಸಕಲ ನೃಪಾಳಿ ಗರ್ಜಿಸಿ... ಪಾಂಚಾಲ ಪಟ್ಟಣವ ಮುತ್ತಿದುದು... ಕೂಡೆ ಗಜಬಜವಾಯ್ತು... ನಾಡ ಗಾವಳಿ ಹರಿದುದು... ವಿಪ್ರ ಸಭೆ ತೆಗೆದು ಓಡಿತು... ಈ ಪಾಂಡವರು ಕುಲಾಲಭವನದಲಿ ಬಂದು ನೋಡುತಿರ್ದರು... ಲಗ್ಗೆ ಅಬ್ಬರವು ದಿಗಂತವನು ಈಡಿರಿದುದು... ಕೈಮಾಡಿ ಕೋಟೆಯನು ಇಳಿದು ಆಳುವೇರಿಯಲಿ ಬೆರಸಿದರು... ಹೊಗುವ ಚೂಣಿಯ ಹಲ್ಲಣಿಸಿದರು...

ಸರಿಸಕೆ ಅಡರುವ ಬಿಲ್ಲ ಬಿರುದರ ಸಾಲ ಸಬಳಿಗರು ಮೆಟ್ಟಿ ತಿವಿದರು... ಝಲ್ಲರಿಯ ಝಾಡಿಗಳ ವಾದ್ಯದ ಘಲ್ಲಣೆಯ ದಳ ನೆರೆದುದು... ಪಾಂಚಾಲ ನಾಯಕರು ಅಲ್ಲಿಯದಲ್ಲಿ ಮುತ್ತಿಗೆ ತೆಗೆಸಿದರು... ಚೂಣಿ ಮುರಿದು ಐತರಲು... ಕುರುಪತಿಯ ಬಹಳ ಕ್ಷೋಣಿಯಲಿ ಕರ್ಣ ಮೊದಲಾಗಿ ಥಟ್ಟಿನ ಹೂಣಿಗರು ಹುರಿಗೊಂಡು ಕವಿದರು...

ಸಾಣೆ ಅಲಗಿನ ಸರಿಗೆ ಪರಬಲವು ಅಡಿ ಮಿಡುಕದ ಆಣೆಯಿಟ್ಟವೊಲು ಕ್ಷೀಣ ಬಲ ದ್ರುಪದ ಪರಿವಾರ ಓಸರಿಸಿ ತೆಗೆದುದು.)

ದುರ್ಯೋಧನನ ಸೇನೆ : ಮೊದಲ ಲಗ್ಗೆಯ ಧೂಳಿಯೇ... ದ್ರೌಪದಿಯ ಬೈತಲೆಗೆ ಅಮಲ ಸಿಂಧೂರದ ಸುವಿಸ್ತರವಾಗದಿರ್ದಡೆ ರಾಯನಾಣೆ.

(ಎನುತ ಮದಮುಖರು ಮುಂಕೊಂಡು ದುರ್ಗವ ಬೆದರಿಸಿತು... ಬೇರೇನು... ದ್ರುಪದನ ಸದನ ಸೀಮೆಯ ಬೆರಸಿ... ರಾಜಬೀದಿಯಲಿ ಹೊಯ್ದರು.)

ದ್ರುಪದನ ಕಡೆಯವರು : (ಅರ್ಜುನನಲ್ಲಿ ಮೊರೆಯಿಡುತ್ತಾರೆ.)

ಏಳು ಮನ್ನೆಯ ಗಂಡನಾಗು... ನೃಪಾಲ ಮದುವೆಯ ಮನೆಗೆ ರಾಯರ ಧಾಳಿ ಬಿದ್ದಿನವಾಯ್ತು... ನಡೆ... ಬೀಯಗರ ಸಂತೈಸು ಏಳು.

(ಎನಲು ಅರ್ಜುನ ಕಳಕಳವನು ಕೇಳಿದನು.)

ಅರ್ಜುನ : ಹೊದೆ ಅಂಬುಗಳ ತರ ಹೇಳು.

(ಎನುತ... ಭಟರ ಮುಂಗುಡಿಯ ಕವಿದು ಎಚ್ಚು ಮುರಿದನು... ಅದು ಬಳಿಕ... ಕಲ್ಪಾಂತ ಮೇಘದ ಮೊದಲ ಮಳೆ ಎನೆ... ಅಂಬಿನ ಹೊದರು ಕವಿದುದು... ರಾಯದಳ ರೌಕುಳದ ರಕ್ತದಲಿ ಹುದುಗಿತು... ಕರ್ಣಾದಿಗಳು ನೆರೆ ಬೆದರಿದರು... ಕೆದರಿದರು... ಮತ್ತೊಂದು ದೆಸೆಯಲಿ ಭೀಮ ಭಾರಿಯ ಮರನ ಕೊಂಬಿನಲಿ ಸದೆದು ಹೊಕ್ಕನು... ಮಾದ್ರೇಶ ಪವನಜನ ಉರುಬೆಯನು ತರುಬಿದನು.)

ಕರ್ಣ : ಫಲುಗುಣನ ಬಾಣವ ಮುರಿ.

(ಎನುತ ರಾಧೇಯ ಸಿಂಹನಾದದಲಿ ನಿಂದನು.)

ಭೀಮ : ಕರುಬರೋ... ಘನ ಯಂತ್ರಭೇದಿಯನು ಅರಿದು ಕಾಡುವ ಕುರುಡರೋ... ನೀವು ಇರಿತಕೆ ಅಂಘೈಸಿದಿರಿ.

(ಎನುತ ಕೈಕೊಂಡನಾ ಭೀಮ... ಪವಮಾನಸುತನು ತುರಗ ರಥ ಸಾರಥಿಗಳನು ಹೊಯ್ದು ಒರಸಿದನು... ಉಬ್ಬರದ ಭಯದಲಿ ಶಲ್ಯ ಹಿನ್ನೆಲೆಗೆ ಹಿಮ್ಮೆಟ್ಟಿದನು... ಕಲಿ ಕರ್ಣನು ನರನ ಶರಹತಿಗೆ ಅಳುಕಿ...)

ಕರ್ಣ : ವಿಪ್ರರು ಅವದಿರು... ನಮ್ಮ ವಿಗ್ರಹಕೆ ಸರಿಯೆ.

(ಎಂದು ಖಾತಿಯಲಿ ಮೋರೆಯ ಮುರುಹಿದನು.)

ಕರ್ಣ : ಅರಸ, ನಡೆ... ದ್ರುಪದನ ಕಪಾಲದಲಿ ಮಾನಚ್ಯುತಿ ಇರಲಿ... ಮಹೀಸುರವರರೊಡನೆ ಖತಿಯೇಕೆ... ಹಸ್ತಿನಾಪುರಕೆ ತೆಗೆವುದು... ನೃಪವರ್ಗವನು ನೆರಹುವುದು... ಬಂದು ದ್ರುಪದನ ಲಲಾಟದ ಬರಹವನು ಒರಸುವುದು ಕೇಳು.

(ಎಂದು ಕರ್ಣ ಕುರುಪತಿಗೆ ನುಡಿದನು.)

ದುರ್ಯೋಧನ : ಅಹುದು... ಕರ್ಣನ ಮಾತು... ಈ ಹೊತ್ತಿನಲಿ ರಣ ವಿಹಿತವಲ್ಲ... ಬಹಳ ಬಲವು ತೆಗೆಯಲಿ... ಔಕಿದಡೆ ತಮಗೆ ವಿಪ್ರ ವಧೆ ತಪ್ಪದು... ಈಸರಲಿ ಮಹಿಮೆ ಮೀಸಲು ಹೋಗದು... ಅಹಿತ ದರ್ಪವ ಮುಂದೆ ನೋಡಲುಬಹುದು.

(ಎನುತ ಕುರುಪತಿ ಹಸ್ತಿನಾಪುರಿಗೆ ತಿರುಗಿದನು.)

❍

30. ದ್ರೌಪದಿಯು ಪಾಂಡವರೈವರ ಮಡದಿಯಾದುದು

(ಆದಿಪರ್ವ : ಹದಿನಾರನೆಯ ಸಂಧಿ : ಪದ್ಯ 1 ರಿಂದ 13)

ಪಾತ್ರಗಳು

ಪುರಜನ	:	ಛತ್ರಾವತಿ ನಗರದ ಪ್ರಜೆಗಳು.
ಅರ್ಜುನ	:	ಪಾಂಡುರಾಜ ಮತ್ತು ಕುಂತಿಯ ಮಗ.
ಕುಂತಿ	:	ಪಾಂಡವರ ತಾಯಿ.
ಧರ್ಮರಾಯ	:	ಪಾಂಡುರಾಜ ಮತ್ತು ಕುಂತಿಯ ಮಗ
ಭೀಮ	:	ಪಾಂಡುರಾಜ ಮತ್ತು ಕುಂತಿಯ ಮಗ.
ನಕುಲ	:	ಪಾಂಡುರಾಜ ಮತ್ತು ಮಾದ್ರಿ ಮಗ.
ಸಹದೇವ	:	ಪಾಂಡುರಾಜ ಮತ್ತು ಮಾದ್ರಿ ಮಗ.

ದ್ರೌಪದಿಯು ಪಾಂಡವರೈವರ ಮಡದಿಯಾದುದು

ಕೇಳು ಜನಮೇಜಯ ಧರಿತ್ರೀಪಾಲ, ಕೌರವ ನೃಪತಿ ಪಯಣದ ಮೇಲೆ ಪಯಣದಲೈದಿ ಹಸ್ತಿನಾಪುರವ ಹೊಕ್ಕನು... ಹೇಳಲೇನು... ಉಳಿದ ಅಖಿಳ ಧರಣೀಪಾಲಕರ ದುಮ್ಮಾನವನು... ಪಾಂಚಾಲ ದೇಶವ ಕಳೆದು ತಮ್ಮ ನಗರಿಗಳ ಹೊಕ್ಕರು... ಭೀತಿ ಹರಿದುದು... ರಾಯದಳ ಸಂಘಾತ ಸರಿದುದು... ಮತ್ತೆ ಸುಜನ ವ್ರಾತ ನೆರೆದುದು... ಅವನೀ ದೇವರ ಅಗ್ಗಳಿಕೆ ಮೆರೆದುದು... ವಾತಜನು ಮರಗೊಂಬಿನಲಿ ಮಾರಾತರನು ಮನ್ನಿಸಿ... ಕುಲಾಲ ನಿಕೇತನಕೆ ಬಂದು ಧರ್ಮಜನ ಚರಣದಲಿ ಎರಗಿದನು.

ಇತ್ತಲು ಅರ್ಜುನನು ಇನಸುತನ ಬೆಂಬತ್ತಿ ಮರಳಿದನು... ಜಯಲಕ್ಷ್ಮಿಯ ಕಟಾಕ್ಷದಲಿ ಅವನಿಪಾಲರ ಮುತ್ತಿಗೆಯ ತೆಗೆಸಿದನು... ಮತ್ತ ರಾಯರ ಬೆನ್ನಕಪ್ಪವನು ಎತ್ತಿದ ಉತ್ಸಹ ವದನದಲಿ... ಹೊಗರೆತ್ತಿದ ಅಕ್ಷಿಯ ಹೊಳಹಿನಲಿ ನೃಪಾಲಯವ ಹೊಕ್ಕನು.

ಪುರಜನ : ಇಂದು ಈತನ ಉದಯದೊಳು ಭೂಸುರ ಜಾತಿಗಾಯ್ತು ಅಗ್ಗಳಿಕೆ... ಇಂದು ಪಾರ್ಥಿವರು ಉಬ್ಬಟೆಯ ಆತರು... ಧನುವು ಇಂದು ಇವನ ವಶವಾಯ್ತು... ಸೋತು ತೆಗೆದ ಮಹೀಶ್ವರರ ಮಾತು ಏತಕದು... ಮಝು..ಪೂತು.

(ಎನುತ ಜನವು ಈತನನು ನೆರವಿ ನೆರವಿಯಲಿ ಕೊಂಡಾಡುತ ಇರ್ದುದು... ಈತನು ಗತಿಯ ಗರುವಿಕೆಯಿಂದ ಬಂದನು. ತರುಣಿಯ..).

ಅರ್ಜುನ : ನೀನು ಹೊರೆಗೆ ಬಾ.

(ಎಂದು ಕರೆದನು... ಸತಿಸಹಿತ ವಹಿಲದಲಿ ತಿರುಗಿದನು... ಇಂದುಮುಖಿಯನು ಕುಂಭಕಾರನ ಮಂದಿರದ ಹೊರಗಿರಿಸಿ... ಫಲುಗುಣ ಬಂದು ಕುಂತಿಯ ಚರಣ ಕಮಲದಲಿ ಮೈಯಿಕ್ಕಿದನು.)

ಅರ್ಜುನ : ತಾಯೆ ಬಿನ್ನಹ... ಇಂದು ಧರಣೀ ರಾಯರೆಲ್ಲರ ಗೆಲಿದು ನಾಯಕವನು... ಅನುಪಮಿತ ಮೌಲ್ಯವನು... ಅಮಲ ಮೌಕ್ತಿಕವ ತಂದೆನು... ತಾಯೆ ಚಿತ್ತೈಸಿದಿರೆ...

(ಎನೆ... ತನಿ ಹರುಷದಲಿ ಕಡೆವಾಯಿದಳು.)

ಕುಂತಿ : ಲೇಸಾಯಿತು ಐವರು ಕೂಡಿ ಭೋಗಿಪುದು.

ಅರ್ಜುನ : ಹಸಾದ.

(ಎನುತ್ತ ಕಮಲಾನನೆಯ ಅವ್ವೆಗೆ ಹೊಡವಂಡಿಸಿದನು.)

ಕುಂತಿ : ತನುಜ, ನೀ ತಂದ ಅಮಲ ಮೌಕ್ತಿಕ ಇದೆಯೊ... ಶಿವ... ತನಗೆ ನುಡಿ ತೊದಲಿಸಿತಲಾ... ನೀವು ಇನಿಬರು ಉಪಭೋಗಿಸುವುದು ಎಂದೆನು... ವನಿತೆ ಐವರಿಗೆ ಅರಸಿಯೇ... ಲೇಸು.

ಅರ್ಜುನ : ಜನನಿ, ನಿಮ್ಮ ನುಡಿ ತಪ್ಪದು... ಈ ವನಜಮುಖಿ ಎಮ್ಮೈವರಿಗೆ ಸತಿ... ವಿನುತ ಗುರುವಚನಾಂಬುನಿಧಿ ಮಕ್ಕಳಿಗೆ ಅಲಂಘ್ಯವಲೆ.

(ಎನೆ... ಯುಧಿಷ್ಠಿರ ನೃಪತಿ ಪಾರ್ಥನ ಕನಲಿದನು... ಕಲಿ ಭೀಮನು.)

ಭೀಮ : ಅಲ್ಲ.

(ಎಂದನು... ನಕುಲ ಸಹದೇವರು ಅರ್ಜುನಗೆ...)

ನಕುಲ/ಸಹದೇವ : ಅನುಚಿತ.

(ಎಂದರು.)

ಅರ್ಜುನ : ನೀವ್ ನಿಲ್ಲಿ... ಎಲ್ಲ ಧರ್ಮದ ಸಾರವನು ನೀವ್ ಬಲ್ಲಿರೈ... ಸಲೆ ಹೇಳ್ವುದು ಆವುದು... ಸಹದೇವ ನಕುಲರು ನಿಮಗೆ ಮಾತೇಕೆ... ಬಲ್ಲಿರಿ... ಅಖಿಳ ಆಮ್ನಾಯ ಭಾಷಿತದಲ್ಲಿ ನೋಡಲು ಧರ್ಮಶಾಸ್ತ್ರದೊಳೆಲ್ಲ ತಾಯಿಂದ ಅಧಿಕ ಗುರುವಿಲ್ಲ...

ಮಾತೃವಚನವು ಅಲಂಘ್ಯ... ಇದು ಧರ್ಮ ರಹಸ್ಯನಿಷ್ಠರಿಗೆ ವಿಖ್ಯಾತ ಪದ್ಧತಿ... ಲೋಕ ಯಾತ್ರಾ ಭೀತಿಯಲಿ ಭಯವೇಕೆ... ಏತಕೆ ಈ ಲೋಕಾನುಸರಣೆ... ಆವುದು ವಿಧೂತ ಕಿಲ್ಬಿಷವು ಎಂದನಾ ಪಾರ್ಥ... ಅದು ಧರ್ಮಾತಿಶಯವು... ಇಹಪರಕೆ ಕಡುಹಿತವು.

ನೀವು ಈ ಗರುವೆಗೆ ರಾಗ ಲೋಭವ್ಯಾಪ್ತಿಯಲಿ ಅಳುಪುವರೆ... ಸಲೆ ಧರ್ಮ ಆಗಮವನು ಆಚರಿಸುವದಲೇ ನಮ್ಮ ಅನುಷ್ಠಾನ... ಈಗಳ್ ಏನಿದು ಈ ಗುರು ವಚನ ಧರ್ಮತ್ಯಾಗವು... ಧರ್ಮವೇ ಉಪಭೋಗವು ಐವರಿಗೆ..

(ಎಂದು ಆ ಪಾರ್ಥ ಅವರನು ತಿಳುಹಿದನು.)

ಅರ್ಜುನ : ಸಂದೇಹಗಳ ಮಾಡದಿರಿ... ಇದರೊಳಗೆ ಖಯಖೋಡಿ ಇಲ್ಲ... ಧರ್ಮದ ಮೂಡಿಗೆಯೊಳು ಅಂಬು ಇರಲಿ... ಬಹಿರಂಗದಲಿ ಬಳಸದಿರಿ... ಗೂಡು ಹಲವಿಹ ಒಂದು ಪಕ್ಷಿ... ಇದನು ಆಡಬಾರದು... ಸಾಕು, ನೀವು ಚಿಂತಿಸಬೇಡಿ.

(ಎಂದು ಕಲಿಪಾರ್ಥ ಅನಿಬರನು ತಿಳುಹಿದನು... ತಮ್ಮೊಳಗೆ ಅನುಮತ ಅದುದು... ತತ್ಸೋದರರು ಐವರು ಸೌಹಾರ್ದದಿಂದ ತಳೋದರಿಯನು ಒಲಿದು ಅಂಗೀಕರಿಸಿದರು.)

31. ಕೃಷ್ಣನೊಡನೆ ಪಾಂಡವರ ಮಿಲನ

(ಆದಿಪರ್ವ : ಹದಿನೇಳನೆಯ ಸಂಧಿ : ಪದ್ಯ 1 ರಿಂದ 13)

ಪಾತ್ರಗಳು

ಕುಂತಿ : ಪಾಂಡವರ ತಾಯಿ.

ಕೃಷ್ಣ : ದ್ವಾರಾವತಿ ಪಟ್ಟಣದ ಒಡೆಯ. ಪಾಂಡವರ ಹಿತಚಿಂತಕ.

ಕೃಷ್ಣನೊಡನೆ ಪಾಂಡವರ ಮಿಲನ

ಕೇಳು ಜನಮೇಜಯ ನೃಪತಿ, ಪಾಂಚಾಲಸುತೆಯ ವಿವಾಹ ವಾರ್ತೆಯ ಕೌರವರು ಕೇಳಿದರಲ್ಲೈ... ಮರುಗಿದರು... ಮರುಕೊಳಿಸಿ ಆಳ ನೆರಹಿದನು... ಅಖಿಳ ದಳ ದೆಖ್ಖಾಳವನು ನೋಡಿದರು... ಭೂಮೀಪಾಲ ಸಂಕುಲ ಸಹಿತ ದ್ರುಪದ ಪುರಿಗಾಗಿ ಬಂದರು... ಎಲೆ ಜನಮೇಜಯ ಕ್ಷಿತಿಪ, ಏನ ಹೇಳುವೆ ನಿನ್ನವರ ಜಯಮಾನವನು... ಮತ್ತೊಂದು ಪೈಕದ ಮಾನಭಂಗ ಸ್ಥಿತಿಯನು... ಭಾನುವಿನ ಮಂಜಿನ... ಶಿಲೋಚ್ಚಯ ಸಾನುವಿನ ವಜ್ರದ... ತರಕ್ಷುವ ಧೇನುವಿನ ಹೋರಟೆಯ ಹವಣದು ಭೂಪ ಕೇಳೆಂದ...

ಭೀಮ ಪಾರ್ಥರ ಶರ ನಿದಾಘದಲಿ ಆ ಹೆಬ್ಬಲ ಮುರಿದುದು... ವಿಘಾತಿಯಲಿ ಪಟುಭಟರು ಒರಗಿದರು... ಗಜ ಹಯದ ಒರತೆ ಬತ್ತಿತು... ನಿಚ್ಚಟರು ಉರುಕುಗೊಂಡರು... ಆಚೆಯ ದೊರೆಗಳ ಕೈಮರೆದುದು... ನೆರೆ ವಿಭಾಡಿಸೆ... ಇವದಿರು ತೆಗೆದು ಹಸ್ತಿನಾಪುರಕೆ ಹಾಯ್ದರು.

ಬಳಿಕ ಪಾಂಚಾಲಕನ ಭೀತಿಯ ಮೊಳಕೆಯು ಉರಿದುದು... ಜಲಧಿ ವಳಯದ ಭೂತಳಾಗ್ರದ ಭೂತಳೇಂದ್ರರಲಿ ಉತ್ಸವ ಹರಿದುದು... ಹೊಳೆ ಹೊಳೆವ ರವಿ ರಶ್ಮಿಗಳು ಪ್ರಜ್ವಲಿಸುವಂತಿರೆ ಪಾಂಡುನಂದನರ ಅಳವಿನ ಉಬ್ಬಟೆ ಬಿಸಿಲು ದೆಸೆದೆಸೆಗೆ ನೆರೆ ಪಸರಿಸಿತು...

ಅಲ್ಲಿಗೆ ಸಕಲ ಯಾದವ ವೃಂದ ಸಹಿತ ಮುರಾರಿ ಬಂದನು... ಕುಂತೀನಂದನರು ಬರಲು ಉಚಿತದಲಿ ಇದಿರು ಕಾಣಿಸಿಕೊಂಡನು... ಅಂದು

ತಂದ ಗಜ.. ರಥ..ಅಶ್ವವನು..ಬಹುವಿಧ ವಸ್ತುಕಾರವನು..ವಿಚಿತ್ರ ಅಂಬರ ವಿಭೂಷಣವ ಇಂದುವದನೆಯರಿಗೆ ಕೊಟ್ಟನು.

ಕುಂತಿ : ಮಗನೆ ಧರ್ಮಜ ಕೇಳು... ಭೀಮಾದಿಗಳೆ... ಹರಿಯು ಎಮ್ಮಣ್ಣ ದೇವನ ಮಗನು... ನಿಮಗೆ ಈತನು ಸೋದರ ಮಾವ... ವಸುದೇವ ವಿಗಡರು ಈ ಯಾದವ ನೃಪರು ನಿಮಗೆ ಬಂಧುಗಳು.

(ಎಂದು ಆ ಕುಂತಿ ಐವರನು ಕೈನೆಗಹಿ... ಕಮಲೋದರನ ಕೈಯಲಿ ಕೊಟ್ಟಳು.)

ಕುಂತಿ : (ಕೃಷ್ಣನೊಡನೆ ತಾನು ಪಟ್ಟ ಪಾಡೆಲ್ಲವನ್ನೂ ಹೇಳಲು ತೊಡಗಿದಳು.)

ಇವರಯ್ಯನು ವನದೊಳು ಅಪಗತನಾದನು... ಪತಿ ಪರೋಕ್ಷದಲಿ ಕುಮಾರರ ಬಾಲ್ಯ ಕಾಲದೊಳು ಎನಗೆ ರಕ್ಷಾಭಾರ ಬಿದ್ದುದು... ಇನಿಬರನು ಗಜಪುರಿಗೆ ಕೊಂಡೊಯ್ದೆನು... ಬಳಿಕ ಲಾಕ್ಷಾಭವನ ದಹನದಲಿ ಸುಯೋಧನನಿಂದ ವೈರವು ಜನಿತವಾಯಿತು... ನಿಮ್ಮ ಚರಣ ಸ್ಮರಣ ಬಲದಲಿ ಉರಿಯೊಳು ಉಳಿದೆವು... ವಿಪಿನಾಂತರದೊಳಗೆ ಬಹಳ ತೊಳಲಿದೆವು... ಸಾಯದೆ ಒಡಲುಗಳ ಹೊರೆದೆವು... ಬರಬರಲು... ತತ್ಸರ್ವ ದುಃಖೋತ್ತರ ನಿವಾರಣ ದ್ರುಪದ ಕನ್ಯಾವರಣ... ನಿನ್ನ ಈ ಅಂಘ್ರಿ ದರುಶನ.

(ಎಂದಳಾ ಕುಂತಿ)

ಕೃಷ್ಣ : ದೇವಿ ಚಿತ್ತವಿಸು, ಉಪಚಾರಕ ಭಾವವೇ... ಧರ್ಮಜನು ಭೀಮನು ಭಾವನವರು... ಧನಂಜಯಾದಿಗಳು ಎಮಗೆ ಮೈದುನರು... ಈ ಉಪಾಧಿ ಸ್ಥಳದೊಳು ನಿಮ್ಮೈವರಿಗೆ ಆವು ಅಂತರ್ಜೀವನ ಪ್ರಾಣಾದಿ ವಾಯುಗಳು ಕಾರಣ.

(ಎಂದನು ಅಸುರಾರಿ... ದ್ರುಪದ ಗುಡಿಗಟ್ಟಿದನು... ಕುಂತಿಯ ವಿಪುಳ ಹರುಷವನು ಏನನೆಂಬೆನು... ದ್ರುಪದ

ಯದು ಪರಿವಾರವು ಜಲಧಿ ಘೋಷದಲಿ ಉಲಿದುದು... ಅಪದೆಸೆಯ ಮುಗಿಲೊಡೆದು... ಹೊಳೆಹೊಳೆದು ಉಪರಿಚರ ರವಿಯಂತೆ ತತ್ ಕ್ಷಣ ವಿಪುಳ ತೇಜಃ ಪುಂಜರು ಪಾಂಡುನಂದನರು ಎಸೆದರು... ಇದಿರೊಳು ಅವನಿಪ... ಎಡವಂಕದಲಿ ಭೀಮನು... ಬಲವಂಕದಲಿ ಮಾದ್ರೀಸುತರು... ಬಲವಂಕದಲಿ ದೇವಕಿ ಕುಂತಿ ವಸುದೇವಾದಿ ಯದುನಿಕರ ಮುದದಿ ಐವರ ರಮಣಿ... ಕರುಣಾಳುವಿನ ವಾಮಾಂಕದಲಿ ಫಲುಗುಣನು ಒಪ್ಪೆ ದಾನವಧ್ವಂಸಿ ಮೆರೆದನು.)

❍

32. ಧೃತರಾಷ್ಟ್ರನ ಸಮಾಲೋಚನೆ

(ಆದಿಪರ್ವ : ಹದಿನೇಳನೆಯ ಸಂಧಿ : ಪದ್ಯ 13 ರಿಂದ 21)

ಪಾತ್ರಗಳು

ಧೃತರಾಷ್ಟ್ರ : ಹಸ್ತಿನಾವತಿಯ ಮಹಾರಾಜ.

ಜಯದ್ರಥ : ಧೃತರಾಷ್ಟ್ರನ ಮಗಳಾದ ದುಶ್ಶಲೆಯ ಗಂಡ.

ಭೀಷ್ಮ : ಶಂತನು ಮತ್ತು ಗಂಗಾದೇವಿಯ ಮಗ.

ಧೃತರಾಷ್ಟ್ರನ ಸಮಾಲೋಚನೆ

ಕುರುನೃಪಾಲನ ಗುಪ್ತಚಾರರು ಈ ವಾರ್ತೆಯನು ಅರಿದರು... ಪುರದಲಿ ಹರಹಿದರು... ಧೃತರಾಷ್ಟ್ರನು ಈ ಹದನ ನೆರೆ ಕೇಳಿದನು... ಗಾಂಗೇಯ.. ಗೌತಮ.. ಗುರು.. ಸುಯೋಧನ.. ಶಲ್ಯ.. ಸೈಂಧವ.. ಗುರುತನುಜ.. ರಾಧೇಯ.. ವಿದುರ.. ಕಳಿಂಗ.. ಸೌಬಲರ ಕರೆಸಿದನು.

ಧೃತರಾಷ್ಟ್ರ : ಚರಮುಖ ಪ್ರತಿಪನ್ನ ಬಂಧುರತರ ವಚೋವಿನ್ಯಾಸ ಕರ್ಣಜ್ವರವೊ... ಕರ್ಣಾಮೃತವೊ ಕೇಳಿರೆ.

(ಎಂದನು ಅಂಧನೃಪ.)

ಧೃತರಾಷ್ಟ್ರ : ಕೇಳಿರೈ ಹೇಳುವೆನು... ಯಾದವರ ಆಳು ಬಂದುದು ಗಡ... ಯುಧಿಷ್ಠಿರ ಭೀಮ ಪಾರ್ಥರಿಗೆ ಜನಾರ್ದನ ಕೋಳುವೋದನು ಗಡ... ಗಾಳಿ ಬೆಂಬಲವಾಗಲು ಉರಿಯ ಛಡಾಳವನು ನಿರ್ಣೈಸಬಹುದೆ... ನಿಮ್ಮ ಗಾರುಡವು ವಿತಾಳಿಸಿತಲ್ಲೈ.

(ಎಂದನಾ ನೃಪತಿ... ಎನಲು ಜಯದ್ರಥ ಸೌಬಲಾದಿಗಳು ಘರ್ಜಿಸುತ...)

ಜಯದ್ರಥ ಮತ್ತು ಇತರರು : ಅರಸ, ಮುರರಿಪು ಜಿನುಗಿದರೆ ಗಿರಿ ಜರಿವುದೇ... ಯಮತನುಜ ಭೀಮಾರ್ಜುನರು ಹಿಡಿದರೆ ಗಗನವು ಅಡಗುವುದೆ... ದನುಜರಿಪುವಿನೊಳು ಏನಹುದು...

ಅನಿಮಿಷರು ರಣದಲಿ ನೆರವಾಗಿ ಬರಲಿ... ಜನಪ ನೋಡು.

(ಎಂದರು.)

ಭೀಷ್ಮ : ಭೂಪಾಲ, ಕೊರತೆಯಲ್ಲಿದು... ನಿನ್ನೆ ನಾವ್ ಕಂಡು ಅರಿದೆವು... ಇವರು ಅತಿಬಲರು... ಕೃಷ್ಣನ ಬರಿ ಸಹಾಯದಲೇನು... ಭೀಮಾರ್ಜುನರ ಬಲುಹೇನು... ನೆರವಣಿಗೆಯುಳ್ಳವರಲ್ಲೈ... ಹೊಕ್ಕಿರಿದ ರಣ ಹಸಿಯಾರಿತೇ... ನೀವು ಅರಿಯಿರೇ.

(ಎಂದನು ನಗುತ ಗಾಂಗೇಯ.)

ಇವರ ಬಲುಹು ಅಂತಿರಲಿ... ಸಾಕಿನ್ನು, ಅವರ ಕರೆಸು... ವಿರೋಧ ಬಂಧ ವ್ಯವಹೃತಿಗೆ ಫಲವಿಲ್ಲ... ಮೂಲಚ್ಛೇದ ಕರ್ಮವಿದು... ಅವರು ಮುನ್ನ ಅತಿಬಲರು... ಕೃಷ್ಣನ ಹವಣ ನೀನೇ ಬಲ್ಲೆ... ಇನ್ನು ಈ ಸವಡಿ ಮಾರಿಯ ಸೋಕು ಲೇಸಲ್ಲ... ವಿದುರನ ಕಳುಹಿ ಕರೆಸು... ನರ.. ಯುಧಿಷ್ಠಿರ.. ಭೀಮರನು ನೀ ಬರಿಸು... ದಾಯಾದ ಮಾರ್ಗದಲಿ ವಾರಣಪುರದ ರಾಜ್ಯ ವಿಭಾಗವನು ಭಂಡಾರವನು ವಿಸ್ತರಿಸಿ ಕೊಡು... ನಿಮ್ಮ ಅವಗುಣವ ನೋಡದೆ ಬೆರಸಿ ಕೊಡುವೆವು... ಕೂಡಿ ಬದುಕುವುದು.

(ಎಂದನಾ ಭೀಷ್ಮ.)

ಧೃತರಾಷ್ಟ್ರ : ಕರೆಸಿ ಕೊಡಿರೈ... ನಿಮ್ಮ ಚಿತ್ತಕೆ ಬರಿಸಿ ನಡಸುವೆನು... ಎನ್ನ ಮಕ್ಕಳ ದುರುಳತನದಿಂದಾದ ಹಿಂದಣ ಮಕ್ಕಳಾಟಿಕೆಯ ಮರೆದು ಕಳೆಯಲಿ... ಪಾಂಡುನಂದನರು ಎರವಿಗರೆ... ಬಾ ವಿದುರ, ಭೀಷ್ಮನ ಪರಮ ಮತವೇ ನನ್ನ ಮತ ಹೋಗು.

(ಎಂದ ಧೃತರಾಷ್ಟ್ರ... ಭೀಷ್ಮಾದಿಗಳು ಬುದ್ಧಿಯ ಕಲಿಸಿ ವಿದುರನನು ಕಳುಹಿದರು.)

❍

33. ವಿದುರನ ಸಂಧಾನ

(ಆದಿಪರ್ವ : ಹದಿನೇಳನೆಯ ಸಂಧಿ : ಪದ್ಯ 21 ರಿಂದ 33)

ಪಾತ್ರಗಳು

ಕೃಷ್ಣ : ದ್ವಾರಾವತಿ ಪಟ್ಟಣದ ಒಡೆಯ. ಪಾಂಡವರ ಹಿತಚಿಂತಕ.

ವಿದುರ : ವ್ಯಾಸ ಮತ್ತು ಅಂಬಿಕೆಯ ದಾಸಿಯ ಮಗ.

ವಿದುರನ ಸಂಧಾನ

ಭೀಷ್ಮಾದಿಗಳು ಬುದ್ಧಿಯ ಕಲಿಸಿ ವಿದುರನನು ಕಳುಹಿದರು... ಪಯಣದ ಲಲಿತ ಸನ್ನಾಹದೊಳು ಪಾವುಡವ ಪರುಠವಿಸಿದನು... ಬಳಿಕ ಸುಮುಹೂರ್ತದಲಿ ವಿಪ್ರಾವಳಿಗಳ ಆಶೀರ್ವಾದದಲಿ ಮಂಗಳತೆ ಮಿಗಿಲು... ಒಲವಿಂದ ಹಸ್ತಿನಪುರವ ಹೊರವಂಟ... ಕೇಳು ಭೂಪತಿ, ಹಲವು ಪಯಣದ ಮೇಲೆ ಪಯಣದಲಿ ಪಾಂಚಾಲಪುರವನು ಐದಿದನು... ಅರಮನೆಗೆ ಅಧಿಕ ಹರ್ಷದಲಿ ಬಂದನು... ಕೌಂತೇಯರು ಕೇಳಿದರು... ಈತನ ಇದಿರ್ಗೈದಿ ಲಾಲಿಸಿದರು... ತನು ಪುಳಕಾಳಿಯಲಿ ಮೈ ಮುಳುಗೆ... ತಮತಮಗೆ ತೆಗೆದಪ್ಪಿದರು... ಬಂಧುಸ್ತೋಮದಲಿ ಕ್ಷೇಮವನು ಕುಶಲವನು ಕೇಳಿದರು... ತಮ್ಮ ಪೂರ್ವಾಪರಸ್ಥಿತಿಯ ಕ್ಷೇಮ ಕುಶಲವ ಹೇಳಿದರು...

ಭೂಮಿಪತಿ ಚಿತ್ತೈಸು, ಬಳಿಕಿನ ರಾಮಣೀಯಕ ಯಾದವೇಂದ್ರ ಶಿರೋಮಣಿಯ ಸಮ್ಮೇಳವನು ವಿದುರಂಗೆ ಹೇಳಿದನು... ತಂದ ಪಾವುಡ ಅನಿತುವನು ಯಮನಂದನಂಗೆ ಒಪ್ಪಿಸಿದ... ತಂದ ವಸ್ತುವನಿತ್ತವನು ದ್ರುಪದ.. ಮುಕುಂದ... ಧೃಷ್ಟದ್ಯುಮ್ನ... ಕಂದರ್ಪ... ಅನಿರುದ್ಧರಿಗೆ ಸಾನಂದದಲಿ ನೀಡಿದನು... ನಗುತ ಅರವಿಂದನಾಭನ ಪದಕೆ ಭಕ್ತಿಯಲಿ ಮೈಯಿಕ್ಕಿದನು... ವಿದುರನನು ಆ ಕೃಪಾಜಲಧಿ ತೆಗೆದು ತಕ್ಕೈಸಿದನು... ಭೀಷ್ಮಾದಿಗಳ ಕುಶಲವ ಕೇಳಿದನು... ನಸುನಗುತ ಮೈದಡವಿದನು.

ಕೃಷ್ಣ : ವಿಗಡನು ಆ ಧೃತರಾಷ್ಟ್ರನು ಈ ಬಂಧುಗಳ ನೆನೆವನೆ... ಪಾಂಡುಸುತರಿಗೆ ಸೊಗಸುವನೆ... ನೀ ಬಂದೆ... ಲೇಸಾಯ್ತು.

(ಎಂದನು ಅಸುರಾರಿ... ಬಳಿಯ ಪರಿವಾರವನು ಮನ್ನಿಸಿ, ಬೀಡಾರಕೆ ಆತನ ಕಳುಹಿದನು... ಬಳಿಕ ಮರುದಿನ ಮಂತ್ರ ಶಾಲೆಯಲಿ ಮೇಳವಿಸಿದರು... ಧೃತರಾಷ್ಟ್ರ..ಭೀಷ್ಮರ ಲಲಿತ ಮತವನು ತಿಳಿಹಿದನು.)

ವಿದುರ : ಬಂಧುವರ್ಗ ಸ್ಖಲಿತವನು ಸೈರಿಸುವುದು.

(ಎಂದನು ವಿದುರ ವಿನಯದಲಿ.)

ಧೃತರಾಷ್ಟ್ರನು ಕರೆಸಿದನು... ಆತನ ಚರಣವನು ಕಾಂಬುದು... ನದೀಸುತ ಗುರು ಕೃಪರು ನಿಮಗೆ ಒಳ್ಳಿದರು... ನೀವು ಅಖಿಳ ರಾಜ್ಯದಲಿ ಸರಿಯ ಕೊಂಬುದು... ಸೇರುವಡೆ ಗಜಪುರದೊಳು ಇಹುದು... ಅಲ್ಲದೊಡೆ ನೀವು ಆತ್ಮ ನಿರ್ಮಿತ ರಾಜಧಾನಿಯಲಿ ನಿಮ್ಮಯ ಪುರದಲಿರಿ.

(ಮುರಹರನನು ಅಹುದು ಎನಿಸಿ... ಭೂಮೀಶ್ವರನ ಮೆಚ್ಚಿಸಿ... ಭೀಮನನು ಮನಬರಿಸಿ... ಪಾರ್ಥನನು ಒಲಿಸಿ... ಮಾದ್ರೀಸುತರನು ಒಡಬಡಿಸಿ... ಅರಸಿಗೆ ಅಭಿಮತವೆನಿಸಿ... ಪಾಂಚಾಲರಿಗೆ ಕಾರ್ಯವಿದು ಎನಿಸಿ... ಕುಂತಿಗೆ ಪರಮ ಹರುಷವ ರಚಿಸಿ ಸಂಧಿಯನು ವಿದುರ ನುಡಿದನು... ಕದಡು ತಿಳಿದುದು... ಕಾರ್ಯಗತಿಗೆ ಆಸ್ಪದವ ಕೊಟ್ಟರು... ಬಳಿಕ ಸುಮುಹೂರ್ತದಲಿ ಪಯಣವ ಮಾಡಿದರು...

ಪಾಂಚಾಲ ದಳ ಸಹಿತ ಯದುಶಿರೋಮಣಿವೆರಸಿ ಬಹು ಪಯಣದಲಿ ಬಂದರು... ಮೇಲೆ ಕೌರವರು ಇದಿರುಗೊಂಡರು... ಹಸ್ತಿನಾಪುರವ ಕೂಡೆ ಹೊಕ್ಕರು... ಇವರೈವರು ಬಂದು ಕಾಣಿಕೆ ಕೊಟ್ಟು ಗಂಗಾನಂದನ..ಧೃತರಾಷ್ಟ್ರನನು.. ಗಾಂಧಾರಿಯನು.. ಗುರು ಗೌತಮಾದಿಗಳ ಸಾನಂದದಲಿ ವಂದಿಸಿದರು... ಅವರು ಆನಂದಜಲ ಪರಿಲುಳಿತ ನಯನಾಸ್ಪಂದ ಪರಿತೋಷದಲಿ ಪಾಂಡವರ ತೆಗೆದಪ್ಪಿದರು... ಕರೆಸಿ ತನ್ನ ಕುಮಾರಕರ

ನೂರ್ವರನು ಕಾಣಿಸಿದನು... ಸೈಂಧವ.. ಗುರುತನುಜ.. ರಾಧೇಯ.. ಸೌಬಲರು ಪರಸ್ಪರ ಪರಮ ಸಂಪ್ರೀತಿಗಳ ನಿಬಿಡ ಆಲಿಂಗನೋತ್ಸವದ ದರುಶನೋಚಿತ ಮಾನ್ಯಮಾನ ಸ್ಫುರಣದಲಿ ವಿಸ್ತರಿಸಿ ನೃಪನ ಅಪ್ಪಿದರು... ಯಾದವರು ಪಾಂಚಾಲರಲಿ ಅನ್ಯೋನ್ಯ ಘನ ಸಂವಾದ ಸಂಪಾದಿಸಿದುದು... ಸುಖ ಸಂಪ್ರೀತಿ ಮೆರೆಯಲ್ಕೆ ಇಷ್ಟ ಸತ್ಕಾರ ಆದುದು...

ಉತ್ಸವ ಜನಜನಿತ ಹರುಷೋದಧಿಯ ಹೊನಲಿನಲಿ ಹಿಂದಣ ಭೇದ ಕರ್ದಮವು ಅಡಗಿ ಹೋಯ್ತು... ಅವನೀಶ ಕೇಳೆಂದ... ವೀತ ಭಯರು ಭೂತಳಾಧಿಪರು ಐದು ಸಂವತ್ಸರಗಳು ಒಂದಾಗಿ ಅನ್ಯೋನ್ಯ ಪರಮ ಪ್ರೀತಿಗಳ ಬೆಳವಿಗೆಯಲಿದ್ದರು.)

❍

34. ಇಂದ್ರಪ್ರಸ್ಥದಲ್ಲಿ ನೆಲೆಸಿದ ಪಾಂಡವರು

(ಆದಿಪರ್ವ : ಹದಿನೆಂಟನೆಯ ಸಂಧಿ : ಪದ್ಯ 1 ರಿಂದ 9)

ಪಾತ್ರಗಳು

ಧೃತರಾಷ್ಟ್ರ : ಹಸ್ತಿನಾವತಿಯ ಮಹಾರಾಜ.

ಭೀಷ್ಮ : ಶಂತನು ಮತ್ತು ಗಂಗಾದೇವಿಯ ಮಗ. ಪಾಂಡವರು ಮತ್ತು ಕೌರವರನ್ನು ಸಾಕಿ ಸಲಹಿದವನು.

ಇಂದ್ರಪ್ರಸ್ಥದಲ್ಲಿ ನೆಲೆಸಿದ ಪಾಂಡವರು

ಕೇಳು ಜನಮೇಜಯ ಧರಿತ್ರೀಪಾಲ, ನಿಮ್ಮಯ ಪೂರ್ವಜರು ಸಮಪಾಳಿಗಳ ಸಾನುರಾಗದಲಿ ಸೇರುವೆಯೊಳಿದ್ದರು... ಖೇಳಮೇಳದ ಬೇಟೆಗಳ ವೈಹಾಳಿಗಳ ಜೂಜಿನ ಸಮಂಜಸ ಲೀಲೆಗಳ ಕೇಳಿಯಲಿ... ವರುಷ ಪಂಚಕವ ಕಳೆದರು... ಧೃತರಾಷ್ಟ್ರ ಭೂಪತಿ ಮುರಹರನ.. ದ್ರುಪದನ.. ಯುಧಿಷ್ಠಿರ.. ನರ.. ವೃಕೋದರ.. ಭೀಷ್ಮ.. ಗುರು.. ಕೃಪ.. ಕರ್ಣ.. ಶಕುನಿಗಳ ಕರೆಸಿದನು.

ಧೃತರಾಷ್ಟ್ರ : ವಿಶ್ವಂಭರೆಯ ರಾಜ್ಯವನು ಎರಡು ಭಾಗವ ಮಾಡಿ... ಉಭಯ ರಾಯರು ಹೊರೆಹೊಗದೆ ಪಂಥದೊಳು ಪಾಲಿಸಲಿ.

ಭೀಷ್ಮ : ಅಹುದು ಹೊಲ್ಲೆಹವಲ್ಲ... ಬೇರೆ ರಾಜ್ಯದೊಳಿಹರೆ... ಖುಲ್ಲರ ಕುಹಕ ಕೊಳ್ಳದು... ದಾಯಾದ ಮಾರ್ಗದಲಿ ಸೇರುವೆ ದೃಢವಹುದು... ಏಕಾಮಿಷ ಗಹನವು ಸಮುದ್ಭವದ ಅಹಿತತನದ ಉತ್ತರಣವು ಅತಿ ದುಸ್ಸಹವಲೇ... ನೀ ನೆನೆದ ಹದ ಲೇಸು.

(ಎಂದನಾ ಭೀಷ್ಮ... ಅರಸ ಕೇಳ್ಳೈ, ಸಕಲ ರಾಜ್ಯವನು ಎರಡು ಭಾಗವ ಮಾಡಿ... ಪೂರ್ವೋತ್ತರದ ದಕ್ಷಿಣ

ಪಶ್ಚಿಮಂಗಳ ಹೆಚ್ಚು ಕುಂದುಗಳ ಕೂಡಿದರು... ಪುರನಗರ... ಖರ್ವಡ... ಮಡಂಬ... ಸ್ಫುರಿತ... ಖೇಟ... ಗ್ರಾಮವೆಂಬ ಅವನು ಎರಡು ಭಾಗವ ಸಮವಾಗಿ ಮಾಡಿದರು... ಪುರ ಸುರೇಂದ್ರ ಪ್ರಸ್ಥವು ಅರಸಂಗೆ ಧರ್ಮಸುತಂಗೆ ಇರವು... ಹಸ್ತಿನಪುರ ಸುಯೋಧನಗೆ... ಉಭಯರಾಯರ ರಾಜಧಾನಿಗಳು ಚರಮ ದಕ್ಷಿಣವಾಗಿ... ಪೂರ್ವೋತ್ತರ ವಿಲಂಬಿತವಾಗಿ... ಹಿಮಸಾಗರದ ಮಧ್ಯದ ಭೂಮಿಯನು ಎರಡಾಗಿ ಸೇರಿಸಿದರು...

ವಾರಣ ಪ್ರತತಿಯನು... ಅಘಾಟದ ವಾರುವಂಗಳ... ಮಣಿಮಯದ ಹೊಂದೇರು ಗಳನು... ಆಭರಣವನು ಸಮವಾಗಿ ತೆಗೆಸಿದರು... ಭೀಷ್ಮಾದಿಗಳು ಹರುಷದಲಿ ಕೌರವರು ಪಾಂಡವರುಗಳ ಮನದೋರೆ ಪೋರೆಯ ತಿಳುಹಿ... ವೈರ ವಿಕಾರವನು ಬಿಡಿಸಿದರು... ಬಳಿಕ ಸುಮುಹೂರ್ತದಲಿ ಹೊರಗುಡಿ ಬಳಸಿ ಹೊಯಿದವು... ರಾಣಿವಾಸದ ನಿಳಯ ನಿಳಯದ ತಳಿಗೆ ತಂಬುಲ ಮಂಗಳಾರತಿಯ ಫಲಸಮೂಹದ ಕಾಣಿಕೆಯ ಕೈಗೊಳುತ... ಗಾಂಧಾರಿಗೆ..ಮಹೀಶನ ಲಲನೆಯರಿಗೆ ಅಭಿನಮಿಸಿ... ಉಚಿತದಲಿ ಕಳುಹಿಸಿ ಕೊಂಡರು. ಕಳುಹಲು ಐತಂದ... ಅಂಧ ನೃಪತಿಯ ನಿಳಯದಲಿ ನಿಲಿಸಿದರು... ಕೌರವಕುಲದ ನೂರ್ವರ... ಕರ್ಣ... ಶಕುನಿ... ಜಯದ್ರಥಾದಿಗಳ ಗಜಪುರದ ಯೋಜನದ ಅಳತೆಯಲಿ ನಿಲಿಸಿದರು... ಗುರು.. ಭೀಷ್ಮ.. ವಿದುರರು ಕೆಲವು ಪಯಣವ ಬಂದು...

ಉಚಿತದಲಿ ಕಳುಹಿಸಿಕೊಂಡರು... ಭೂಮಿ ಲಂಬದ ನೃಪರ ಬಲದ ಉದ್ದಾಮ ವಿಭವದೊಳು ಅಸುರರಿಪು ಸಹಿತ ಈ ಮಹೀಪಾಲಕರು... ರಾಮಣೀಯಕ ರಚನೆಯಲಿ... ಸುತ್ರಾಮ ನಗರಿಯ ಸೂತ್ರಧಾರೆಯಲಿ... ಆ ಮನೋಹರ ವಿಶ್ವಕರ್ಮ ವಿನಿರ್ಮಿತದ ಪುರಕೆ ಹಲವು ಪಯಣದಲಿ ಬಂದರು.)

35. ನಾರದನ ಹಿತನುಡಿ

(ಆದಿಪರ್ವ : ಹದಿನೆಂಟನೆಯ ಸಂಧಿ : ಪದ್ಯ 21 ರಿಂದ 34)

ಪಾತ್ರಗಳು

ಪಾಂಡವರು : ಧರ್ಮರಾಯ–ಭೀಮ–ಅರ್ಜುನ–ನಕುಲ–ಸಹದೇವ

ನಾರದ : ಒಬ್ಬ ದೇವತೆ.

ಧರ್ಮರಾಯ : ಪಾಂಡುರಾಜ ಮತ್ತು ಕುಂತಿಯ ಮಗ.

ನಾರದನ ಹಿತನುಡಿ

ಅರಸ ಚಿತ್ತೈಸು, ಆ ಯುಧಿಷ್ಠಿರ ನರಪತಿಯ ರಾಜ್ಯ ಪ್ರಭಾವ ಉತ್ಕರುಷ ವಿಸ್ತರವ ಏನನೆಂಬೆನು... ಸಾಕು ಅದಂತಿರಲಿ... ಪರಮ ವಿಭವದೊಳು ಒಂದು ದಿನ ಐವರು ನಿಜಾಸ್ಥಾನದಲಿ ಹರಿ ವಿಷ್ಟರದೊಳು ಇರ್ದರು... ಅತಿ ದೂರದಲಿ ನಾರದನ ಕಂಡರು... ಗಗನದಿನ್ ಇಂದು ಮಂಡಲವ ಇಳಿವವೊಲ್ ಇವರ ಓಲಗಕೆ ಬಂದನು... ನೃಪವೃಂದ ಎದ್ದು ಮುನಿಪತಿಯ ಪದಯುಗಕೆ ಅಭಿನಮಿಸಿದುದು.

ಪಾಂಡವರು : ಇಂದು ಧನ್ಯರು ನಾವಲಾ... ಮುನಿವಂದ್ಯ ದರ್ಶನವಾಯ್ತು... ಅಪೂರ್ವ ಇದು.

(ಎಂದು ಕುಂತೀ ತನುಜರು ಇದಿರೆದ್ದು ಅಂಘ್ರಿಗೆ ಎರಗಿದರು... ಮುನಿಯು ಹರಸಿದನು... ಅರಸ ಅರ್ಘ್ಯ ಪಾದ್ಯ ಉತ್ಕರವ ಮಧುಪರ್ಕ ಆಸನಾದಿಯನು ಮಾಡಿದನು... ಅಮರಮುನಿ ಕೈಕೊಂಡು ಹರುಷದಲಿ...)

ನಾರದ : ಪರಿಮಿತದ ಸಮಯದ ವಚೋ ವಿಸ್ತರಣವುಂಟು.

(ಎನೆ ರಾಯನ ಓಲಗ ಹರಿದುದು... ಅವನೀಪಾಲ ಮುನಿಗೆ ಬಿನ್ನಹ ಮಾಡಿದನು.)

ಧರ್ಮರಾಯ : ಏನು ಬಿಜಯಂಗೈದ ಹದನು... ಎನಗೆ ಏನು ಅನುಗ್ರಹ ವಚನ... ನಿಮ್ಮಡಿಗೆ ಏನನು ಆನ್ ಬೆಸಗೈವುದು... ಎನಗೆ ಆಜ್ಞಾಪಿಸುವುದು.

ನಾರದ : ನೀನು ಅಘಾಟದ ರಾಜಋಷಿ... ನೀ ಮಾನವನೆ... ನೀನು ಧರ್ಮಸ್ವರೂಪನು... ಭವತ್ ಆಲೋಕನಾರ್ಥವು ನಮ್ಮ ಬರವೆಂದ... ಅನುಜರು ಹೇಳುವರೆ ಭೀಮಾರ್ಜುನರು... ವಧುವು ಆರು ಎಂಬರೆ ಅಮರಾಂಗನೆಯರಿಗೆ ನೂರೆಂಟು ಮಡಿ ಈ ದ್ರೌಪದಾದೇವಿ... ಘನ ಸಹಾಯನು ಹವಣಿನವನು ಎಂಬೆನೆ ಚತುರ್ದಶ ಭುವನಪತಿ... ನೃಪ, ಇಂದಿನಲಿ ಪನ್ನಗೇಂದ್ರ ಸುರೇಂದ್ರರು ನಿನಗೆ ಪಾಡೇ... ಆದಡೆ ಒಂದು ಇಹುದು...

ಮಹೇಶ್ವರನು ಆದಿಯಲಿ ಕರುಣಿಸಿದ ವರದಲಿ ಈ ದ್ರೌಪದಿ ಐವರಿಗೆ ವಧುವಾದಳು... ಭೂಪ ಕೇಳು, ಪುಣ್ಯ ಕಥನವಿದು... ಮೇದಿನಿಯೊಳು ಏಕಾಮಿಷ ಸ್ಥಿತಿಯು ವಿಗ್ರಹಕೆ ಆದಿಯಿದು... ತಮ್ಮೊಳು ಸುಂದೋಪಸುಂದರು ಕಾದಿದರು... ಅರಸುಗಳು ತಾವಿಬ್ಬರು ಏಕೋದರರು... ಬಲುಗೈಗಳು ಸುರಾಸುರ ನರರೊಳು ಅಡುಪಾಯೆಯಲಿ ಭೂತಳವ ನೆರೆದು ವೆಂಠಣಿಸಿದರು... ಸುರರು ಸರೋಜಪೀಠಂಗೆ ಅರುಹಿದರು... ಬಳಿಕ ಆತನು ಇವರನು ಪರಿಹರಿಸುವುದಕೆ ಏನು ಉಪಾಯ ಎನುತ್ತ ಚಿಂತಿಸಿದ...

ಅಬುಜಭವ ಬಳಿಕ ಅಸಂಖ್ಯಾತದ ಸುರ ಉರಗ ಲಲನೆಯರಲಿ ತಿಲಾಂಶಮಾತ್ರದ ಚೆಲುವಿಕೆಯನೇ ತೆಗೆದು ವರಾಂಗನೆಯ ನಿರ್ಮಿಸಿದನು... ತಿಲೋತ್ತಮಾ ಆಹ್ವಯದ ಆಕೆಯ ಹೆಸರು ದಿವಿಜಾವಳಿಯೊಳು ಐದೆ ಬೆಳಗಿತು... ಅಳಿಕುಲಾಳಕಿಗೆ ಈ ಹದನ ನೇಮಿಸಿದನು... ಅವರ ಕೆಡಿಸುವ ಹದನ ಕೈಕೊಂಡು ಅವನಿಗೆ ಐತಂದಳು... ಇವದಿರು ಬನದೊಳಗೆ ವಿನೋದದೊಳು ಇದ್ದರು... ಮದಿರಾ ಮದೋದ್ಧತರು ಯುವತಿಯನು ಕಂಡರು...

ಕಟಾಕ್ಷದ ಸವಡಿಗೋಲಿಂದ ಎದೆ ಒಡೆದುದು... ಅವರು ಹರಿದು ಅಂಗನೆಯ ವಾಮ ದಕ್ಷಿಣ ಕರಗಳ ಹಿಡಿದರು... **"ಎನಗೆ ವಧು ತಾ ಮುನ್ನ ಕಂಡೆನು"... "ತನಗೆ ಸತಿ... ತಾ**

ಮುನ್ನ ಹಿಡಿದೆನು"... "ತನಗೆ"... "ಎನಗೆ"... "ನೀ ನಿಲ್ಲು"... "ನೀ ನಿಲ್ಲು"... ಎನುತ ಹೊಯ್ದಾಡಿ... ಜನಪರಿಬ್ಬರು ಮಡಿಯಲು... ಅಮರಾಂಗನೆ ಮುಗುಳ್ನಗೆ ನಗುತಲು ಅಬುಜಾಸವನ ಹೊರೆಗೆ ಐದಿದಳು.

(ಕುಂತೀತನುಜ ಕೇಳೆಂದ.)

ನಾರದ : ಅದರಿನ್ ಈ ಜೀವರಿಗೆ ಸುದತಿಯರ ದೆಸೆಯಿಂದ ದುಸ್ಥಿತಿ... ರಾಜ್ಯದ ಹುದುವಿನಲಿ ಮೇಣ್ ಅರ್ಥಗತಿಯಲಿ ಅನರ್ಥ ತಪ್ಪದಲೆ... ನಿಮ್ಮೈವರಿಗೆಯು ಈ ದ್ರೌಪದಿ ಮಹಾಸತಿ... ಸುದತಿ ರಾಗ ಲೋಭದ ಕದನದಲಿ ಕಾಳಾಗದಿದ್ದರೆ ತುದಿಗೆ ಲೇಸು... ಅರಸ ಚಿತ್ತೈಸು, ಸತಿ ನಿಮ್ಮೊಬ್ಬರಲಿ ಒಂದು ವತ್ಸರ ಇರಲಿ... ಮರು ವರುಷಕೆ ಒಬ್ಬನೊಳು... ಇಂತು ಪಂಚಕಕೆ ಐದು ವರುಷದಲಿ... ಅರಸಿಯನು ಪತಿ ಸಹಿತ ಮಂಚದೊಳಿರಲು ಕಾಬುದು ಸಲ್ಲದು... ಅದು ಗೋಚರಿಸಿದಡೆ... ಬಳಿಕ ಅದಕೆ ಪ್ರಾಯಶ್ಚಿತ್ತ ವಿಧಿಯುಂಟು... ಆರು ಕಂಡರು ಚಾರು ನಿಷ್ಕೃತಿಯೆನಲು... ಆತನೊಬ್ಬನೆ ಧಾರುಣಿಯಲಿ ಸುತೀರ್ಥ ಯಾತ್ರಾಭಾರದಲಿ ವರುಷವೊಂದರಲಿ ಸುತ್ತಲು ತಿರುಗುವುದು.

(ನಾರದನ ದಿವ್ಯೋಪದೇಶಕೆ ತಮ್ಮದಿರು ಸಹಿತ ಮುದದಲಿ...)

ಧರ್ಮರಾಯ : ಸಾರಹೃದಯ ಹಸಾದ.

ನಾರದ : ಮಂಗಳವು ನಿಮಗೆ.

(ಎಂದು ಹಂಸೆಯ ಬೆಂಗೆ ಹಾಯ್ದನು... ಬಳಿಕ ನಭದೊಳು ಅಭಂಗ ಮುನಿಯು ಅಡಗಿದನು... ಈ ನೃಪರು...)

ಪಾಂಡವರು : ಮುನಿ ಪುಂಗವನ ಕರುಣದಲಿ ಗದುಗಿನ ವೀರ ನಾರಯಣ ತಮ್ಮೊಳಗೆ ಅಂಗನಾ ವಿಷಯದಲಿ ಸೀಮಾಸಂಗತಿಯ ಸೇರಿಸಿದನ್ಯೆ.

(ಎಂದರು.) ❍

36. ಅರ್ಜುನನ ಆತಂಕ

(ಆದಿಪರ್ವ : ಹತ್ತೊಂಬತ್ತನೆಯ ಸಂಧಿ : ಪದ್ಯ 1 ರಿಂದ 8)

ಪಾತ್ರಗಳು

ಅರ್ಜುನ : ಪಾಂಡುರಾಜ ಮತ್ತು ಕುಂತಿಯ ಮಗ.

ರಾಜ ಭಟ : ಧರ್ಮರಾಯನ ಅರಮನೆಯ ಕಾವಲುಗಾರ.

ಅರ್ಜುನನ ಆತಂಕ

ಕೇಳು ಜನಮೇಜಯ ಧರಿತ್ರೀಪಾಲ, ನಾರದಮುನಿ ನರೇಂದ್ರನ ಬೀಳುಕೊಂಡನು... ಅಂಬರಕೆ ಚಪಲಗತಿಯಲಿ ಚಿಗಿದನು... ಮೇಲೆ ಬಳಿಕ ಪಾರ್ಥಂಗೆ ಬಂದುದ ಒಂದು ಅವಗಡವನು ಏವೇಳುವೆನು... ಕಾಲಗತಿಯ್ಯೆಸಲೆ... ವಿದೇಶ ಭ್ರಮಣವಾಯ್ತು ಎಂದ.

ನರನ ವಳಿತದೊಳು... ಒಂದು ಸಮಯದೊಳು... ಇರುಳು ತಸ್ಕರ ಬಾಧೆಯಲಿ ಭೂಸುರರು... ಇಂದ್ರಪ್ರಸ್ಥ ಪುರವರವ ಬಾಯ್ಬಿಡುತ್ತೈದೆ... ಮೊರೆಯ ಬಾಯ್ಗಳ... ಹುಲ್ಲು ಕೈಗಳ... ಹರಿದ ಮೈಗಳ... ಸೆಕೆಯ ಸುಯ್ಗಳ... ತರದ ಬೈಗಳ ಕಳಕಳವ ಕೇಳಿದನು ಕಲಿ ಪಾರ್ಥ... ವಿಪ್ರರ ಕರೆಸಿ... ಬಾಧೆಗಳನು ಆದರಿಸಿ ಕೇಳಿದು ಸಂತವಿಸಿ...

ಅರ್ಜುನ : ದುಷ್ಟ ಪಾಟಚ್ಚರ ಪರಿಪ್ಲವವ ಪರಿಹರಿಸಿ ಕೊಡುವೆನು... ನೀವು ಮರಳಿ.

(ಎಂದು ಅವರ ಬೀಳ್ಕೊಂಡು... ಅಗ್ಗದ ಶರಧನುವ ಕೊಳಲೆಂದು ರಾಯನ ಸೆಜ್ಜೆಯರಮನೆಗೆ ಅರಿನಿವಾರಣ ಬಂದನು... ಸೆಜ್ಜೆಯರಮನೆಯ ಬಾಗಿಲಲ್ಲಿ ಇದ್ದ ರಾಜಭಟನನ್ನು ಕುರಿತು...)

ಅರ್ಜುನ : ಸಮಯವು ಏನೆನೆ.

ರಾಜಭಟ : ಜೀಯ, ರಾಯನು ರಮಣಿಯೊಡನೆ ಏಕಾಂತ.

(ಎನಲು... ಅಸ್ತಮಿತ ಹರುಷನು ನಿಂದು ತನ್ನ ಮನದೊಳಗೆ ನೆನೆದನು.)

ಅರ್ಜುನ : ಅಮರಮುನಿ ಮತವೊಂದು... ಮಂಚದ ರಮಣಿ ರಮಣರ ದರುಶನವಿದು ಅಕ್ರಮವು ಎನಿಪುದು... ಈ ವಚನ ತನಗೆ ಸಂಘಟಿಸಿತ್ತು... ಈಗಲು ಈ ವಿಪ್ರರಲಿ... ಖಳರ ಅಭಿಯೋಗ ವಾರ್ತಾ ಶ್ರವಣ ಬಹು ದುರಿತ ಆಗಮವು... ತನಗೆ ಆವುದೋ ಕರ್ತವ್ಯವು. ಈಗಲು ಈ ಸಂದಿಗ್ಧ ಸಮಯ... ತ್ಯಾಗ ಧರ್ಮ ವಿರೋಧ ಕೃತ್ಯವಿಭಾಗವು... ಆವುದೊ ಶಾಸ್ತ್ರದೃಷ್ಟಿಯೊಳು...

(ಎಂದು ಚಿಂತಿಸಿದ)

ಅರ್ಜುನ : ಎರಡು ಪಾತಕ ಇವೆ... ಬಲಾಬಲವು ಎರಡರೊಳು ಸಾಮಾನ್ಯ... ಪಕ್ಷಾಂತರ ವಿಶೇಷವು ಅದಾವುದು ಅದರೊಳಗೆ...

(ಎಂದು ಚಿತ್ತದಲಿ ಒರೆದೊರೆದು ನೋಡಿದನು... ತೂಕವ ಬರೆಸಿ ಕಾಹಿನ ಕಂದುಕುಂದನು ಪರಿಕಿಸುತ... ತನ್ನ ಮನದೊಳಗೆ ನಿಶ್ಚೈಸಿ ತಿಳಿದನು.)

ಅರ್ಜುನ : ಅರಸನು ಅರಸಿಯರು ಒಂದು ಮಂಚದೊಳಿರಲು ಕಂಡರೆ... ಇದಕೆ ಪ್ರಾಯಶ್ಚಿತ್ತ ವಿಧಿಯುಂಟು... ವರುಷವೊಂದರೊಳು ಭೂಪ್ರದಕ್ಷಿಣ... ಧರಣಿಯ ಅಮರರ ಉಪಪ್ಲವವ ಪರಿಹರಿಸದಿರಲು... ಆ ಪಾತಕಕೆ ಸಂಹರಣವುಂಟೇ ಶಾಸ್ತ್ರ ದೃಷ್ಟಿಯೊಳು.

(ಎಂದು ಚಿಂತಿಸಿದ ನರನು... ಒಳಹೊಕ್ಕು ತನ್ನಯ ಧನು ಶರಂಗಳ ಕೊಂಡು ನುಡಿದನು.)

ಅರ್ಜುನ : ಎಲೆ ಜನಪ, ಚಿಂತಿಸಬೇಡ... ಮುನಿವಚನ ಸಂಘಟಿತ ನೃಪದಂಪತಿ ವಿಲೋಕನದ ಘನ ದುರಿತ ನಿಷ್ಕೃತಿಗೆ ವರುಷದೊಳು ಎನಗೆ ದೇಶಭ್ರಮಣವಾಯ್ತು.

(ಎನುತ ಹೊರವಂಟನಾ ಪಾರ್ಥ.)

37. ಅರ್ಜುನ ಸುಭದ್ರೆಯರ ಪ್ರಸಂಗ

(ಆದಿಪರ್ವ : ಹತ್ತೊಂಬತ್ತನೆಯ ಸಂಧಿ : ಪದ್ಯ 21 ರಿಂದ 51)

ಪಾತ್ರಗಳು:

ಅರ್ಜುನ : ಪಾಂಡುರಾಜ ಮತ್ತು ಕುಂತಿಯ ಮಗ.

ಸತ್ಯಭಾಮ : ಕೃಷ್ಣನ ಹೆಂಡತಿ.

ಕೃಷ್ಣ : ದ್ವಾರಾವತಿ ಪಟ್ಟಣದ ಒಡೆಯ. ಪಾಂಡವರ ಹಿತಚಿಂತಕ.

ಬಲರಾಮ : ದ್ವಾರಾವತಿ ಪಟ್ಟಣದ ಒಡೆಯ. ಕೃಷ್ಣನ ಅಣ್ಣ.

ದ್ರೌಪದಿ : ಪಾಂಡವರ ಹೆಂಡತಿ.

ಸುಭದ್ರೆ : ದ್ವಾರಾವತಿ ಪಟ್ಟಣದ ಒಡೆಯರಾದ ಬಲರಾಮ ಮತ್ತು ಕೃಷ್ಣನ ತಂಗಿ

ಪುರಜನ : ಹಸ್ತಿನಾವತಿಯ ಪ್ರಜೆಗಳು

ಅರ್ಜುನ ಸುಭದ್ರೆಯರ ಪ್ರಸಂಗ

ಜನಪ ಕೇಳೈ, ಕಾರ್ಮುಗಿಲ ಮುಂಬನಿಗಳೊಳು ವಹಿಲದಲಿ... ಕೇರಳ ಜನಪದದ ತೌಳವದ ಕೊಂಕಣ ವಿಷಮವೀಧಿಯಲಿ... ಜಿನುಗಿನಲಿ ಬಹು ಮಳೆಗಳಲಿ ಕಿರೀಟಿ ನೆನೆನೆನೆದು... ಮುರಹರನ ಪಟ್ಟಣವ ವಿಚಾರಿಸುತ... ಸಾಗರ ತೀರದಲಿ ಬಂದನು... ಪುರವ ಹೊರವಂಟು ಎಂಟು ತಿಂಗಳು ಪರಿಹರಿಸಿತು.

ಅರ್ಜುನ : (ತನ್ನಲ್ಲಿಯೇ)

ಈ ಕೃಷ್ಣರಾಯನ ಪುರದೊಳಗೆ ವರ್ಷಾಕಾಲ ವಿಭ್ರಮವ ನೂಕುವೆನು... ವರುಷವು ಒಂದು ಸಮಾಪ್ತಿ... ಬಳಿಕಿನೊಳು ಅರಸನ ಅಂಘ್ರಿ ವಿಲೋಕನಾ ವಿಸ್ತರಣವಹುದು.

(ಎಂದಾತ ಮನದೊಳಗೆ ನಿಶ್ಚೈಸಿದನು... ಅರಸ ಕೇಳ್, ಸಂನ್ಯಾಸಿ ವೇಷದ ಪರಿಕರವನು ಅಳವಡಿಸಿ... ಶೌರಿಯ ಪುರದ ಹೊರ ಬಾಹೆಯಲಿ... ಹೆಚ್ಚಿದ ಬನದ ಮಧ್ಯದಲಿ... ಇರುಳು ಕಗ್ಗತ್ತಲೆಯೊಳು ಔಕುವ ಸರಿವಳೆಗೆ ಸಲೆ ಸೇಡುಗೊಳುತ... ಮರನ ಹೊಳ್ಳಿನಲಿ ಉಬ್ಬರಿಸಿ ಕೃಷ್ಣನ ನೆನೆವುತಿದ್ದನು... ಅತ್ತಲು ದೇವನು ಸತ್ಯಭಾಮಾದೇವಿಯರ ಮೇಳದಲಿ ಇರುತಿರ್ದು... ಶಕ್ರನಂದನನ ಈ ವಿಲಾಸವ ನೆನೆದು ನಕ್ಕನು.)

ಸತ್ಯಭಾಮ : ಆವಳೋ ನೆನಹಿನಲಿ ಸುಳಿದಳು... ಭಾವದಲಿ ಸುಮ್ಮಾನವೇನು.

ಕೃಷ್ಣ : ದೇವಿ, ಬೇರೊಂದಿಲ್ಲ ಮನ ನಿನ್ನಾಣೆ... ಕೇಳು, ನರನ ನೀ ಕೇಳ್ದರಿಯಲಾ... ಎನಗೆ ಸೋದರದ ಮೈದುನನು... ಕುಂತಿಯ ವರ ಕುಮಾರಕನು... ಆತನು ಈ ದ್ವಾರಾವತಿಯ ಹೊರಗೆ ಮರದ ಹೊಳ್ಳೊಳು ಹೊಕ್ಕು ಸಿಕ್ಕಿದ ನರಿಯವೊಲ್ಯೆದಾನೆ... ನಾನು ಉಪಚರಿಸಿ ಬಹೆನು.

(ಎಂದು ಎನುತ ಅಸುರಾರಿ ಮಂಚವನು ಇಳಿದನು.)

ಅರಸಿ ಕೇಳು, ಈ ಬಂದ ಪಾರ್ಥನ ಕರೆದು ಉಪಾಯಾಂತರದೊಳು ಸರಸಿಜಾನನೆಯನು ಸುಭದ್ರೆಯನು ಈವೆನು... ಇಂದು ತಪ್ಪಿದರೆ... ಕರೆಸಿ ದುರ್ಯೋಧನಗೆ ಕೊಡಿಸುವ ಭರವು ಬಲಭದ್ರನದು... ಪಾರ್ಥನ ಬರವು ಲೇಸಾಯ್ತು.

(ಎನುತ ನಿಜಾಲಯವ ಹೊರವಂಟನು... ಅಲ್ಲಿಗೆ ಬಂದನು ಫಲುಗುಣನ ಕಂಡು ಎಂದನು.)

ಕೃಷ್ಣ : ಇಂದು ಈ ಶೈಲದ ಸಮೀಪದೊಳು ನಿಲು... ಬಲಭದ್ರನು ಐತಹನು... ಉಚಿತ ವಚನದಲಿ ಮಂದಿರಕೆ ಬರ ಹೇಳಿದರೆ ಬಾ... ಮುಂದೆ ನಿನ್ನಿಷ್ಟಾರ್ಥ ಸಿದ್ಧಿಪುದು.

(ಎಂದು ಪಾರ್ಥನ ಸಂತವಿಸಿ ಮುರವೈರಿ ಮರಳಿದನು.)

ಕೃಷ್ಣ : ಪರಮಹಂಸನ ಸುಳಿವು ಸಾಕ್ಷಾತ್ ಸರಸಿಜಾಕ್ಷನ ಲೀಲೆ ಗಡ... ನಮ್ಮರಸನ ಅಭ್ಯುದಯ ಪ್ರಪಂಚವಿದು.

(ಎಂದು ಹರಿ ನಗರದಲಿ ವಾರ್ತೆಯನು ಹರಹಿದನು... ತಾನು ಅರಿಯದಂತಿರೆ... ಬಳಿಕ ನೀಲಾಂಬರನು ಬಹಳ ಉತ್ಸವದೊಳು ಆತನಿದ್ದ ಎಡೆಗೆ ಐದಿದನು... ಆ ಮುನಿಪತಿಯನು ವಂದಿಸಿದನು... ಅಭಿವಂದಿತ ಆಶೀರ್ವಾದ ಸಂಗತಿಯಿಂದ ಚತುರ್ದಶ ವಿದ್ಯೆಗಳ ಗತಿಯ ವಿವರಿಸಿದನು... ಮೂಗಿನ ಬೆರಳಿನಲಿ ನಿಂದು ಬೆರಗಾಗಿ

ಸಾನಂದ ಮಿಗೆ...)

ಬಲರಾಮ : ನಮ್ಮಯ ಮಂದಿರಕೆ ನೀವ್ ಬಿಜಯ ಮಾಡುವುದು.

(ಎನುತ ಕೈಮುಗಿದ.)

ಅರ್ಜುನ : ನಾವು ಭಿಕ್ಷುಕರು... ಎಮಗೆ ರಾಜಗೃಹ ಅವಲಂಬನವೇಕೆ... ಶೈಲ ವನಾವಳಿಗಳಲಿ... ವರ ನದೀತೀರದಲಿ ವಾಸಿಪೆವು... ಭಾವಿತ ಪ್ರಾರಬ್ಧಕರ್ಮ ಫಲಾವಳಿಯನು ಉಪಭೋಗಿಸುತ... ದೇಹ ಅವಸಾನವನು ಈಕ್ಷಿಸುತ್ತ ಇಹೆವು.

ಬಲರಾಮ : ಅಹುದು ನೀವು ಏಕಾಂತ ಭವನದೊಳು ಇಹುದು... ಚಾತುರ್ಮಾಸವಿದು ಸಂನಿಹಿತವಾಯ್ತು... ಅದ ನೂಕಿ ಇಚ್ಚೆಯಲಿ ಬಿಜಯಂಗೈವುದು... ವಿಹಿತ ಚರಿತರು ನೀವಲಾ... ಶುಶ್ರೂಷೆಯನು ನಿರ್ವಹಿಸುವೆನು... ಕಿಂಗಹನ ಮಾಡದಿರಿ.

(ಎಂದು ಯತಿಯನು ಅರಮನೆಗೆ ತಂದನು... ಇವರನು ಅರಮನೆಯೊಳಗೆ ಕನ್ಯಾಭವನ ಮಧ್ಯದೊಳು ಇರಿಸಿ... ಬಳಿಕಿನೊಳು ಇವರ ಶುಶ್ರೂಷೆಗೆ ಸುಭದ್ರಾದೇವಿಯನು ಕರೆಸಿ ನೇಮಿಸಿದ.)

ಬಲರಾಮ : ಇವರು ಅಪೂರ್ವ ಮಹಾತ್ಮಕರು... ನೀನು ಇವರ ದೇವಾರ್ಚನೆ ಸಮಾಧಿ ಪ್ರವರದಲಿ ಮಾಡುವುದು.

(ಎಂದು ಬೆಸಸಿದನು... ಹೊರಗೆ ಕೃಷ್ಣನ ಕರೆದು ಇವೆಲ್ಲವನು ಅರುಹಿದಡೆ, ಮರುಳಾಡಿದನು.)

ಕೃಷ್ಣ : ಮೈಮರೆದು ತಂಗಿಯನು ಒಯ್ದು ಬಣಗು ತಿರುಕನಲಿ ಬಿಸುಟಿರೆ... ಅರಸು ಮಗಳನು ತೊತ್ತುಗೆಲಸಕೆ ಪರುಠವಿಸಿದಿರೆ... ಶಿವ ಶಿವಾ... ನಾವು ಅರಿಯೆವು... ಅಲ್ಲಿಯ ಲೇಸು ಹೊಲ್ಲೆಹವು ಎಮ್ಮದಲ್ಲ.

ಬಲರಾಮ : ಮರುಳೆ ನೀ ಹೋಗು... ಆರನು ಏನೆಂದು ಅರಿಯೆ... ಯತಿ ಸರ್ವಜ್ಞನು... ಈತನು ತಿರುಕನೇ... ಸಾಕ್ಷಾತು ಲಕ್ಷ್ಮೀಕಾಂತ

ಸನ್ನಿಭನು... ಹಾನಿ ವೃದ್ಧಿಯ ಹರಿಬವು ಬರಲಿ ಮಾಣಲಿ ಎನ್ನದು... ನಾವು ಯತಿ ಮಹಾತ್ಮರನು ಅರಿಯದವರೇ.

(ಎನುತ ಬಲರಾಮ ಗಜರಿದನು.)

ಕೃಷ್ಣ : ಆದರೆ ಒಳ್ಳಿತು... ಈ ಯತಿಪತಿಯ ತಂಗಿ ಬೆಸಗೈದು ಆದರಿಸಲಿ... ನಿಮಗೆ ಈ ದುರಾಗ್ರಹವೇಕೆ... ಅಗ್ರದಲಿ ಫಲವನು ಕಾಂಬಿರಿ... ಇದೆ ಮೌನದೊಳು ಹೋದೆವು.

(ಎನುತ್ತ ಅಬುಜೋದರನು ಹಿಂಗಿದನು... ಹರಿಯ ವಿನೋದ ರಚನೆಯನು ಏನನು ಎಂಬೆನು ಭೂಪ ಕೇಳೆಂದ... ಬಾಲಕಿಗೆ ಸಂನ್ಯಾಸಿ ದೇವರ ಮೇಲೆ ಮನವಾಯ್ತು... ಅವರಿಗೆ ಈಕೆಯ ಮೇಲೆ ಚಿತ್ತ ನೆಲಸಿತು... ಜಪ ಸಮಾಧಿಗಳ ಕಾಣೆನು... ಅನ್ಯೋನ್ಯ ರಾಗ ಮೇಳವಿಸಿತು... ಅಭಿಲಾಷೆ ಛಡಾಳಿಸಿದುದು... ಇಬ್ಬರ ಧೈರ್ಯವು ಅಡಿಗಡಿಗೆ ಕಾಮನ ಬೇಳುವೆಗೆ ಬೆಂಡಾದುದು... ಬಾಯ್ ಮಿಡುಕುವುದು...

ಚಿತ್ತವು ಅವಳಲಿ ತೊಡಕಿಹುದು... ಬೆರಳಲಿ ಜಪಮಾಲೆ ನಡೆವುತಿಹುದು... ಅಕ್ಷಿಗಳು ಮಾನಿನಿಯ ಮುಕ್ಕುಳಿಸಿಹವು... ಕೈ ಮೃಡನ ಪೂಜೆಗೆ... ಮನ ಸುಭದ್ರೆಯ ಹಿಡಿಹಿನಲಿ... ಹೊರಗೆ ವರ ಸಮಾಧಿಯ ತೊಡಹು... ಒಳಗೆ ಇಂದುಮುಖಿ ನರನಾಥ ಕೇಳೆಂದ...

ಮಳೆಗಾಲವು ಜಾರಿದುದು... ಮುಗಿಲುಗಳು ಅತಿ ಬೆಳುಪೇರಿದವು... ಹಗಲಿರುಳು ರವಿಶಶಿಗಳ ಉಪಟಳಕೆ ಕತ್ತಲೆ ಸೂರೆವೋದುದು... ನದಿ ನದಗಳು ತಾರಿದವು... ಕಳಹಂಸೆಗಳು ಅಭ್ರಕೆ ಹಾರಿದವು... ತಾವರೆಗಳು ತಲೆದೋರಿದವು ಎನೆ ಶರತ್ಸಮಯ ಬಂದುದು... ಹರಿ... ವಸುದೇವ.. ದೇವಕಿ... ಉಗ್ರಸೇನ ನೃಪ ಶುಭದಿವಸ ಸುಮುಹೂರ್ತದೊಳು ಇರುಳು ಸುದತಿಯನು ವೈವಾಹವನು ಮಾಡಿದರು... ಬಲನು ಅರಿಯದ ಅಂದದಲಿ ಮದುವೆಯಾಯಿತು... ಹೂಡಿದ ರಥವನು

ಏರಿಸಿ ಮದವಳಿಗೆ ಸಹಿತ ಅರ್ಜುನನ ಮುರವೈರಿ ಕಳುಹಿದನು... ಪುರವ ಹೊರವಂಟವರು ಬರಲು... ಅರಮನೆಯೊಳಗೆ ಅಬ್ಬರಣೆಯಾಯ್ತು... ಸಂನ್ಯಾಸಿಯ ಸಮಾಧಿಗಳ ಸಂಕರುಷಣಂಗೆ ಅರುಹಿದರು.)

ಬಲರಾಮ : ತಿರುಕ ಮುನಿ ಅರಸು ಮಗಳನು ಕೊಂಡು ಹಾಯ್ದನೆ... ಮಝು ಭಾಪು... ಮುರಾರಿಯ ಮಾತು ತಾಗಿತು... ಸುಭಟರ ಕರೆ.

(ಎನುತ್ತ ಗರ್ಜಿಸಿದ.)

ಕೃಷ್ಣ : ನಾವ್ ಮುನ್ನ ಹೇಳವೇ... ನೀವ್ ನೀಲಾಳಕಿಯ ಕೆಡಿಸಿದಿರಲಾ... ಕಡು ಮುಳಿದು ಇನ್ನು ಮಾಡುವುದೇನು... ನೀವು ಆಳ ನೆರಹಿದಡೆ ಅಪಕೀರ್ತಿಯು ಚಾಳಿಸಿದುದು... ಅಕಟ, ಯದುವಂಶವ ವಿಟಾಳಿಸಿತು.

(ಎನೆ... ಹಲಧರನು ಕರವಾಳ ಜಡಿದು... ಅರ್ಜುನನ ರಥವ ಐದಿದನು... ಆ ಪಾರ್ಥ ನಾರಾಚದಲಿ ಮುಸುಕಿದನು... ಹಲಧರನ ಸೇನೆಯ ನಿಪ್ಪಸರದಲಿ ಕುಸುರಿ ತರಿದನು... ಅಗಣಿತ ಬಲವನು ಕೊಂದನು.)

ಬಲರಾಮ : ಸಂನ್ಯಾಸಿ ಎಸೆವನೇ... ಮಾಡಿದ ಹುಸಿ ಉಪನ್ಯಾಸಕ್ಕೆ ರಸನೆಯನು ಕೊಯ್ವೆನು... ದೇವಕಿಯ ಮೇಲಾಣೆ.

(ಎನುತ ಗರ್ಜಿಸಿದ... ಬಳಿಕ ಕೃಷ್ಣನು ಹರಿದನು... ಈತನ ಕೆಲಕೆ ಕರೆದನು.)

ಕೃಷ್ಣ : ಸಾಕಿನ್ನು, ಬಹಳ ರೋಷವ ನಿಲಿಸಿರೇ... ವಸುದೇವಂಗೆ ದೇವಕಿಗೆ ಮುಳಿವುದು... ಈತನ ದೋಷವಲ್ಲ... ಆವು ಇದ ತಿಳಿದೆವು... ಅರ್ಜುನನು ಗಡ... ನಾವು ಅಳುಕಲು ಇನ್ನೇಕೆ.

(ಎನುತ ಹಲಾಯುಧನ ಬೋಧಿಸಿದನು.)

ಬಲರಾಮ : ಅಕಟ, ಸಕಲ ಯಾದವರು ದುರ್ಯೋಧನಗೆ ತಪ್ಪಿಸಿ ಇಲ್ಲಿಗೈದರೆ... ವಿಕಳಮತಿ ನಾನ್ಯೆಸಲೇ... ಕೃಷ್ಣನ

ಕುಮಂತ್ರವಿದು... ಗರುವರಿಗೆ ಅಕುಟಿಲ ಅಂತಃಕರಣತನ ಬಾಧಕವಲೇ...

(ಎನುತ ಸಭ್ರುಕುಟಿ ರೌದ್ರಾನನನು ಬಲರಾಮ ಪುರಕೆ ಮುರಿದನು.. ಹರಿಸಹಿತ ಬಲರಾಮನು ಅತ್ತಲು ತಿರುಗಿದನು... ಪಾರ್ಥ ಪವಮಾನ ಜವದಲಿ ಪಯಣದ ಮೇಲೆ ಪಯಣದಲಿ ಪುರಕೆ ಬಂದನು... ಪುರದ ಬಹಿರ್ ಉದ್ಯಾನದಲಿ ಸಂವರಿಸಿ ರಥವನು ನೆಳಲಲಿ ನಿಲಿಸಿ... ಪರಿಗತ ಶ್ರಮನಾಗಿ ನಗುತ ಸುಭದ್ರೆಗೆ ಇಂತೆಂದ.)

ಅರ್ಜುನ : ಅರಮನೆಗೆ ನಡೆ... ದ್ರುಪದ ನಂದನೆ ಕರೆಸಿದರೆ ನೀ ಹೋಗು... ನಿರುತವನು ಅರುಹದಿರು... ತುರುಗಾಹಿಗಳ ಮಗಳೆಂದು ನುಡಿ ಸಾಕು... ಅರಸಿ ಮಿಗೆ ಮನ್ನಿಸುವಳು... ಅಲ್ಲಿರು... ಬಳಿಕಲು ಕರೆಸಿಕೊಂಬೆನು.

(ಎಂದು ಈ ಸರಸಿಜಾಕ್ಷಿಯ ನಿಜ ರಾಜಮಂದಿರಕೆ ಕಳುಹಿದನು... ಅಬಲೆ ಬಂದಳು... ಸಮಸ್ತ ಪುರಜನವು ಇಂದುವದನೆಯ ನೋಡುತಿದ್ದುದು.)

ಪುರಜನ : ಮನುಜೆಯೇ... ಸುರಲೋಕ ವಧುವು...

(ಎನುತ ಮಂದಿ ಕವಿದುದು... ಮಂದಿರಕೆ ಬರೆ... ಬಾಗಿಲ ಅವದಿರು ಅಲ್ಲಿಯದಲ್ಲಿ ನಿಂದರು... ಬಳಿಕ ಅರವಿಂದಮುಖಿಯರು ಕಂಡು ದ್ರೌಪದಿಗೆ ಹದನ ಅರುಹಿದರು... ಪಾಂಡವರ ಅರಸಿ ಕರೆಸಿ ಕಾಣಿಸಿಕೊಂಡು ಬೆಸಗೊಳಲು... ಈಕೆ ಪಾರ್ಥನ ಪರುಠವದ ಮಾತುಗಳನು ಎಂದಳು... ನಗೆಯ ಮೊಳೆ ಮಿನುಗೆ ಪಾಂಚಾಲಿ...)

ದ್ರೌಪದಿ : ಸುರ ಭುಜಂಗಮ ವಧುವೊ ನೀ... ಮೇಣ್... ಅರಸು ಮಗಳೋ... ತಂಗಿ, ನೀ ಗೊಲ್ಲರ ಮಗಳೆ ಪುಸಿ.

(ಎನುತ ತಲೆದೂಗಿದಳು... ನಿಸ್ಸಾಳ ತತಿ ಮಸಗಿದವು ಗರ್ಜಿಸಿದವು... ದೂತರು ಅರ್ಜುನ ಬಂದನು ಇದೆಯೆಂದು ಒಸಗೆ ಮಾತಿನೊಳು ಅಲ್ಲಲ್ಲಿ ಊರ

ಸುಳಿದರು... ಶಶಿಮುಖಿಯರು ಉಪ್ಪಾರತಿಯ ಮಿಗಿಲು ಎಸೆವ ರತುನಾವಳಿಯ ಕಾಂತಾ ವಿಸರ ನೂಕಿತು... ಪಾರ್ಥ ರಾಜಮಂದಿರವ ಹೊಕ್ಕನು... ಅರಸ ಭೀಮರಿಗೆ ಎರಗಿ... ನಕುಲಾದ್ಯರನು ಕಾಣಿಸಿಕೊಂಡು... ದೇಶಾಂತರದ ತೀರ್ಥೋನ್ನತಿಯನು... ಮುರಹರನ ಸೌಹೃದವನು... ಆತನ ಕರುಣ ಕನ್ಯಾಲಾಭವನು... ಆ ವೃತ್ತಾಂತ ಸಂಗತಿಯ ವಿಸ್ತರಿಸಿ... ಅಗ್ರಜಾನುಜರ ಹರುಷಾಂಬು ಧಿಯೊಳು ಅದ್ದಿದನು...

ಅರಸ ಕೇಳೈ, ದ್ರೌಪದಿಯ ಮನ ಬರಿಸಿ... ಈಕೆಯನು ಬೇರೆ ಅರಮನೆಯೊಳು ಇರಿಸಿದನು... ಕಾಲ ವಿಭ್ರಮವ ಹರುಷದಲಿ ಕಳೆದರು... ಇರಲಿರಲು ಪಾರ್ಥಗೆ ಸುಭದ್ರೆಗೆ ವರ ಕುಮಾರಕನು ಉದಿಸಿದನು... ಅಭಿಮನ್ಯುವಿನ ಜನನೋತ್ಸವು ಅಭ್ಯುದಯ ವಿಸ್ತರಣವಾಯ್ತು.)

❍

38. ಖಾಂಡವ ವನ ದಹನ

(ಆದಿಪರ್ವ : ಇಪ್ಪತ್ತನೆಯ ಸಂಧಿ : ಪದ್ಯ 11 ರಿಂದ 69)

ಪಾತ್ರಗಳು

ಅರ್ಜುನ : ಪಾಂಡುರಾಜ ಮತ್ತು ಕುಂತಿಯ ಮಗ.

ಅಗ್ನಿದೇವ : ಒಬ್ಬ ದೇವತೆ.

ಕೃಷ್ಣ : ದ್ವಾರಾವತಿ ಪಟ್ಟಣದ ಒಡೆಯ. ಪಾಂಡವರ ಹಿತಚಿಂತಕ.

ದೇವೇಂದ್ರ : ದೇವತೆಗಳ ಒಡೆಯ.

ಬ್ರಹ್ಮ : ಒಬ್ಬ ದೇವತೆ.

ಸರ್ಪ : ಖಾಂಡವ ವನದಲ್ಲಿದ್ದ ಒಂದು ಹಾವು.

ದೇವತೆಗಳು : ದೇವಲೋಕದ ಪ್ರಜೆಗಳು.

ಖಾಂಡವ ವನ ದಹನ

ಅರಸ ಕೇಳೈ, ಹರಿ ಹಲವು ದಿನ ಸಂಚರಿಸಿ ಸೌಖ್ಯದೊಳಿರ್ದು ತಮ್ಮಯ ಪುರಿಗೆ ಬಲಭದ್ರನನು ಯಾದವರಾಯ ದಳಸಹಿತ ಸಮಾಧಾನದಲಿ ಕಳುಹಿಸಿ... ಇಂದ್ರಪ್ರಸ್ಥ ನಗರಿಯಲಿ ನರನೊಡನೆ ವೈಹಾಳಿ ಮೃಗಯಾ ವರ ವಿಹಾರದೊಳು ಇದ್ದನು... ಒಂದು ದಿನ ಹರಿ ಧನಂಜಯರು ಬನದಲಿ ಮೃಗಹರಣ ಕೇಳಿ ಕಳಾಪದಲಿ ಸಂಚರಿಸಿ... ಬಹಳ ಮಾರ್ಗಶ್ರಮದ ಭಾರದಲಿ ಬರುತ ನೀರಡಿಸಿದರು... ಸರಸಿಯನು ಕಂಡರು... ರಥವಿಳಿದು ನೆಳಲಲಿ ಪರಿಹೃತಶ್ರಮರಾಗೆ... ಹರಿ ಸರೋವರವ ಹೊಕ್ಕನು...

ಆ ಸಮಯದಲಿ ಭೂಸುರನು ಒಬ್ಬನು ಬಂದನು... ಕಿಡಿಗಳ ತುಷಾರದ ಮೀಸೆ ಗಡ್ಡದ... ಸುಳಿದಲೆಯ ಕಬ್ಬೊಗೆಯ ಜುಂಜುಗಳ... ಬಾಸರದ ಬಳಲುಡಿಗೆ... ಮಟ್ಟಿಯ ಧೂಸರದ ಮೈದೊಡಿಗೆ ಮೆರೆಯೆ... ವಿಲಾಸದಲಿ ಅರ್ಜುನದೇವನು ಇದ್ದ ಎಡೆಗೆ ನಡೆತಂದನು... ಹರಸಿ ವೇದಾರ್ಥವನು ಮಿಗೆ ವಿಸ್ತರಿಸಿ ಕೊಂಡಾಡಿದನು.

ಅರ್ಜುನ : ವಿಪ್ರನ ಪರಮ ಯೋಗ್ಯತೆಗೆ ಪರಮೇಷ್ಠಿ ಹೊರತಾಗಿ ಆರು ಸರಿ... ಬರವು ಇದೇನು... ಎನಗೆ ಏನು ಅನುಗ್ರಹ... ವರಿಸಿದರೆ ನಿಮ್ಮಿಷ್ಟವನು... ತಾನು ಗೋಚರಿಸುವೆನು.

(ಎನುತ ಭೂಸುರಗೆ ಪಾರ್ಥ ನುಡಿದನು.)

ಅಗ್ನಿದೇವ : ಪಾರ್ಥ ಕೇಳು, ಅತಿಗಹನವೇನ್... ನಾವು ಗ್ರಾಸಾರ್ಥಿಗಳು ಆದೆವು... ಎಮ್ಮ ಇಷ್ಟಾರ್ಥಸಿದ್ಧಿಯ ಘಟಿಸು ಸಾಕು...

ಸಮಗ್ರ ಫಲವಹುದು... ಅತಿಥಿ ಇರಲು ತೀರ್ಥವೇಕಿನ್ನು... ಪರಾರ್ಥ ಸಾಧನತನವೆ ಪರಮ ಸ್ವಾರ್ಥ ಎಂಬರು ಸುಜನರು.

(ಎಂದನು ಕಪಟ ದ್ವಿಜ ನಗುತ.)

ಅರ್ಜುನ : ಕೊಟ್ಟೆನು.

(ಎಂದನು... ಇವರು ಒಡಬಟ್ಟರು... ಈ ನುಡಿ ಕೇಳಿ ದನುಜ ಘರಟ್ಟ ಬಂದನು... ಹವ್ಯವಾಹನನ ಹದನನು ಅರಿದನು.)

ಕೃಷ್ಣ : ಕಿರೀಟಿ, ಕೊಟ್ಟುದೇನು... ಇವರೇ ಮುಟ್ಟಿದರೆ ಮುನಿವವರಲ್ಲೈ... ನೀ ಕೊಟ್ಟುದು ಉಣಬಡಿಸುವುದು ಭಾರವಿದು ಎಂದನು ಅಸುರಾರಿ... ಪಾರ್ಥ ಮುಖರನಾದ್ಯೆ... ಈತನು ಬರ್ಹಿರ್ಮುಖರ ಬಾಣಸದಾತ... ಖಾಂಡವ ವನದ ನಿರ್ದಹನ ಸುಖವೆ... ಹೇಳೈ ತಂದೆ... ನಿಖಿಳ ನಿರ್ಜರ ಬಲಸಹಿತ ಶತಮಖನೊಡನೆ ವಿಗ್ರಹವಲಾ... ಭಂಗವು ಸಂಮುಖಕೆ ಬಂದುದು.

(ಎಂದನು ನಗುತ ಮುರವೈರಿ.)

ಅರ್ಜುನ : ಕೃಷ್ಣ ಭಂಗವೇಕೈ... ನಿರ್ಜರ ಪುಂಗವನ ಗೆಲಿದು ಖಾಂಡವ ಮಹಾವನವ ಅವನ ಬಾಣಸಿಗಂಗೆ ಬಾಣಸ ಮಾಡುವೆನು... ನೀನು ಅಂಘವಣೆಯನು ನೋಡು... ಏಕಾಂಗದಲಿ ನಿರ್ವಹಿಸುವೆನು... ಭಯ ಭಂಗವುಂಟೇ... ನಿನ್ನ ಕೃಪೆಯಿರಲಿ.

ಅಗ್ನಿದೇವ : ಘೃತಯೋನಿ ಮೆಚ್ಚಿದನು... ಪೂತುರೆ, ನೀನು ನಿಚ್ಚಟನು.

(ಎನುತ ಕಿಡಿಗಳ ಬಿಚ್ಚಲು... ಅಚ್ಚರಿಯನು ಏನೆಂಬೆನೈ... ಚಾಪ ಮಾರ್ಗಣ ರಥ ತುರಂಗಚಯ ಉದುರಿತು... ಸಪ್ತಾರ್ಚಿ ಇತ್ತನು.)

ಅಗ್ನಿದೇವ : ಮುಚ್ಚು ಮರೆಯೇಕೆ... ಇನ್ನು ಇಂದ್ರನ ವನವನು ನಮಗೆ ಉಣಬಡಿಸು ಸಾಕು.

(ಎಂದ... ಧರಣಿಪತಿ ಕೇಳು, ಅಗ್ನಿಯು ಹರಿ ಧನಂಜಯರಿಗೆ ರಥಂಗಳನು... ಉರು ಶರಾವಳಿ... ದಿವ್ಯಧನು... ಕೌಮೋದಕೀ ಗದೆಯ... ವರ ತನುತ್ರ... ಸಿತಾಶ್ವ... ಅಕ್ಷಯ ಶರ ನಿಷಂಗಾದಿಗಳನ್ ಇತ್ತನು... ಇವರು ಹರುಷದಲಿ ಉಬ್ಬರಿಸಿದರು... ನಯನ ವಾರಿಯಲಿ ನೆನೆದರು... ಇವರು ರಥವೆರಡನು ಹೂಡಿದರು... ಕಪಿ ಗರುಡ ಸಿಂಧವ ಸಘಾಡದಲಿ ಜೋಡಿಸಿದರು... ಧನಂಜಯ ಅಚ್ಯುತರು ನಗುತ ಏರಿದರು... ಮೂಡಿಗೆಯ ಮೊನೆಗಣೆಗಳಿಗೆ ಕೈನೀಡಿ ಬೊಬ್ಬಿರಿದರು... ಧರಣಿ ಥಾಳಿಯಲಿ ಅಬ್ಬರಣೆ ಬಿರಿದುದು... ದಿಗಂತವ ನೀಡಿರಿದುದು... ಹರಿ ಪಾಂಚಜನ್ಯವನು ಉಬ್ಬಿ ಬೊಬ್ಬಿರಿದು ಧ್ವನಿ ಮಾಡಿದನು... ಪಾರ್ಥನ ತೆಬ್ಬಿನ ಅಬ್ಬರ ಆ ಬ್ರಹ್ಮಾಂಡ ಮಂಡಲವ ತೀವಿತು... ಶರದ ಉಬ್ಬರದ ಬಲುಗಿಡಿಯ ಗಡಣವು ಗಗನವನು ಗಬ್ಬರಿಸಿದುದು... ಉಷರ್ಬುಧನ ಕೈ ಬೆಳೆದುದೈ ನರನಾಥ ಕೇಳೆಂದ... ಸುರವನಕೆ ಥಾಳಿಯಿಟ್ಟರು... ಸುರಜಾಲ ಬೊಬ್ಬೆಯಲಿ ಸರಿಯಿತು... ಖಾಂಡವದ ಮಧ್ಯದಲಿ ಶತ ಉತ್ಪಾತ ದೆಖ್ಖಾಳಿಸಿದುದು... ಕೂಳಿಗಳ ಕುಡಿಮೀನವೋಲ್ ವಿಹಗಾಳಿ ಹುದುಗಿತು... ವನಪಾಲಕರು ನಡುಗಿದರು... ಹರಿ ಚಂದನಾದಿಗಳು ನಿಂದು ಒಣಗಿದವು... ಬಾಣವ ತೂಗಿ ಹೂಡಿ ಕಿವಿವರೆಗಾಗಿ ಬರಸೆಳೆದು ಆರಿ ಬೊಬ್ಬಿರಿದಾಗಲ್... ಧನಂಜಯನು ಆ ಧನಂಜಯಗೆ ಇಂತೆಂದನು.)

ಅಗ್ನಿದೇವ : ಈಗಲ್ ಈ ವನದೊಳಗೆ ಖಗ... ಮೃಗ... ನಾಗ... ಸುರ... ದನುಜಾದಿ ಜೀವರ ಹೋಗಲೀಯದೆ ತರುಬಿ ಶರದಲಿ ಕಾಯಬೇಕು.

ಅರ್ಜುನ : ಹೈ... ನಿಮಗೆ ಈ ಸಮಸ್ತ ಪ್ರಾಣಿಸಹಿತ ಸುರೇಶನ ಉದ್ಯಾನವನು... ಸಮಗ್ರ ಆತಿಥ್ಯದಲಿ ಬಾಣ ಧಾರೆಯಲಿ ಕೊಟ್ಟೆನು... ಸುಪುರೋಡಾಶವಿದೆ... ಸಮಿದಾಜ್ಯ ಸಹಿತ

ಸಮಾಶ ವಿಸ್ತಾರವನು... ನೀ ಸಮಾಧಾನದಲಿ ಕೊಂಬುದು... ಭೀತಿ ಬೇಡ.

(ಎನುತ ತಿರುವಾಯನು ಒದೆದು ಬಿಡೆ... ಅಂಬು ಉಬ್ಬಿನಲಿ ಬೊಬ್ಬಿರಿದು ಸುರಪನ ವನವ ಮುತ್ತಿತು... ಕೂಡೆ ಹೊತ್ತಿತು... ಹೊಗೆಯ ಹೊರಳಿಯಲಿ ತನಿಗಿಡಿಯ ದಳ್ಳುರಿಯ ನಾಲಿಗೆ ಕೊನೆಗಳು ಅಲ್ಲಾಡಿದವು... ಕಡು ಲಾಗಿನಲಿ ಉರಿ ಲಂಬಿಸಿ... ಲಲಿತ ನಂದನವ ಚುಂಬಿಸಿದುದು... ಹೊದರಿನಲಿ ಉರಿ ಭುಗುಭುಗಿಲು ಭುಗಿಲ್ ಎಂದು ಅಂಬರವನು ಒದೆದುದು... ಒಣಗಿದ ಬಿದಿರ ಮೆಳೆಯಲಿ ಧಗಧಗಿಸಿ ಛಟಛಟನೆ ಛಟಛಟಿಸಿ... ಕದಲಿ ಖರ್ಜೂರಾದಿ ತರು ಜಾಲದಲಿ ಸಿಮಿ ಸಿಮಿ ಸಿಮಿ ಸಿಮಾಯತವೊದಗೆ... ಗಹನ ಉದರದೊಳಗೆ ಘನ ವಹ್ನಿ ಘಾಡಿಸಿತು... ಏನನು ಎಂಬೆನು... ದಿವಿಜ ರಾಜೋದ್ಯಾನ ಹಾನಿಯನು... ಆತನ ಆಳು ಕೃಶಾನುವಿನ ತನಿಗೊಬ್ಬನು... ಈ ಕೃಷ್ಣಾರ್ಜುನರ ಬಲುಹ... ಅಂದು ಆ ನಿಖಿಳ ನಿರ್ಜರರು ವಿಮಾನಗತಿಯಲಿ ತಾಗಿ... ಗಗನದಲಿ ಅವಮಾನಗತಿಯಲಿ ಗೀರ್ವಾಣಪತಿ ಪುರಕೆ ಹಾಯ್ದರು.)

ದೇವೇಂದ್ರ : ಹೊಗೆಯ ಬಳಿಯಲಿ ತಳಿತ ಹುಯ್ಯಲ ಬೆಗಡು ಇದೇನೋ ಕೇಳು. ಸಿರಿಮೊಗದ ದುಗುಡದ ಸಾವಿರ ಆಲಿಯೊಳು ಒಗುವ ಕಿಡಿಗಳಲಿ... ಹಗೆಗಳು ಆರು... ನಿವಾತ ಕವಚಾದಿಗಳೊ... ತಾನಾರು...

(ಎಂಬ ಶಕ್ರನ ದುಗುಡವನು ದೇವಾಳಿ ಕಂಡುದು... ನರನ ದೂರಿದರು.)

ದೇವತೆಗಳು : ಪಾರ್ಥ... ನಿನಗೆ ಮಗನೇ... ಶಿಖಿಯು ನಿನ್ನ ಅರಮನೆಯ ಬಾಣಸದಾತನೇ... ಮುರವೈರಿ ನಿನಗೆ ಅನುಜನೇ... ಅನುಕೂಲರಾದರೆಲೆ... ಬನದ ಬೇಗೆಯೊ... ಪರಿಭವಾಲಂಬನದ ವೊಸಗೆಯೊ ಬಂದುದಿದೆ... ಮನೆಯ ಬಿಡು... ಮನ್ನೆಯ ಗಂಡನಾಗು.

(ಎಂದುದು ಸುರಸ್ತೋಮ.)

ದೇವೇಂದ್ರ : ಐಸಲೇ... ನಮ್ಮವರಲಾ... ಹೋ ಹೋ... ಸುರರು ಕಳವಳಿಸದಿರಿ... ಪಾವಕನು ಎಮ್ಮ ಖಾಂಡವವ ಆಪೈಸನು ಆಹುತಿಗೊಳಲಿ... ಈ ಸುರರಿಗೆ ಆ ನರರಿಗೆ ಅಂತರವೇಸು... ಪೂತುರೆ... ಕಾಲಗತಿ.

(ಎನುತ ಆ ಸುರೇಶ್ವರ ಕೃಷ್ಣ ಪಾರ್ಥರಿಗೆ ಖಾತಿಗೊಂಡನು.)

ದೇವೇಂದ್ರ : ಕಾಹು ತೆಗೆಯಲಿ... ಕಲ್ಪಮೇಘ ವ್ಯೂಹಗಳ ಬರಹೇಳು... ಕೃಷ್ಣ ಧನಂಜಯ ದ್ವಯದ ಸಾಹಸವನು ಇದರೊಳಗೆ ಕಾಂಬೆನು... ಈ ಹದಕೆ ಪಡಿ ಪುಚ್ಛವಿಲ್ಲ... ಖಾಂಡವವ ಅವಗಾಹಿಸಲಿ... ಹುಲ್ಲೆಯ ಹೂಹೆಗಳು ಹೆಬ್ಬುಲಿಗೆ ಹಾಯ್ವವು.

(ಎನುತ್ತ ಗರ್ಜಿಸಿದ... ಅರಸ ಕೇಳ್, ಧರಣಿ ಅಗಲಕೆ ಕಲ್ಪಾಂತ ಮೇಘೋತ್ಕರದ ಪಾಳಯವ ಎತ್ತಿ ಬಿಟ್ಟುದು... ಸಿಡಿಲ ಮಿಂಚುಗಳು ಧಾಳಿಯಿಟ್ಟವು... ಕರಿಯ ಬರಿಕೈಗೆ ಎಣೆಯೆನಿಪ ನಿಷ್ಠುರದ ಧಾರಾಸಾರ ತೆರಳಿಚಿ... ಆ ಖಾಂಡವದ ಸೀಮಾ ಸನ್ನಿವೇಶದಲಿ ಸುರಿದುದು... ಈ ಸಮಸ್ತ ಬಲಾಹಕಾವಳಿ... ಆ ಸಕಲ ಸಾಗರವನು ಒಂದೇ ಶ್ವಾಸದಲಿ ತೆಗೆದೆತ್ತಿ ಬನದ ಮಧ್ಯದಲಿ ಮೊಗುಚಿದವು... ಜಲದಲಿ ಘಾಸಿಯಾದನು ವಹ್ನಿ... ಏಸು ಸಾಹಸ ಸತ್ವ ತನಗುಂಟು ಐಸರಲಿ ತಲೆಯೆತ್ತಿ ಕೃಷ್ಣ ಪಾರ್ಥರಿಗೆ ನುಡಿದನು.)

ಅಗ್ನಿದೇವ : ಇಂದ್ರನ ಕೂಡೆ ಕಲಹ... ಇವು ಕಲ್ಪದ ಮಳೆಗಳು... ಇವು ಊಟವನು ಮಾಣಿಸಿದವು... ಅಣಲಿನ ತುತ್ತನು ಎಳೆದವು... ಅರ್ಜುನ ಕಾಯ್ದುಕೊಳ್ಳು.

(ಎನಲು... ಪಾರ್ಥ ವಹಿಲದಲಿ ಮಳೆಗೆ ಶರಪಂಜರವ ವಿರಚಿಸಿ... ಬಳಿಕ ಮೇಘವ್ರಜವನು ವಾಯವ್ಯಾಸ್ತ್ರದಲಿ ನಿಸ್ಫಲಿತ ಎಚ್ಚನು... ಅರಸ, ಪಾರ್ಥನ ಅನೂನ ಶಕ್ತಿಯನು

ಏನ ಹೇಳುವೆನು... ಪುಷ್ಕಳಾವರ್ತಾದಿ ಘನಘಟೆಯ ಪವಮಾನ ಶರದಲಿ ಉರುಬಿದನು... ಭಾನು ತಿಮಿರಂಗಳಿಗೆ ಮೇಘ ಮಹಾನಿಲಂಗಳಿಗೆ ಆವುದು ಅಂತರ... ಸೋನೆ ತೆಗೆದುದು... ಆ ಖಾಂಡವ ಮಹೋದ್ಯಾನ ಹೊಗೆದುದು... ಮೇಘವನು ಹಾರಲು ಊದಿತು... ಕಿಡಿ ತೂರಲು ಉಬ್ಬರಿಸಿದುದು... ಖಾಂಡವದೊಳಗೆ ಬಿರುಗಾಳಿ ಸುಳಿಸುಳಿದು ವಹ್ನಿಯನು ಏರಿಸಿತು... ಅಮರರಿಗೆ ಮೋರೆ ಒಣಗಿದುದು.)

ದೇವೇಂದ್ರ : ಮೈಮಾರಿಗಳ ಸುಡು... ಮೂಲೆಯವದಿರು ಮೀರಿದರಲಾ...

(ಎನುತ ಸುರಪತಿ ಗಜವ ತರಿಸಿದನು... ಅಮರರು ಮುಂಗುಡಿಯಲಿ ನೆರೆದುದು... ಸಿದ್ಧ... ವಿದ್ಯಾಧರ... ಮಹೋರಗ... ಯಕ್ಷ... ರಾಕ್ಷಸ... ಗರುಡ ಕಿನ್ನರ... ಸಾಧ್ಯ... ಗುಹ್ಯಕ... ಭೂತ... ಗಂಧರ್ವ... ತರಣಿ... ವಸು... ರುದ್ರಾದಿಗಳು ಮೋಹರಿಸಿದರು... ಇಂದ್ರನ ಸಿರಿಯ ರಭಸವನು ಏನನೆಂಬೆನು ಭೂಪ ಕೇಳೆಂದ... ಅಮರವ್ರಾತ ಮಸಗಿತು... ಝಲ್ಲರಿಗಳು ಅಭ್ರವ ಮುಸುಕಿದವು... ಇಂದ್ರನ ವಿಸಸನಕೆ ಅಸುಗಳನು ಮೆಚ್ಚಿಸುವೆವು ಎನುತ ತಮತಮಗೆ ಮುಸುಕಿದರು... ಮೃಗರಾಜ ಸಿಂಹದ ಮುಸುಕನು ಉಗಿವ ಅಂದದಲಿ ಧನಂಜಯ ಅಚ್ಯುತರ ಮುಂದೆ ಬಾಣ ಪ್ರಸರವನು ಹರಹಿದರು.)

ಅರ್ಜುನ : ಹೊಣೆ ಮಿಗೆ ಹೊಕ್ಕು ಬಹುಬಾಣವನು ಎಚ್ಚರೋ... ದೃಢಬಾಣರೋ ಗೀರ್ವಾಣರೋ... ನೀವಾರು ನುಡಿಯಿರಲೈ... ಮಹಾದೇವ, ಸಾಣೆಯ ಅಲಗಿಗೆ ಸೋಲುವಿರಿ... ತನಿಶೋಣಿತವ ನೀವ್ ಕೊಡದೆ ಹಿಮ್ಮೆಟ್ಟಿದರೆ ಸುರಪತಿಯಾಣೆ.

(ಎನುತ ನರನು ಬೊಬ್ಬಿರಿದು ಎಚ್ಚ... ಅರ್ಜುನನ ಎಸುಗೆಯಲಿ ತುರುಗಿ ಕೂರಂಬುಗಳು ಮೈಯಲಿ ಮುರಿದು

ಅಮರನಿಕಾಯ ಕೈಮರೆದುದು... ದೊರೆಯ ಮನ್ನಿಸದೆ ಕೆದರಿತು... ಈ ಕೃಷ್ಣಾರ್ಜುನರ ಬೊಬ್ಬಿರಿತಕೆ... ಅವರ ಎದೆ ಒಡೆಯಲು ಮುರಿದುದು... ದೇವಸಂತತಿ ಇಂದ್ರನ ಮರೆಯ ಹೊಕ್ಕುದು ಭೂಪ ಕೇಳೆಂದ.)

ಅರ್ಜುನ : ನರರು ರಚಿಸಿದ ಹವ್ಯಕವ್ಯ ಉತ್ಕರ ಹವಿರ್ಭಾಗವನು ತಿಂದು ಉಬ್ಬರಿಸಿ... ದೇವಸ್ತ್ರೀ ಕದಂಬದ ಖೇಳ ಮೇಳದಲಿ ನಿಮಗೆ ಇರವು... ನಿಮಗೇಕೆ ಈ ರೌದ್ರಬಾಣಸ್ಫುರಿತ ಕರ್ಕಶ ವಿಸ್ಫುಲಿಂಗ ಉತ್ಕರದ ಝಳ.

(ಎಂದನು ಪಾರ್ಥ ನಸುನಗುತ... ಶಕ್ರನು ಮುರಿದ ನಿರ್ಜರ ಸೇನೆಗೆ ಅಭಯದ ಕರವ ನೆಗಹಿ... ಕರೀಂದ್ರನನು ಅಂಕುಶ ಮೊನೆಯೊಳು ಶಿರ ಬಿರಿಯಲು ಒತ್ತಿ... ಮಹೋಗ್ರ ಕೋಪದಲಿ ನರ ಮುರಾಂತಕರ ಇದಿರಿನಲಿ ಮದಕರಿಯ ಬಿಟ್ಟನು... ಅಭ್ರದ ಸೂತ ಮಾಗಧರು ಆತನ ಬಿರುದ ಸಂಭಾವಿಸಿದರು.)

ಸೂತ ಮಾಗಧರು :ನಮುಚಿ ಮಸ್ತಕ ಶೂಲ... ಬಲ ಸಂತಮಸ ಭಾಸ್ಕರ... ಜಂಭ ಭುಜ ವಿಕ್ರಮ ಮಹಾಂಬುಧಿ ಕುಂಭಸಂಭವ... ವೃತ್ರ ಗಿರಿ ವಜ್ರ... ಕಮಲಭವ ಹರವಿಷ್ಣು ಹೊರೆಗಾದ ಮಿತ ಸುರಗಣ ಮೌಳಿಮಣಿ ಸಂಕ್ರಮಣ ಚತುರ ಪದಾಬ್ಜ...

(ಎಂದುದು ವಂದಿ ಸಂದೋಹ... ಸುರಪತಿ ಗಜವನ ನೂಕಿದನು... ಕೃಷ್ಣ ಪಾರ್ಥರು ವ್ಯಾಕುಲರಲೇ...)

ಅರ್ಜುನ : ವಾಸವ, ಇದೇಕೆ ನಿಮಗೆ ಈ ವಾಸಿ... ಮರಳುವದು ಲೇಸು... ನಾಕ ನಿಳಯರು ತಂದ ಗೆಲವೇ ಸಾಕು... ನಿಮಗೆ ಸೋಲುವರಲ್ಲ... ವಿವೇಕವುಳ್ಳರೆ ತಿರುಗಿ.

(ಎಂದನು ಹರಿಗೆ ಕಲಿಪಾರ್ಥ... ಜನಪ ಕೇಳು, ಆ ಸಮಯದೊಳು ವಾಗ್ವನಿತೆಯ ಅರಸನು ಗಗನಮಾರ್ಗ ದೊಳು ಅನಿಮಿಷಾಧಿಪನಲ್ಲಿಗೆ ಐತರೆ... ಸುರನಿಕರ ಕಂಡು ತನತನಗೆ ಭಾಳದಲಿ ನಿಜ ಕರ ವನರುಹವ

ಮುಗಿಯಿಸಿದರು... ಇಂದ್ರಂಗೆ ಅನುವರವ ಮಾಣಿಸಲು ಬೇಕೆಂದು ಅಬ್ಜಭವ ಇಳಿದನು.)

ಬ್ರಹ್ಮ : ನೀನು ಮರುಳನ್ಯೆ... ಇವರನು ಆರ್ ಎಂದು ಅರಿಯಲಾ... ಮುರಹರನು ನಾರಾಯಣನು... ಧನಂಜಯನು ನರನಲ್ಲಾ... ಇವರು ಕಿರುಕುಳರೆ... ನೀನು ಮರಳು.

(ಎಂದು ಪರಮೇಷ್ಠಿಯು ಇಂದ್ರನ ಆನೆಯ ತಿರುಹಿದನು... ಧರಣಿಪತಿ ಕೇಳು, ಇತ್ತಲು ಆ ವನಾಂತದಲಿ ಅನಲ ಕೇಳಿಯನು... ಜಂಬು... ಚೂತ... ಪಲಾಶ... ವಟ... ದಾಳಿಂಬ... ಬಿಲ್ವ... ತಮಾಲ... ಚಂಪಕ... ನಿಂಬ... ಬಕುಳ... ಕಪಿತ್ಥ... ಕುಟಜ... ಆಶೋಕ... ಪುನ್ನಾಗ... ತುಂಬುರ... ಅರಳಿ... ಲವಂಗ... ಪೂಗ... ಕದಂಬ... ಗುಗ್ಗುಲ... ಸಾಲ... ತಿಲಕ ಔದುಂಬರಾದಿ ದ್ರುಮಕುಲವನು ವಹ್ನಿ ಆಲಿಂಗಿಸಿತು... ವಹ್ನಿಭೂಪತಿಯ ಪಾಳಯ ಕೂಡೆ ಸುಳಿ ಸುಳಿದು ಶಶಿಕಾಂತಮಯದ ಅಗ್ಗಳದ ವೇದಿಕೆಗಳಲಿ... ನೀಲದ ನೆಲೆಯ ಚೌಕಿಗೆಗಳಲಿ... ಲತಾವಳಿಯ ಮಂಟಪದಲಿ... ಲಲಿತ ಸೌಧದ ಚಾರುಚಿತ್ರಾವಳಿಯ ಮೇಲ್ಕಟ್ಟುಗಳ ಭವನಂಗಳಲಿ ಬಿಟ್ಟುದು... ಧರಣಿಪತಿ ಕೇಳ್, ದಳ್ಳುರಿಯ ಬೆಳ್ಳಾರವಲೆಗಳಲಿ ಶರಭ... ಮೃಗಪತಿ... ಕರಿ... ಕಳಭ... ಶಾರ್ದೂಲ... ಸೂಕರ... ಕರಡಿ... ಕಾಸರ... ಶಲ ಮೃಗಾವನ... ಖಡ್ಗ... ಗೋಮಾಯು... ಎರಳೆ... ಮೊಲ... ಸಾರಂಗ... ವಾನರನು... ಉರು ಕುರಂಗ ಪ್ರಮುಖ ಮೃಗಕುಲವು ಉರುಬಿ ಬಿದ್ದುದು... ಬಿಗಿದ ಕೇಸುರಿ ಕಣ್ಣಿವಲೆಗಳಲಿ ಶುಕ... ಮರಾಳ... ಮಯೂರ... ಟಿಟ್ಟಿಭ... ಪಿಕ... ಚಕೋರ... ಕಪೋತ... ವಾಯಸ... ಬಕ... ಪದಾಯುಧ... ಚಕ್ರವಾಕ... ಕಳಿಂಗ... ಕಲವಿಂಕ... ಕುಕಿಲ... ಸಾರಸ... ಕಾಕರಿಪು... ಚಾತಕ... ಭರದ್ವಾಜಾದಿ ಪಕ್ಷಿ ಪ್ರಕರ ಬಿದ್ದುದು... ಉರಿಯೊಳಗೆ ಹರಡೆ ಗೀಜಗ... ಮರಗೊರಲೆ... ಕಾಬುರುಲೆ... ಲಾವುಗೆ... ಗೌಜು... ಪಾರಿವ... ನೊರಲೆ... ಸಾಳುವ... ಚಿಲಿಮಿಲಿಗ... ಚೆಂಬೋತ... ಮೀನ್ಬುಲಿಗ...

ಮರಕುಟಿಗ... ಕಬ್ಬಕ್ಕಿ... ಕೊಟ್ಟುಗವರಲೆ... ಕೊಂಚೆ... ಕಪಿಂಜ... ಗಿಂಚಲು... ಗರಿಗ ಮೊದಲಾದ ಅಖಿಳ ಖಗಕುಲ ಬಿದ್ದುದು... ಝುಳಕೆ ತಿಳಿಗೊಳದ ಉದಕ ಕಾದು ಉಚ್ಛಳಿಸಿದವು... ತನಿಗುದಿದು ಮತ್ಸ್ಯಾವಳಿಗಳು... ತುಂಬಿಗಳು ಸಹಿತ ಅಂಬುಜದ ಎಸಳು ಸೀದವು... ಬಿದ್ದ ಕಿಡಿಗಳಲಿ ಚಾರು ಚಂದ್ರೋತ್ಪಳ ರಚಿತ ಸೋಪಾನ ರತುನಾವಳಿಯ ರಾಶಿಗಳು ಹಿಳಿದು ಸಿಡಿದವು... ಇದ್ದಲಾದವು... ಒಣಗಿಲು ಹೊದರಿನಲಿ ಇಟ್ಟಣಿಸಿ ಛಿಟಿಛಿಟಿಸಿ ಶಿಖಿ ಪುಟವಿಟ್ಟುದು... ಮಿಗೆ ತೊಟ್ಟ ಕಬ್ಬೊಗೆ ಝುಗೆಯ ಹೊರಳಿಯ ಕಿಡಿಯ ಗಡಣದಲಿ ಹುಟ್ಟಿದ ಉರಿ ಹೆಮ್ಮರನ ಸುತ್ತಲು ಕಟ್ಟಿತು... ಅಲ್ಲಿಯ ತೊಡಕಿನಲಿ ಭುಗಿಲಿಟ್ಟು ಬಹು ಶಾಖೋಪಶಾಖೆಗಳ ತುದಿಗೆ ಕವಿದುದು... ಹೊಗೆಯ ಹಬ್ಬುಗೆ ಸತ್ಯಲೋಕವನು ಉಗಿದುದು... ಉರಿ ನಾಲಗೆಯ ಗರವೊಟ್ಟಗೆಯ ತೊಳಲಿಕೆ ತೆತ್ತೀಸು ಕೋಟಿಗಳ ತೆರಳಿಚಿತು... ದಿವವನು ಹಗಲಗಡಿತಕೆ ಹೊಕ್ಕುದೋ...

ಕಡೆ ಮುಗಿಲ ಕಾಣೆನು... ಎತ್ತಣ ಗಗನಮಣಿ ನಕ್ಷತ್ರ ಚಂದ್ರಮರು ಅರಸ ಕೇಳೆಂದ... ಛಳಿ ಛಿಳಿಲು ಛಿಳಿ ರವದ... ಘುಳು ಘುಳು ಘುಳು ಘುಳ ಧ್ವನಿಮಯದಿ... ಕಪಿಗಳ ಕಿಳಿಕಿಳಾಯತ ರವದಿ... ಮೃಗ ಸಂಕುಳದ ಕಳಕಳದಿ... ಹಿಳಿದು ಉರಿವ ಹೆಬ್ಬಿದಿರ ಗಂಟಿನ ಠಳಠಳತ್ಕಾರದಿ... ದಿಶಾ ಮಂಡಳದ ಮೂಲೆಗಳು ಒಡೆದುದು... ವನದಹನ ಅದ್ಭುತವಾಯ್ತು... ಅರಸ ಕೇಳೈ, ಮುನ್ನ ವಿತಳಕೆ ಗರುಡ ಭಯವಾಯ್ತು ಎಂದು ತಕ್ಷಕನು ನಿಜಸುತನನು ಅಮರೇಶ್ವರನ ಅನುಜ್ಞೆಯಲಿ ಇರಿಸಿದನು... ಇರಲಿರಲು ಆತಂಗೆ ಸುತರಾದರು... ಆ ಉರಗ ವಂಶದೊಳು ಅಶ್ವಸೇನಗೆ ತಕ್ಷಕನ ಸಂತತಿ ವನಾಂತದಲಿ ಹಿರಿದು ಹೆಚ್ಚಿತು... ಆ ಮಹಾವನ ವಹ್ನಿ ಭೂತಸ್ತೋಮ ಸಂಹೃತಿ ಕರ್ಮ ಶೌರ್ಯ ಉದ್ದಾಮವು ಅವಗಾಹಿಸುತ ಬರುತಿರೆ... ಮುಂದೆ ಚೂಣಿಯಲಿ ಧೂಮವು ಹುತ್ತಿನಲಿ ಇಳಿದುದು...

ನಿಸ್ಸೀಮ ಜನಿತ ಜ್ವಾಲೆಗಳ ಝಳವು ಆ ಮಹೋರಗ ಚಯವ ಚುಂಬಿಸಿತು ಅರಸ ಕೇಳೆಂದ... ಹೂಸಿ ಹುತ್ತಿನ ಮಣ್ಣ ರಂಧ್ರಿಸಿ ಫಣಿಕುಲವನು ಕಾಸಿದವು ಎನೆ.... ಧೂತಧೂಮದಲಿ ಕಿಡಿ ಡೊಳ್ಳಾಸದಲಿ ಡಾವರಿಸಿದವು.... ಆಸುರದ ಕಬ್ಬೊಗೆಯ ಕವಚದ ಕೇಸುರಿಗಳು ಒಳಬಿದ್ದುದು.... ಉರಿ ಹೊರ ಸೂಸಿ ಹಾವುಗಳ ಬಲು ಹೊದರ ಹೊರಳಿಗಳ ಹಿಡಿದವು... ಹೆಡೆಯ ಮಣಿಗಳ ಕಂಡು ಸೂಸಿದ ಕಿಡಿಗಳ ಅಹಹಾ ಎನುತ ಶಿರಗಳ ಕೊಡಹಿ ಉರಗಿಯರು ಮರಿಗಳಿಗೆ ಮೈಚಾಚಿ ಮರುಗಿದರು... ಕಡುಹೊಗೆಯ ಕೇಸುರಿಯ ಕಿಡಿಗಳ ಗಡಣದಲಿ ಕೌರೆದ್ದು ಮೈಗಳ ಕೊಡಹಿ ಬಿಸುಸುಯ್ಯುತ್ತ ಅಹಿಗಳು ಉರಿಯೊಳಗೆ ಮುಗ್ಗಿದವು... ಹುದಿದು ಉರಿವ ಹುತ್ತಿನಲಿ ಕೂಳ್ಗುದಿ ಕುದಿದು ಸರ್ಪಸ್ತೋಮ ಮಧ್ಯದೊಳು ಒದೆದು ಅಶ್ವಸೇನನು ಗಗನ ಮಂಡಲಕೆ ಹಾಯಿದನು... ಕೆಂಗಿಡಿಗಳು ಕೆದರಿದವು... ಉರಿಯು ಉಬ್ಬಿದುದು... ಘುಳುಘುಳು ರಭಸ ಮಿಗೆ ಹೆಚ್ಚಿದುದು.... ಈತನನು ಗಗನದಲಿ ತಡವರಿಸಿ ತಬ್ಬಿದುದು... ಉರಿಯ ಗಂಟಲನು ಒದೆದು ಫಣಿ ಮಿಕ್ಕು ಉರವಣಿಸೆ...)

ಅಗ್ನಿದೇವ : ಹಾ... ಹಾ... ಧನಂಜಯ, ಹಾವೊಂದು ಹರಿವುತಿದೆ... ಬಾಯ ತುತ್ತು ಹೋದುದು... ಎನಗೆ ತರಿಸಿಕೊಡು... ಶರವೇಢೆಯನು ವಹಿಲದೊಳು ವಿಸ್ತರಿಸು.

(ಎನಲು... ವೈಶ್ವಾನರನ ಮಾತಿಗೆ ನಗುತ ವಿಜಯ ಗಾಂಡಿವವ ಕೊಂಡನು... ಆವ ಶರಸಂಧಾನವೋ... ಗಗನ ಅವಲಂಬಿಯ ಕೊರಳನು ಎಚ್ಚನು... ಮುಂಡವು ಪಾವಕನ ಮಧ್ಯದಲಿ ಬಿದ್ದುದು... ಆತಂಗೆ ಶಿರದೊಳು ಅಹಿಪತಿಯ ಜೀವವು ಉಳಿದುದು... ಆ ವಿಗಡ ಫಣಿ ನುಡಿದುದು.)

ಸರ್ಪ : ಎಲೆ ಗಾಂಡೀವಿ, ಮರೆಯದಿರು... ಎನ್ನ ಹಗೆಯಲಿ ನಿನಗೆ ಮರಣ.

(ಎನುತ... ಎಂದು ಗಗನದೊಳು ಉಲಿದು... ಫಣಿ ಶಿರವು ಅಂದು ಧರೆಗೆ ಪಾಯ್ದುದು... ಅದು ರಾಧಾನಂದನನ ಬತ್ತಳಿಕೆಯಲಿ ಶರವಾಗಿ ಜಗವರಿಯೆ ಸಂದುದು... ಬಳಿಕ ಇತ್ತಲು ಇಂದ್ರನ ನಂದನದ ಬೇಗೆಯಲಿ ಮಂದಪಾಲನ ಸುತ ಚತುಷ್ಟಯವು ಬದುಕಿತು ಅರಸ ಕೇಳೆಂದ... ಅವು ವಹ್ನಿ ಸೂಕ್ತವನು ಉಚ್ಚರಿಸಿ ತಜ್ವಲನ ಮುಖವನು ಮೆಚ್ಚಿಸಿದವು... ಆ ಮುನಿಯ ಸಂತಾನ ಪಕ್ಷಿಗಳು ಬಿಚ್ಚಿ ಬದುಕಿದವು... ಹೆಚ್ಚಿದ ಉರಿ ಹಬ್ಬುಗೆಯ ಹೊಯ್ಲಲಿ ಬೆಚ್ಚಿ ಮಯನು ಅರ್ಜುನನ ಹೊಗಳಿದು ಕಿಚ್ಚಿನಲಿ ಬದುಕಿದನು ಧರಣೀಪಾಲ ಕೇಳೆಂದ... ಉರಿಯು ಖಗ ಚತುಷ್ಟಯ ಮಯ ಸಹಿತ ಉಗುಳಿತು... ಧನಂಜಯ ಆಜ್ಞೆಯಲಿ ಅಗ್ನಿ ಉಳಿದ ಸಮಸ್ತ ಭೂತಾಳಿಗಳನು ಆಹುತಿಗೊಂಡನು... ಸುರಪತಿ ಒಲಿದು ಪಾರ್ಥಂಗೆ ಗಗನದಿಂದ ಇಳಿತಂದು ಮಗನ ಮನ್ನಿಸಿ... ಅಗ್ಗದ ಗಗನಮಣಿಗೆ ಎಣೆ ಎನಿಪ ಮಕುಟವನು ಕೊಟ್ಟನು... ಇಂದ್ರನು ಹರಿಗೆ ವಂದಿಸಿ ಮಗನನು ಒಲಿದು ಆದರಿಸಿ ಮರಳಿದನು... ಇತ್ತಲು ಇವರು ಇಂದ್ರಪ್ರಸ್ಥ ಪುರವರಕೆ ಭರದಿನ್ ಐತಂದರು... ಅಸುರರಿಪು ಧರಣಿಪತಿಗೆ ಆ ಖಾಂಡವದ ದಳ್ಳುರಿಯ ಹೋಮದ ಹೊಸ ಕಥೆಯ ವಿಸ್ತರಿಸಿ ಭೀಮಾದಿಗಳು ನಲಿಯೆ ಹೇಳಿದನು... ಧಾರುಣೀಶ್ವರರು ಐವರನು ಸುಕುಮಾರ ವರ್ಗವನು... ಆ ಸುಭದ್ರಾ ನಾರಿಯನು... ಪಾಂಚಾಲೆಯನು... ತತ್ಸಕಲ ಬಾಂಧವರ ಸೂರಿಗಳ ಸಚಿವಾದಿ ನೃಪ ಪರಿವಾರವನು ಗದುಗಿನ ವೀರನಾರಯಣ ಪತಿಕರಿಸಿ ದೋರಕಿಗೆ ಹರುಷದಲಿ ಬಂದನು...)

❍

ಬರಹಗಾರ

ಹೆಸರು : ಸಿ.ಪಿ.ನಾಗರಾಜ (1945)

ತಾಯಿ : ಲಕ್ಷ್ಮೀದೇವಮ್ಮ, ಮದ್ದೂರು, ಮಂಡ್ಯ ಜಿಲ್ಲೆ

ತಂದೆ : ಪುಟ್ಟೇಗೌಡ, ಚೆಕ್ಕೆರೆ, ಚನ್ನಪಟ್ಟಣ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ

ಓದು : ಎಂ.ಎ., ಪಿಎಚ್.ಡಿ.,

ಕೆಲಸ : ಕನ್ನಡ ಅಧ್ಯಾಪಕ

1971–72 ಅರ್ಜುನಪುರಿ ಕಾಲೇಜು, ಮದ್ದೂರು, ಮಂಡ್ಯ ಜಿಲ್ಲೆ.

1972–2003 ಭಾರತಿ ಕಾಲೇಜು, ಕಾಳಮುದ್ದನದೊಡ್ಡಿ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ.

2006–2021 ತೇಜಸ್ವಿ ಸ್ನಾತಕೋತ್ತರ ಕೇಂದ್ರ, ಮಹಾರಾಣಿ ಲಕ್ಷ್ಮೀ ಅಮ್ಮಣ್ಣಿ ಮಹಿಳಾ ಕಾಲೇಜು, ಮಲ್ಲೇಶ್ವರಂ, ಬೆಂಗಳೂರು.

ಬರಹ

ಮುದ್ರಿತ ಪುಸ್ತಕಗಳು–27

ನಾಟಕಗಳು

1. ಭಾಗೀರಥಿ
2. ಅಂಬೆ
3. ಹಾವು
4. ಅಂಗಿಬಟ್ಟೆ
5. ಒಂದು ರೂಪಾಯಿ

6. ಕಳ್ಳರಿದ್ದಾರೆ ಎಚ್ಚರಿಕೆ
7. ಹೆಣದ ಹಣ

ಅಂಕಣ ಬರಹ

8. ಮುದ್ದೆಗಂಟು

ವ್ಯಕ್ತಿತ್ವ ಚಿತ್ರಣ

9. ಹಳ್ಳಿಗಾಡಿನ ರೂವಾರಿ–ಜಿ.ಮಾದೇಗೌಡ
10. ಜನಪರ ಚೇತನ–ಡಾ.ಬಂದೀಗೌಡ

ನುಡಿ

11. ಕನ್ನಡ ಬಯ್ಗುಳಗಳ ಓದು–ಪಿಎಚ್.ಡಿ., ಪ್ರಬಂಧ
12. ಬಯ್ಗುಳ ಪದಗಳ ಟಿಪ್ಪಣಿ
13. ಆಣೆ ಪ್ರಮಾಣಗಳು

ಹಳಗನ್ನಡ ಮತ್ತು ನಡುಗನ್ನಡ ಕಾವ್ಯಗಳ ನಾಟಕ ರೂಪಾಂತರ

14. ಪಂಪ ಭಾರತ ಪ್ರಸಂಗ
15. ಪಂಪ ಭಾರತ ಪ್ರಸಂಗ ಓದು–ಪ್ರಥಮಾಶ್ವಾಸ
16. ರನ್ನ ಗದಾಯುದ್ಧ ಕಾವ್ಯ ಪ್ರಸಂಗ ಓದು.
17. ರಾಘವಾಂಕ ಹರಿಶ್ಚಂದ್ರ ಕಾವ್ಯ ಪ್ರಸಂಗ ಓದು
18. ಕುಮಾರವ್ಯಾಸ ಭಾರತ ಓದು–ವಿರಾಟ ಪರ್ವ–ಕೀಚಕನ ಪ್ರಸಂಗ–ಉತ್ತರಕುಮಾರನ ಪ್ರಸಂಗ
19. ಲಕ್ಷ್ಮೀಶ ಕವಿಯ ಸೀತಾ ಪರಿತ್ಯಾಗ ಪ್ರಸಂಗ ಓದು
20. ಕನಕದಾಸರ ರಾಮಧಾನ್ಯ ಪ್ರಸಂಗ ಓದು
21. ಕುಮಾರವ್ಯಾಸ ಭಾರತ ಪ್ರಸಂಗ–ಆದಿ ಪರ್ವ

ವಚನ ಸಾಹಿತ್ಯ

22. ಸರ್ವಜ್ಞ ಮತ್ತು ಅಲ್ಲಮ ವಚನಗಳ ಓದು
23. ವಚನಗಳ ಓದು
    (12ನೆಯ ಶತಮಾನದ ಶಿವಶರಣಶರಣೆಯರ ಆಯ್ದ ವಚನಗಳು)

24. ಬಸವಯುಗದ ವಚನಕಾರರು
(ಆಯ್ದ ವಚನಗಳ ಕಟ್ಟು)

ಕವನಗಳ ಓದು

25. ಕುವೆಂಪು ಕವನಗಳ ಓದು
26. ರವೀಂದ್ರನಾಥ ಠಾಕೂರ್ ಕವನಗಳ ಓದು
27. ಬ್ರೆಕ್ಟ್ ಕವನಗಳ ಓದು.

ಡಿಜಿಟಲ್ ಪುಸ್ತಕಗಳು

1. ಕನ್ನಡ ಸಾಹಿತ್ಯ ಸಂಚಯ
https://cpnagaraj.sanchaya.net
2. ಮೈಲಾಂಗ್–ಕನ್ನಡ ಇ ಬುಕ್ಸ್–ಆಡಿಯೊ ಬುಕ್ಸ್
https://mylang.in
3. ಋತುಮಾನ
https://ruthumana.com

C P Nagaraj-You Tube

ವಿಡಿಯೊ+ಆಡಿಯೊ=ಒಟ್ಟು
392 + 628 =1020

Play List

1. ಸರ್ವಜ್ಞವಚನಗಳ ಓದು–13
2. ಅಲ್ಲಮ ವಚನಗಳ ಓದು–36
3. ಬಸವಣ್ಣ ವಚನಗಳ ಓದು–26
4. ಶಿವಶರಣಶರಣೆಯರ ವಚನಗಳ ಓದು–52
5. ವಚನದಿಂದ ಆಯ್ದ ಸಾಲುಗಳ ಓದು–162
6. ಮುದ್ದೆಗಂಟು–60

7. ಹಳ್ಳಿಗಾಡಿನ ರೂವಾರಿ ಜಿ.ಮಾದೇಗೌಡ–15
8. ಜನಪರ ಚೇತನ ಡಾ.ಬಂದೀಗೌಡ–15
9. ಕುವೆಂಪು ಕವನಗಳ ಓದು–13
10. ರವೀಂದ್ರನಾಥ ಠಾಕೂರ್ ಕವನಗಳ ಓದು–16
11. ಬ್ರೆಕ್ಟ್ ಕವನಗಳ ಓದು – 19
12. ಪಂಪ ಭಾರತ ಪ್ರಸಂಗಗಳು–9
13. ಕನಕದಾಸರ ರಾಮಧಾನ್ಯ ಪ್ರಸಂಗ–1
14. ಲಕ್ಷ್ಮೀಶ ಕವಿಯ ಜೈಮಿನಿ ಭಾರತದ ಸೀತಾ ಪರಿತ್ಯಾಗ ಪ್ರಸಂಗ–6
15. ಕುಮಾರವ್ಯಾಸ ಭಾರತ ಓದು : ಕೀಚಕನ ಪ್ರಸಂಗ–13
16. ಕುಮಾರವ್ಯಾಸ ಭಾರತ ಓದು : ಉತ್ತರಕುಮಾರನ ಪ್ರಸಂಗ–10
17. ಕನ್ನಡ ಬಯ್ಗುಳಗಳ ಓದು : ಪಿಎಚ್.ಡಿ., ಪ್ರಬಂಧ–20
18. ಆಣೆ ಪ್ರಮಾಣಗಳು–10
19. ಸಿ.ಎಚ್.ರಾಜಶೇಖರ : ಸಮಗ್ರ ಬುದ್ಧ ಸಾಹಿತ್ಯ ಮಾಲೆ–30
20. ಡಿ.ಎನ್.ಶಂಕರ ಭಟ್ : ಭಾಷೆಯ ಬಗೆಗೆ ನೀವೇನು ಬಲ್ಲಿರಿ–41
21. ಕೆ.ವಿ.ನಾರಾಯಣ : ನುಡಿಯರಿಮೆ ಬರಹಗಳು–26
22. ಕೆ.ವಿ.ನಾರಾಯಣ : ಕನ್ನಡ ಜಗತ್ತು–ಅರ್ಧ ಶತಮಾನ–91
23. ದೇವನೂರು ಮಹಾದೇವ : ಎದೆಗೆ ಬಿದ್ದ ಅಕ್ಷರ–29
24. ಬಿ.ವಿ.ವೀರಭದ್ರಪ್ಪ–ವೇದಗಳಲ್ಲಿ ಜನಸಾಮಾನ್ಯರು–40
25. ಗೂಗಿ ವಾ ಥಿಯಾಂಗೊ ವೈಚಾರಿಕ ಬರಹಗಳು–13
(ಅನುವಾದ: ಎಚ್.ಎಸ್.ನಾಗಭೂಷಣ)
26. ಮುರಳಿಧರ ಜಗತಾಪ : ಸಮಾಜ ಸುಧಾರಕ ಮಹಾತ್ಮ ಫುಲೆ–27
(ಅನುವಾದ: ಅಕಿಂಚನ)
27. ಬರ್ಟ್ರೆಂಡ್ ರಸೆಲ್ : ಸುಖ ಸಾಧನೆ–64
(ಅನುವಾದ: ಯೋಗನರಸಿಂಹಮ್)

28. ರೈನರ್ ಮಾರಿಯಾ ರಿಲ್ಕ್: ಯುವ ಕವಿಗೆ ಬರೆದ ಪತ್ರಗಳು–10
(ಅನುವಾದ: ಓ.ಎಲ್.ನಾಗಭೂಷಣ ಸ್ವಾಮಿ)

29. ಮಹಾಶ್ವೇತಾದೇವಿಯವರ ಬದುಕು ಬರಹ–26
(ಲೇಖಕರು: ಎಚ್.ಎಸ್.ಶ್ರೀಮತಿ)

30. ಎಸ್.ಶಿವಾಜಿ ಜೋಯಿಸ್ :
ತಥಾಗತ ಬುದ್ಧ ತೋರಿದ ಧರ್ಮಪದ–10

31. ಜಾರ್ಜ್ ಥಾಮ್ಸನ್ : ಮತ ಧರ್ಮ – ಒಂದು ಪ್ರಬಂಧ–10
(ಅನುವಾದಕರು: ಎಚ್.ಕೆ.ರಾಮಚಂದ್ರಮೂರ್ತಿ)

32. ಜಿ.ಎಸ್.ಶಿವರುದ್ರಪ್ಪ : ವಿಮರ್ಶೆಯ ಪೂರ್ವ ಪಶ್ಚಿಮ–31

33. ಜಿ.ಎಸ್.ಶಿವರುದ್ರಪ್ಪ : ಕನ್ನಡ ಸಾಹಿತ್ಯ ಸಮೀಕ್ಷೆ–47

ವಿಳಾಸ: ಸಿ.ಪಿ.ನಾಗರಾಜ, 75, 'ಎ' ಬ್ಲಾಕ್, 5ನೆಯ ಕ್ರಾಸ್
ಕ್ರಿಶ್ಣ ಗಾರ್ಡನ್, ಆರ್.ವಿ.ಕಾಲೇಜು ಅಂಚೆ, ಬೆಂಗಳೂರು– 560 059
ಮೊಬೈಲ್: 9986347521
e-mail: ngy7777@gmail.com

ಕುಮಾರವ್ಯಾಸ ಭಾರತ ಕಾವ್ಯದಲ್ಲಿರುವ ಪಾತ್ರಗಳ ಸಂಭಾಷಣಾ ಭಾಗಗಳನ್ನು ಸಿ.ಪಿ.ನಾಗರಾಜ ಅವರು ಹೊರದೆಗೆದು ನಾಟಕದಂತೆ ಜೋಡಿಸಿಕೊಟ್ಟಿದ್ದಾರೆ. ಈಗಾಗಲೇ ಕನ್ನಡದ ಹಲವು ಕಾವ್ಯಗಳನ್ನು ಈ ಮಾದರಿಗೆ ಅವರು ಅಳವಡಿಸಿದ್ದಾರೆ. ಅದೇ ಮಾದರಿಯ ಕೆಲಸ ಇಲ್ಲಿಯೂ ಮುಂದುವರಿದಿದೆ. ಪದ್ಯಗಳ ರೂಪದಲ್ಲಿ ಕಾವ್ಯವನ್ನು ಓದುವವರಿಗೆ ಈ ನಾಟಕೀಯ ಸಂದರ್ಭಗಳ ಅರಿವಾದರೆ, ಕಾವ್ಯದ ಒಳಸೆಲೆಗಳು ಮತ್ತಷ್ಟು ಚೆನ್ನಾಗಿ ಅರಿವಿಗೆ ಬರುವುದು ಸಾಧ್ಯ. ಈ ಮಾದರಿಯಲ್ಲಿ ಸಿ.ಪಿ.ನಾಗರಾಜ ಅವರು ಓದುಗರಿಗೆ ಅಗತ್ಯವಾಗಿರುವ ಯಾವ ವಿವರವನ್ನೂ ಕೈಬಿಟ್ಟಿಲ್ಲ. ಹಾಗೆಯೇ ಓದುಗರ ಓದಿಗೆ ಅನಗತ್ಯವಾದ ವಿವರಗಳನ್ನು ಸುಮ್ಮನೆ ತುಂಬಿಸಲು ಕೂಡ ಹೋಗಿಲ್ಲ. ಇದು ಸೂಕ್ತವಾದ ಬಗೆಯೆಂದು ತಿಳಿದಿದ್ದೇನೆ. ಈ ಕೆಲಸವನ್ನು ಕೈಗೊಂಡಿರುವ ಸಿ.ಪಿ.ನಾಗರಾಜ ಅವರನ್ನು ಕುಮಾರವ್ಯಾಸನ ಓದುಗರ ಪರವಾಗಿ ಅಭಿನಂದಿಸುತ್ತೇನೆ

ಕೆ.ವಿ.ನಾರಾಯಣ

ನಾಗು ಸ್ಮಾರಕ ಪ್ರಕಾಶನ, ಬೆಂಗಳೂರು.

ರೂ.260-/